"ಮಹತ್ವದ ಸುದ್ದಿ"

"ಭಾಸ್ಕರ್" ರವರ

ಮನಸೊಂಪಿನ ಕಿವಿಗಿಂಪಿನ ಕಣ್ತಂಪಿನ
ಚಲನ ಚಿತ್ರ

ನಾಟ್ಯ ರಾಣಿ

ಶ್ರೀ ವಸುಂಧರಾದೇವಿ ಮತ್ತಿತರರು
ಹಿಂದೆಂದೂ ಒಟ್ಟಿಗೆ ಸೇರದ ತಾರಾಗಣ

ಸಂಗೀತ ಮತ್ತು ಸಾಹಿತ್ಯ	ಸ್ಟೂಡಿಯೋ	ಕಲಾನಿರ್ದೇಶಕರು,
ಕಂಬದಾಸನ್.	ಜೆಮಿನಿ.	ಶೇಖರ್.

ನಿರ್ದೇಶಕರು :
ಶ್ರೀ. ಬಿ. ಎನ್. ರಾವ್.

ಭಾಸ್ಕರ್ ಪಿಕ್ಚರ್ಸ್,

ಗಾಂಧಿನಗರ : : : ಬೆಂಗಳೂರು ಸಿಟಿ.

ಕರ್ತವ್ಯ ಕರ್ಮದಲ್ಲಿ ತನ್ನ ಬಾಳನ್ನು ಸವೆದು ಸುತ್ತಲ ಸಮಾಜದ ಬಾಧೆಗಳನ್ನು
ಸಹಿಸಿ ಶಾಂತಿ ತಾಳ್ಮೆಯ ಸಹನೆಗಳಲಿ ಜೀವನ ಕಳೆದು ಜನರ
ಪಾಪವನೀಗೆ ತಾ ದಾರಿ ತೋರಿ........

ಅಮರಳಾದ ಕನ್ನಡನಾಡಿನ ಸಾಧ್ವೀಮಣಿಯ

—● **ದಿವ್ಯಚರಿತ್ರೆ** ●—

ಹೇಮರೆಡ್ಡಿ ಮಲ್ಲಮ್ಮ

(ಗುಬ್ಬಿಫಿಲ್ಮ್ಸ್‌ರವರ ಕನ್ನಡಚಿತ್ರ)



— ತಾರಾಗಣ —

ಬಿ. ಜಯಮ್ಮ, ವಿನೋದ ರತ್ನಾಕರ ವೀರಣ್ಣ
ಅಭಿನವಭಕ್ತಶಿರೋಮಣಿ ಸಿ. ಬಿ. ಮಲ್ಲಪ್ಪ,
ಹೊನ್ನಪ್ಪ ಭಾಗವತರ್

ನಿರ್ದೇಶಕರು :

ಎಸ್. ಸೌಂದರರಾಜನ್

ಮದರಾಸು ನ್ಯೂಟೋನ್ ಸ್ಟುಡಿಯೋಸಿನಲ್ಲಿ ತಯಾರಾಗುತ್ತಿದೆ.

Sole Distributors :—

THE KARNATAKA FILMS LTD.,

GANDHINAGAR BANGALORE CITY.

KATAKA

ಮೊದಲ ತೊದಲ್ನುಡಿ

ಇಂದು ಕೊರವಂಜಿಯ ನಾಲ್ಕನೆಯ ಹುಟ್ಟಿದಹಬ್ಬ. ಯುದ್ಧ ಶಿಶುವಾದರೂ ತಕ್ಕಮಟ್ಟಿಗೆ ಬೆಳೆದಿದ್ದಾಳೆ. ಯಾವ ತಾಯ್ತಂದೆಗಾದರೂ ಮಗುವು ಚೆನ್ನಾಗಿ ಬೆಳೆದಿದೆ ಎಂದು ಹೇಳಲು ಬಾಯಿ ಬರುತ್ತದೆಯೇ? ಇನ್ನೂ ಚೆನ್ನಾಗಿ ಬೆಳೆಯಲಿ ಎಂಬ ಹಿನ್ನೆಲೆಯ ಆಶೆ ಇದ್ದೇ ಇರುತ್ತದೆ. ಹಾಗಾಗಿ ಚೆನ್ನಾಗಿ ಬೆಳೆದಿದೆ ಎಂದು ಹೇಳುವುದಿಲ್ಲವಾದರೂ, ಖಾಯಿಲೆ ಕಸಾಲೆ ಇಲ್ಲದೆ ಇದೆ ಎಂದು ಹೇಳಬಹುದು. ಈ ಬೆಳೆವಣಿಗೆಗೆ ಓದುಗಾರರು, ಬರಹಗಾರರು, ಜಾಹೀರಾತುಗಾರರು, ವ್ಯಂಗ್ಯ ಚಿತ್ರಲೇಖಕರೂ, ಮುಕ್ತಹಸ್ತ, ಬಿರಿದ ಕಂಠದಿಂದ ಮಾಡಿದ ಸಹಾಯವೇ ಕಾರಣ. ಕೊರವಂಜಿಯು ಇವರೆಲ್ಲರಿಗೂ ತಲೆ ಮಣಿದು ವಂದಿಸುತ್ತಾಳೆ.

ಖಾಕಿ ಧರಿಸಿದಾಗ ಕೊರವಂಜಿಯು, ವಿಜಯ ಪತಾಕೆಯನ್ನು ಹಾರಿಸುತ್ತೇನೆಂದೂ, ಅಲ್ಲಿನ ತನಕ ಖಾಕಿಯ ಹೊರತು ಬಿಳಿ ಕಾಗದದ ಮೇಲೆ ಬರಲಾರಳೆಂದೂ ಪಣ ತೊಟ್ಟಿದ್ದಳು. ಇಂದು ಬಿಳಿಯ ಉಡುಪಿನಲ್ಲಿ ರಂಗು ರಂಗಿನಲ್ಲಿ ಬಂದಿದ್ದಾಳೆ. ಅಂದಮೇಲೆ ಇಷ್ಟರಲ್ಲೇ ಶಾಂತಿ ಏರ್ಪಡಿಸುತ್ತೆಂಬುದು ನಿರ್ವಿವಾದ.

ಹೂಣ ಶಿಕ್ಷಣಾರ್ಥಂ. ನಗೆಬಾಣ ಹಾಕಲಾರ್ಥಂ ಕೊರವಂಜಿಃ.

ಶಾಂತಿ ಸೂಚಕ ಉಡುಪಿನಲ್ಲಿ ಈ ರೀತಿ ಧೃಡಕಾಯಳಾಗಿ ಬರಲು ಕೊರವಂಜಿಗೆ ನೆರವಾದ ಸಿವಿಲ್ ಸರಪರಾಜು ಕಂಟ್ರೋಲರಿಗೂ ಅವರ ಬಲಗೈಯ್ಯಂತಿರುವ ಅಸಿಸ್ಟೆಂಟ್ ಕಂಟ್ರೋಲರಿಗೂ, ಚಿರ ಋಣಿಗಳು ನಾವು. ನಾಲ್ಕಾರು ಜನರು ತುಸ ಹೊತ್ತಾದರೂ ನಮ್ಮೊಡನೆ ನಕ್ಕರೂ,—ನಮ್ಮನ್ನು ನೋಡಿ ನಕ್ಕರೂ ಪರವಾಗಿಲ್ಲ, ಆ ಸವಿ ಹೊತ್ತನ್ನೆಸಗಿದ ಪುಣ್ಯ ಅಥವಾ,........ವು, ನಮಗೆ ಸೇರಿದ್ದಾದರೂ ಅದಕ್ಕೆ ನೆರವಾದ ಕಂಟ್ರೋಲರೂ ಸ್ವಲ್ಪಮಟ್ಟಿಗೆ ಬಾಧ್ಯರು.

ರತ್ನಸಿಂಹಾಸನಾಧೀಶ್ವರರಾದ, ನಮ್ಮನ್ನಾಳುವ ಶ್ರೀ ಜಯಚಾಮರಾಜೇಂದ್ರ ಒಡೆಯರ ವರ್ಧಂತ್ಯುತ್ಸವವು ಇಷ್ಟರಲ್ಲೇ ವೈಭವದಿಂದ ನಡೆಸಲ್ಪಡುವುದು. 'ಚಿರಮಭಿವರ್ಧತಾಂ ಯದುಸಂತಾನ ಶ್ರೀ' ಎಂದು ಮನಸಾರೆ ಹಾರೈಸುತ್ತೇವೆ.


ಈ ಬಾರಿ ಅಧಿಕ ಯುಗಾದಿ. ಈ ದುರ್ಭಿಕ್ಷದಲ್ಲಿ ಅಧಿಕ ಮಾಸವೇ, ಎನ್ನ ಬಹುದು. ಅಧಿಕ ಯುಗಾದಿಯ ವೇಳೆಗೆ ಲೋಕದಲ್ಲಿ ಶಾಂತಿಯೇರ್ಪಾಡಾಗಬೇಕಿತ್ತು. ನಾವು ಯೋಚಿಸಿದುದೇ ಒಂದು. ದೈವವು ಯೋಚಿಸಿದುದೇ ಒಂದು. ಹಾಗಾಗಿ ಅಧಿಕ ಯುಗಾದಿಗೆ ಶಾಂತಿ ಲಭಿಸಲಿಲ್ಲ. ಆದರೆ ನಮ್ಮ ಹಾರೈಕೆಗೆ ಮನ್ನಣೆ ಇತ್ತು ಜಗದೀಶನು ಎರಡು ಯುಗಾದಿಯನ್ನು ಕೊಟ್ಟ. ಈ ವೇಳೆಗೆ ಕೊರವಂಜಿಯ ತುಂಬು ಸಂಚಿಕೆಯೂ ಶಾಂತಿಯೂ ಬರುವಂತೆ ಸಹಕಾರವಿತ್ತಿದ್ದಾನೆ. ಇದಕ್ಕಾಗಿ ನಾವು ಜಗದೀಶನಿಗೂ ಚಿರ ಋಣಿಗಳು.

ನಾವಿತ್ತ ಕಷ್ಟನಿಷ್ಠುರಗಳನ್ನೆಲ್ಲಾ ನಗುನಗುತ ಸಹಿಸಿಕೊಂಡು ಹಗಲೂ ರಾತ್ರಿ ದುಡಿದು ಈ ಸಂಚಿಕೆಯು ಈ ವೇಳೆಗೆ ಬರುವಂತೆ ಸಹಾಯ ಮಾಡಿದ ಶ್ರೀಮಾನ್ ಬಿ. ಎಸ್. ಅಯ್ಯಂಗಾರ್ ಮತ್ತು ಇವರ ಕುಮಾರರಾದ ಶ್ರೀ ಗರುಡಾಚಾರ್ಯ ರನ್ನು ನಾವು ಎಷ್ಟು ವಂದಿಸಿದರೂ ತೀರದು. ಅಲ್ಲಲ್ಲಿ ಒಂದೆರಡು ತಪ್ಪು ನೆಪ್ಪು ಗಳಿವೆ. ಹೌದು, ಆದರೆ ತಪ್ಪು ಮಾಡುವುದು ಮಾನವತ್ವದ ಕುರುಹಲ್ಲವೇ?

ಮೊಳೆಗಳನ್ನೆಲ್ಲಾ ಜೋಡಿಸಿ, ಮೊದಲ ಸಲ ಒತ್ತಿದ ಪ್ರತಿಯನ್ನು (ನಿಮ ಗರ್ಭವಾಯಿತೇ ಇದು?) ನಾವು ಸರಿಪಡಿಸಲೋಸುಗ ಓದಿದಾಗ ಹಲವಾರು ಮುದ್ರಾ ರಾಕ್ಷಸರಿದ್ದರು. ನಾವು ಮನದಣಿಯ ನಗುವಂತೆ ಮಾಡಿದರು. ಈ ನಗೆಯನ್ನು ಓದುಗರಿಗೆ ಹಂಚಲು ಧೈರ್ಯವಿಲ್ಲದೆ, ಅವುಗಳನ್ನು ಸರಿಪಡಿಸಿದ್ದೇವೆ. ಇನ್ನು ಮುಂದೆ, ಆಗಿಂದಾಗ್ಯೆ ಈ ಮುದ್ರಾರಾಕ್ಷಸನ ಹಾವಳಿಯನ್ನು ಆರಿಸಿಕೊಡಬೇಕೆಂದು ನಿರ್ಧರಿಸಿದ್ದೇವೆ. ಇಡೀ ಕರ್ಣಾಟಕದ ಮೊಳೆ ಜೋಡಿಸುವವರೆಲ್ಲಾ ನಮಗೆ ನೆರ ವಾಗುವರೆಂದು ನಂಬಿಕೆ.

ಕಡೆಯದಾಗಿ, ಕರ್ಣಾಟಕದ ಓದುಗರಿಗೆಲ್ಲಾ, ಜಾಹೀರಾತುದಾರರಿಗೆಲ್ಲಾ, ಲೇಖನಕಾರರಿಗೆಲ್ಲ, ಹೊಸ ವರುಷವು ಶುಭದಾಯಕವಾಗಲೆಂದೂ, ಸಕಲ ಸುಖ ಸಂಪತ್ತುಗಳನ್ನೀಯಲೆಂದೂ, ಅಪುತ್ರರಿಗೆ ಪುತ್ರರಾಗಲೆಂದೂ, ಬಹು ಪುತ್ರರಿಗೆ ಬ್ರಹ್ಮನು ಸುಮ್ಮನಾಗಲೆಂದೂ ಈ ನಿಜ ಚೈತ್ರದ ಯುಗಾದಿಯ ದಿನ, ಮಹದೇವ ನಲ್ಲಿ ತಲೆಬಾಗಿ, ತುಂಬಿದ ಹೃದಯದಿಂದ ಮೊರೆಯಿಡುತ್ತೇವೆ.

" ಎಲ್ಲರಿಗೂ ಸುಖ ಶಾಂತಿಗಳು ಲಭಿಸಲಿ "



ಸಂಪುಟ ೪] ಕೊರವಂಜಿ—ಏಪ್ರಿಲ್ ೧೯೪೫ [ಸಂಚಿಕೆ ೧

ಯುಗಾದಿ ಸಂಚಿಕೆ

ಕುಹಕಿಡಿಗಳು

ನಮ್ಮ ದೇಶದಲ್ಲಿ ಎಲ್ಲರೂ ದುಡಿಯಬೇಕು ಇಲ್ಲವೇ ಉಪವಾಸ ಬಿದ್ದಿರಬೇಕು ಎಂಬ ನಿಯಮವನ್ನು ಜಾರಿಗೆ ತರುವ ಉತ್ಸಾಹದಲ್ಲಿ ಎರಡನ್ನೂ ಮಾಡಿಸುತ್ತಿದ್ದಾರಂತೆ.

✦ ✦ ✦

ಕೋಪ ಬಂದ ಗಂಡನು ಹೆಂಡತಿಯನ್ನು ತೀವ್ರ ತಮಿಳಿನಲ್ಲಿ ಮಾತನಾಡಿಸಿದನಂತೆ.

—ರೇಗಿದ ಗಂಡಂದಿರು ಏನುಮಾಡುವುದಕ್ಕೂ ಹೇಸರು.

✦ ✦ ✦

ಮೊನ್ನಿನ ದಿನ ತಾಲ್ಲೂಕು ಕಛೇರಿಗೆ ಹೋಗಿದ್ದ ಕಾರ್ಮಿಕ ಮುಖಂಡನೊಬ್ಬನು, ಅಲ್ಲಿ ಅಲುಗಾಡದೆ ಕುಳಿತಿದ್ದ ತೂಕಡಿಸುವ ನೌಕರರನ್ನು ನೋಡಿ "ಯಾಕ್ರೀ, ಒಳಗೆ ಕುಳಿತು ಮುಷ್ಕರ. ಏನುಕಾರಣ?" ಎಂದು ಕೇಳಿದನಂತೆ.

✦ ✦ ✦

ಬ್ರಾಹ್ಮಣರ ಕೇರಿಯಲ್ಲಿ ಒಂದೇ ರಾತ್ರಿ ಒಬ್ಬ ಕಳ್ಳನು ಇಪ್ಪತ್ತು ಮನೆಗಳನ್ನು ಹೊಕ್ಕನಂತೆ.

—ಮನೆಗಳ ಅಭಾವವು ಕಳ್ಳರಿಗಿನ್ನೂ ತಟ್ಟಿದಂತಿಲ್ಲ.

✦ ✦ ✦

ಶಿಲಾಪ್ರತಿಮೆಗಳು ಹೊಸದಾಗುವಂತೆ ಒಂದು ವಿಧಾನವನ್ನು ಒಬ್ಬಾತನು ಕಂಡುಹಿಡಿದಿದ್ದಾನಂತೆ.

—ಆತನಿನ್ನೂ ಬದುಕಿದ್ದಾನೆ,

✤ ✤ ✤

ನಾನೊಬ್ಬ ಮೂಗಿಯನ್ನು ಮದುವೆಯಾದೆ ಎಂದು ಒಬ್ಬ ನಾಗರೀಕನು ವ್ಯಸನಪಟ್ಟನಂತೆ.

—ಅಂತಹಾ ಗಂಡನಿಗೆ ಅಂತಹಾ ಒಳ್ಳೆಯ ಭಾರ್ಯೆಯು ಸಿಗಬಾರದಿತ್ತು.

✤ ✤ ✤

ಜನಾಬ್ ಜಿನ್ನಾರವರಿಗೆ ದೇಹಾಲಸ್ಯವಂತೆ. ಗಾಂಧೀಜೀಯವರ ದೇಹ ಸ್ಥಿತಿಯೂ ಸಮರ್ಪಕವಾಗಿಲ್ಲ—ಅದಕ್ಕಾಗಿಯೇ ವೇವೆಲ್ಲರು ಇಂಗ್ಲೆಂಡಿಗೆ ಹೋಗಿ ದೇಶದ ಪರಿಸ್ಥಿತಿಯನ್ನು ಸರಿಪಡಿಸಲೆತ್ನಿಸುತ್ತಿದ್ದಾರೆ ಎಂಬುದು ಸುಳ್ಳಂತೆ.

✤ ✤ ✤

ವಿಜಯಲಕ್ಷ್ಮಿ ಪಂಡಿತರ ಅಮೇರಿಕಾದ ಪ್ರವಾಸಕ್ಕೆ ಜಪಾನೀಯರು ಹಣ ಕೊಟ್ಟರು ಎಂಬುದನ್ನು ಬೆವರ್ಲಿ ನಿಕೊಲಸ್‌ನ ಕಡೆಯವರು ಕಂಡು ಹಿಡಿದಿದ್ದಾರಂತೆ.

✤ ✤ ✤

ಜಪಾನ್ ಚಕ್ರವರ್ತಿಗಳು ತಮ್ಮ ಸಹೋದರರನ್ನು ದೇವಸ್ಥಾನಗಳಿಗೆ ಪ್ರತ್ಯೇಕ ವಿಜಯ ಪ್ರಾರ್ಥನೆಮಾಡಲೋಸುಗ ಕಳುಹಿಸಿರುವರಂತೆ

—ಸಂಕಟಬಂದರೆ ವೆಂಕಟರಮಣ. ಅಂದಮೇಲೆ ಚಕ್ರವರ್ತಿಗಳಿಗೆ ತಿರುಪತಿಯು ಖಂಡಿತ.

✤ ✤ ✤

ಹಿಂದೂಸ್ಥಾನದ ಕೇಂದ್ರ ಮಂತ್ರಿ ಮಂಡಳದಲ್ಲಿ ಇಪ್ಪತ್ತು ಜನ ಸಚಿವರಿರ ಬೇಕೆಂದು ಕೆಲವರ ಸಲಹೆಯಂತೆ.

—ನಮ್ಮ ದೇಶದಲ್ಲೂ ಹೀಗಾಗಬಾರದೆ— ನಮಗೂ ಒಂದುವೇಳೆ ದೆಸೆ ತಿರುಗಿದರೂ ತಿರುಗಬಹುದು—

✤ ✤ ✤

" ಇನ್ನುಮೇಲೆ ವಿಶ್ವಶಾಂತಿ ಬೇಕು " ಎಂದೊಂದು ಹಾಡನ್ನು ತಯಾರಿಸಿರುವರಂತೆ ಆಗಲೇ — ಜರ್ಮನಿಯಲ್ಲಿ—

ಅದನ್ನು ಹಾರ್ಮೋನಿಯಮ್ಮಿನ ಮೇಲೆ ಬಾರಿಸುತ್ತಾರಂತೆ.

✤ ✤ ✤



ಅವರೇ ಮೊನ್ನೆ ಚುನಾವಣೇಲಿ ಠೇವಣಾತಿ ಕಳೆದುಕೊಂಡವರು.

ಉ ರಿ ಗಾ ಳು

ಸಾನ್‌ಫ್ರಾನ್ಸಿಸ್ಕೊ ಮಹಾ ಸಮ್ಮೇಳನಕ್ಕೆ ಹೋಗಲಿರುವ ಭಾರತೀಯ 'ಪ್ರತಿನಿಧಿ'ಗಳು ಆಗಲೇ ಸರ್ವಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವರಂತೆ... ಅಂದರೆ, ಬ್ರಿಟಿಷ್ ಪ್ರತಿನಿಧಿಗಳು ಕೈ ಎತ್ತಿದಂತೆಲ್ಲ ನಾವೂ ಕೈ ಎತ್ತುವ ಕವಾತು ಮಾಡುತ್ತಿರುವವರು ತಾನೆ ?

◆ ◆ ◆

ಬಟ್ಟೆ ಸರಪರಾಜು ಮಾಡುವಾಗ ಪ್ರತಿಯೊಬ್ಬ ಭಾರತೀಯನಿಗೂ ೧೨ ಗಜ ಬೇಕೆ, ಅಥವಾ ೧೦ ಸಾಕೆ ಎಂಬ ಪ್ರಶ್ನೆ ಎದ್ದಿದೆಯಂತೆ....ಅದು ಅಕ್ಕಿ ಸರಪರಾಜಿನ ಮೇಲೆ ಹೋಗುತ್ತೆ !

◆ ◆ ◆

ಯುದ್ಧಾನಂತರ ಜರ್ಮನರನ್ನು ನಿರ್ವೀರ್ಯ ಮಾಡಲು ಇಂಡಿಯಾದ ಆಡಳಿತದಲ್ಲಿ ನುರಿತ ಕೆಲವು ಅಧಿಕಾರಿಗಳನ್ನು ನಿಯಮಿಸಿಕೊಳ್ಳುವರಂತೆ.

◆ ◆

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ ಮುಗಿಯುವತನಕ ಜರ್ಮನಿ ಶರಣಾಗತವಾದ ಸುದ್ದಿಯನ್ನು ಇತ್ತಕಡೆ ಕಳುಹಿಸಬೇಡಿ ಎಂದು ಹಲವು ಪತ್ರಿಕಾಕರ್ತರು ಕೇಳಿಕೊಳ್ಳಲು ಯೋಚಿಸಿರುವರಂತೆ.

◆ ◆ ◆

"ಹಣಕಾಸಿನ ಮಂತ್ರಿ ಸರ್ ಜೆರಿಮಿ ರೈಸ್‌ಮನ್‌ರವರು ಇಂಡಿಯಾವನ್ನು ತಮ್ಮ ದೇಶವೆಂದೇ ಪರಿಗಣಿಸಿದ್ದಾರೆ".

ಸರ್ ಎ. ರಾಮಸ್ವಾಮಿ ಮೊದಲಿಯಾರ್

....ಅದರಿಂದಲೇ ಬಂದಿರೋದು ಈ ಗೋಳು !

◆ ◆ ◆

"ರಾವಣ ಸಂಹಾರವಾದಮೇಲೆ ಸೀತಾಸಮೇತನಾಗಿ ಹಿಂತಿರುಗುವಾಗ ಭರತನಾದ ನಾನು ರಾಮನಿಗೆ ಈ ಪೀಠವನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ".

—ಡಾ|| ಖಾರೆ

....ಪೀಠ ಸರಿ, ಅದರಮೇಲಿನ ಪಾದುಕೆ ರಾಮನದಲ್ಲವಲ್ಲಾ !

◆ ◆ ◆

ಕಳೆದ ಎಂಟುವರ್ಷದ ಚುನಾವಣೆ ಉಪಚುನಾವಣೆಗಳಲ್ಲಿ ಸುಮಾರು ೭೬ ಗಣಪತಿಗಳಿಗೆ ಸೋಲಾಗಿವೆಯಂತೆ....ಅಂದರೆ, ಅವರಿಗೆಲ್ಲ ಆ ಗುರುತಿಟ್ಟುಕೊಳ್ಳಲು ಸುತ್ತಳತೆ ಸಾಲದು ಅಂದಹಾಗಾಯಿತು !

"ಪುರುಷರು ಶೇಕಡಾ ೯೫ ಜನ ಸಹಜವಾಗಿಯೂ ಬಹುಪತ್ನೀ ವಿಲಾಸಿಗಳು" (ಮದ್ರಾಸ್ ಹಿಂದೂ ಸಭೆಯೊಂದರ ವರದಿಯಿಂದ) ...ನಾವು ೫ ಜನ ಸೇರಿಕೊಂಡು ಅವರನ್ನು ಮನೆಯಿಂದ ಓಡಿಸಲೇಬೇಕು.

ಯುದ್ಧ ಮುಗಿದಕೂಡಲೇ ಚರ್ಚಿಲ್ ಮತ್ತು ಅಮೆರಿ ಇಬ್ಬರೂ ಕೆಲಸದಿಂದ ನಿವೃತ್ತರಾಗುವರಂತೆ ... ಸಾಮ್ರಾಜ್ಯದ ಎಲ್ಲಾ ದೇಶಗಳೂ ಮುನ್ನುಗ್ಗಿ ಯುದ್ಧವನ್ನು ಆದಷ್ಟುಬೇಗ ಮುಗಿಸಲಿ ಎಂಬುದಕ್ಕೆ ಇದೊಂದು ಪಿತೂರಿ !

ಬೆಂಗಳೂರು ಮೈಸೂರು ಮುನಿಸಿಪಾಲಿಟಿಗಳು ನಗರವಾಸಿಗಳಿಗೆ ಹೆಚ್ಚು ಹಾಲು ಸಪ್ಲೈಯಾಗುವಂತೆ ಶೀಘ್ರದಲ್ಲೀ ವ್ಯವಸ್ಥೆ ಮಾಡುವರಂತೆ........ಅಂದರೆ ಹೆಚ್ಚು ನಲ್ಲಿಗಳನ್ನು ಇರಿಸುತ್ತಾರೋ ?

"ಕೋರಂ ಇಲ್ಲದೆ ಇದ್ದುದರಿಂದ ಮದ್ರಾಸ್ ಕಾರ್ಪೋರೇಷನ್ನಿನ ಬಡ್ಜೆಟ್ ಅಧಿವೇಶನವನ್ನು ಮುಂದುವರಿಸಲಾಯಿತು"

—ಮದ್ರಾಸ್ ಪತ್ರಿಕೆ.

ಅಂತಹ ಪ್ರಮುಖ ವ್ಯಕ್ತಿಯ ಹೆಸರಿನ ಹಿಂದೆ 'ಶ್ರೀಮಾನ್' ಎಂದು ಸೇರಿಸುವ ಸಭ್ಯತೆಕೂಡ ಇಲ್ಲವಲ್ಲಾ, ಏನು ಹೇಳೋಣ ?

ನಿವೃತ್ತ ಉನ್ನತ ಅಧಿಕಾರಿಗಳೊಬ್ಬರು 'ಋಷಿಪಂಚಮಿ' (Rishi Panchami) ಎಂಬ ಹೆಸರಿನ ತಮ್ಮ ಆತ್ಮಚರಿತ್ರೆಯನ್ನು ಇಷ್ಟರಲ್ಲೇ ಪ್ರಕಟಿಸುವುದಾಗಿ ತಿಳಿಸಿದ್ದರಷ್ಟೆ ; ಆದರೆ, ನೂರಾರು ಮಹಿಳೆಯರ ಹಾಗೂ ಮಹನೀಯರ ಬೇಡಿಕೆಯನ್ನು ಮನ್ನಿಸಿ ಅವರು ಈಗ ಪ್ರಕಟಣ ಕಾರ್ಯವನ್ನು ನಿಲ್ಲಿಸಿರುವರಂತೆ.

ಸ್ನೇಹಿತ : ಲೋ, ಯಾಕೊ ಅವರಿಗೆ ಎಡಗೈಯಲ್ಲೇ ಸಲಾಂ ಹೊಡೆದ ?
ಸೋಮಾರಿ : ಬಲಗೈ ಜೇಬೊಳಗೆ ಇತ್ತು ಕಣೋ !

ದಿಂಬಾಸನೆ

ಮೊನ್ನೆ ರಾತ್ರಿ ಸಿಂಹಾಸನದಮೇಲೆ ಕುಳಿತು, ಮುಗುಳ್ನಗೆಯನ್ನು ಬೀರುತ್ತ ನುಣ್ಣನೆ ಗಲ್ಲವನ್ನು ಎರಡು ಬೆರಳುಗಳಿಂದ ತಡವರಿಸುತ್ತಿದ್ದ ಪ್ರಮೀಳೆಯ ರಾಜನ ಪಾರ್ಟು ದಿಟವಾಗಲೂ ಚೆನ್ನಾಗಿತ್ತು, ನಾಟಕಕ್ಕೆ ಕಳೆಕೊಟ್ಟಿತ್ತು. ಇವತ್ತು ಮಧ್ಯಾಹ್ನ ಅವಳನ್ನು ಬೇಟಿಯಾಗಿ, ಹೊಗಳೋಣವೆಂದು ನಾವಿಬ್ಬರೂ ಅವಳ ಮನೆಗೆ ಹೋದೆವು.

ಸಾಯಂಕಾಲ ಆರುಗಂಟೆ ಹೊತ್ತು. ಸಾಕ್ಷಾತ್ ಪ್ರಮೀಳೆಯು ಮನೆಯಲ್ಲೇ ಇದ್ದಾಳೆ. ಅದೇ ಮುಗುಳ್ನಗೆ, ಅದೆ ಗಲ್ಲದ ತಡವರಿಕೆ. ಆದರೆ ಇಂದು ದಿಂಬಾಸನಾಸೀನಳು ಅಷ್ಟೆ.

ಇದೇನೇ ಪ್ರಮೀಳಾ, ಸಿಂಹಾಸನಾಸೀನಳಾದ ನಿನ್ನನ್ನು ಮೆಚ್ಚಿದ ನಾವು ಹೊಗಳಿ ಹೋಗೋಣವೆಂದು ಬಂದರೆ, ಇಷ್ಟು ಹೊತ್ತಿನಲ್ಲೂ, ದಿಂಬಾಸನಾಸೀನಳಾಗಿದ್ದೀಯಲ್ಲೇ?

'ಹಾಗಲ್ಲಾ ಕಣೇ? ಕುರ್ಚಿಯಮೇಲೆ ಕೂತು ನೋಡಿದ್ದೇನೆ, ಸಿಂಹಾಸನದ ಮೇಲೂ ಕೂತಿದ್ದೇನೆ. ಮೇಜಿನಮೇಲೂ ಕೂತಿದ್ದೇನೆ. ಆದರೆ, ಎಲ್ಲಕ್ಕೂ ಹಿತವಾದುದು ದಿಂಬಾಸನ. ನನ್ನ ಕೊಠಡಿಯಲ್ಲಿ ಎಚ್ಚೆತ್ತಾಗೆಲ್ಲಾ ದಿಂಬಾಸನಳೇ ನಾನು.'

'ಅಲ್ಲವೇ ಮಲಗಿದಾಗ ತಲೆಗೆ ದಿಂಬು ನ್ಯಾಯ. ಕಾಲುದಿಂಬು ಇದ್ದರೂ ಆಯಿತು, ಒರಗುದಿಂಬು ಹಿಂದಿದ್ದರೂ ಸರಿ, ಆದರೆ, ಕುಳಿತುಕೊಳ್ಳಲೂ ದಿಂಬೇ?' ಎಂದೆ.

ಹಾಗಲ್ಲಕಣೇ, ದಿಂಬಿನ ಮಹಾತ್ಮ್ಯೆ ನಿನಗೆ ತಿಳಿಯದು. ದಿಂಬಿನ ಮುಖ್ಯತ್ವವು ನಮ್ಮ ಬಾಳ್ವೆಯಲ್ಲಿ ಎಷ್ಟೆಂಬುದು ಯೋಚಿಸಿ ನೋಡು. ದಿಂಬಿಲ್ಲದೆ ಮಲಗಿದ ನಾಗರಿಕರನ್ನು ನೋಡಿರುವೆಯಾ? ಗಂಧದ ಕೊರಡೋ, ಬಟ್ಟೆಯ ಗಂಟೋ, ಕಡೆಗೆ ಕೈಯನ್ನೇ ಮಡಿಸಿಯೋ ದಿಂಬನ್ನಾಗಿಸಿ ಮಲಗುತ್ತಾರೆ. ಕೆಲವರಿಗೆ ಕೊಳಕೊಳವೆಂದು ಕೊಳೆತ ಬಾಳೆಯ ಹಣ್ಣಿನಂತಹ ದಿಂಬಿರಬೇಕು. ಇನ್ನೂ ಕೆಲವರಿಗೆ, ಆಳರಸರ ಹೃದಯದಂತೆ ಕಲ್ಲಾಗಿರುವ ದಿಂಬೇ ಆಗಬೇಕು. ನನ್ನ ಸೋದರ ಮಾವನಿಗೆ ತೆಳ್ಳಗಿರುವ ನಾಲ್ಕು ದಿಂಬುಗಳಿದ್ದರೇ ನಿದ್ರೆ. ಕಡೆಗೊಮ್ಮೆ ರೈಲು ಪ್ರಯಾಣ ಮಾಡುತ್ತಿದ್ದಾಗ, ಸಹ ಪ್ರಯಾಣೀಕನೊಬ್ಬನು, 'ಸ್ವಾಮಿ, ಯುದ್ಧಕಾಲದಲ್ಲಿ ಒಬ್ಬರೇ ನಾಲ್ಕು ದಿಂಬುಗಳನ್ನು ಉಪಯೋಗಿಸಿದರೆ, ಮಿಕ್ಕವರ ಪಾಡೇನು? ಇನ್ನಮೇಲೆ ಸರ್ಕಾರದವರು ದಿಂಬಿನ ರೇಷನ್ನನ್ನೂ ಶುರುಮಾಡಬೇಕು' ಎನ್ನುವಂತಾಯಿತು—

ನಮ್ಮ ಅತ್ತಿಗೆ ದಿಂಬು ಅವಳ ಹನ್ನೆರಡನೆಯ ವಯಸ್ಸಿನಲ್ಲಿ ಹೊಲಿಸಿದ್ದುದು. ಅಂದರೆ, ಗಂಡನ ಮನೆಗೆ ಬರುವ ಮೊದಲೇ ಆ ದಿಂಬಿನಮೇಲೆ ತಲೆಯಿಡುತ್ತಿದ್ದಳು. ಈಗಲೂ ಅದೇ ದಿಂಬೆ. ಈಗ ಅವಳಿಗೆ 28 ವರ್ಷ ಅಂದರೆ ನೀವೆನ್ನಬಹುದು. ಓಹೋ! ಮೇಣ ಗೌಟದ ದಿಂಬೇನೋ ಈಗ ಎಂದು. ಇಲ್ಲ ಐದು ವರ್ಷಕ್ಕೊಮ್ಮೆ ಅದೇ ಹತ್ತಿಯ ತೂಕ ಹೊಸಹತ್ತಿ ಹಾಕಿಸಿ ಅದೇ ಅಳತೆಗೆ ಹೊಸದಿಂಬು ಮಾಡಿಸು ತ್ತಾಳೆ. ಯಾವ ಕೆಲಸ ಮರೆಯಲಿ, ಇದನ್ನು ಅವಳು ಬೇಸರದೆ ಮಾಡಿಸುತ್ತಾಳೆ. ಒಮ್ಮೊಮ್ಮೆ ನಮ್ಮಣ್ಣನು 'ಲೇ' ನಾನಗಲಿ ಹೋದರೂ, ನಿನಗೆ ದಿಂಬು ಹೋದಷ್ಟು ದುಃಖವಾಗುವುದಿಲ್ಲವೇನೋ' ಎಂದು ಹಾಸ್ಯಮಾಡುತ್ತಾರೆ.

ನಾನೇನು ದಿಂಬಿಗೆ ಧಿಕ್ಕಾರವಿತ್ತಿಲ್ಲ ಅನ್ನು. ಮಲಗುವಾಗ ತಲೆಗೊಂದು ದಿಂಬು ಬೇಕು. ಪಕ್ಕದಲ್ಲಿ ಒಂದು ದಿಂಬು, ಕಾಲಿಗೊಂದು ಕಾಲುದಿಂಬು—ಇವು ಗಳಲ್ಲಿ ಒಂದಿಲ್ಲದಿದ್ದರೂ ನಿದ್ರೆಯೇ ಬಾರದು. ಎಷ್ಟೋ ಬಾರಿ ನನಗೂ ನಮ್ಮ ಯಜಮಾನರಿಗೂ ಈ ದಿಂಬುಗಳ ವಿಚಾರವಾಗಿ ಜಗಳಗಳೇ ಆಗಿ ಹೋಗಿವೆ. ಒಂದು ದಿನ ಈ ದಿಂಬುಗಳನ್ನೆಲ್ಲಾ ಕಸದ ಬುಟ್ಟಿಗೆ ಹಾಕುತ್ತೇನೆಂದು ಅವರು ಹೆದರಿಸು ತ್ತಾರೆ. ಇಲ್ಲಾ ನಿಮ್ಮಹಾಗೆ ದಿಂಬಿಲ್ಲದೆ ನೆಲದಮೇಲೆ ಮಲಗಬೇಕೋ, ಅಥವಾ ಕುರ್ಚಿಯಮೇಲೆ ಕುಳಿತೇ ಕಛೇರಿಯಲ್ಲಿ ನಿದ್ರೆಮಾಡುವಂತೆ ನಾವೂ ಮಾಡಬೇಕೋ ಎಂದು ನಾನು ಮೂದಲಿಸುತ್ತೇನೆ.

'ಈಗ ನೀನು ದಿಟವಾಗಿಯೂ ಹೇಳು, ನೀನು ಎಂತಹ ದಿಂಬು ಎಷ್ಟು ದಿಂಬು ಉಪಯೋಗಿಸುತ್ತೀ?'

'ನನಗೇನೋಮ್ಮಾ ನಮ್ಮತ್ತೆ ಕೊಟ್ಟ ಎರಡು ದುಂಡು ದಿಂಬುಗಳನ್ನೇ ಉಪ ಯೋಗಿಸುತ್ತೇನೆ. ಇದ್ದರೂ ಆಯಿತು, ಇಲ್ಲದೇ ಇದ್ದರೂ ಆಯಿತು. ಹಿರಿಯರು ಕೊಟ್ಟದ್ದು ಅಂತ ಉಪಯೋಗಿಸುತ್ತೇನೆ' ಎಂದೆ.

— ಶ್ರೀ. ಜ. ರಾ. ಶ್ರೀ.

"ಕಾವೇರಿಗೆ ಒಂದು ಟಿಕಿಟ್ ಕೊಡಿ!"

"ಅಯ್ಯೋ! ಕಾವೇರಿ ಅಂತ ಒಂದು ಊರಿಲ್ಲ, ಅಮ್ಮ!"

"ನನಗೂ ಗೊತ್ತು! ನಾನೇನು ಅಂಥ ಹಳ್ಳಿ ಗಮಾರಳಲ್ಲ! ನಾನು ಹೇಳಿದ್ದು ಕಾವೇರಿ ಅನ್ನೋ ಒಂದು ಊರಿಗಲ್ಲ.... ನನ್ನ ಮೊಮ್ಮಗಳಿಗೆ ಒಂದು ಟಿಕಿಟ್ ಕೊಡಿ, ಅಂದೆ, ಅಷ್ಟೆ! ಕೊಡಿ, ಬೇಗ........"



ಅಂದ ಹಾಗೇ—

ಈ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಚುನಾವಣೆ ಮುಗಿಯಿತೇನ್ರಿ ?

ದೊಂಗಲುನ್ನಾರು ಜಾಗ್ರತ

ಅಕ್ಕಿ, ನಕ್ಕರೆ, ರಾಗಿ, ಸೌದೆ, ಎಲ್ಲವನ್ನೂ ಸರ್ಕಾರದವರೇ ಮಾರಾಟ ಮಾಡುವುದಕ್ಕೆ ಶುರು ಮಾಡಿದಾಗಿನಿಂದ, ನನಗೆ ಉಳಿದಿದ್ದು ಬೊಂಬೊಂದೇ ವ್ಯಾಪಾರಕ್ಕೆ. ಹಾಗಾಗಿ ಬೊಂಬೂ ಬಜಾರಿನಲ್ಲಿ ಒಂದಂಗಡಿ ನೋಡಿ, ಬೊಂಬು ಗಳು ಇತ್ಯಾದಿಯನ್ನು ಒಟ್ಟಾಗಿಯೂ ಚಿಲ್ಲರೆಯಾಗಿಯೂ ಮಾರಾಟಮಾಡಲು ಎಣಿಕೆಹಾಕುತ್ತಿದ್ದೆ. ಮೂರು ಸಾವಿರಕ್ಕೆ ಒಂದು ಅಂಗಡಿಯನ್ನೂ ವ್ಯಾಪಾರ ಮಾಡಿದೆ. ಆಗ ನೋಡಿ, ವರ್ಷಕ್ಕೊಮ್ಮೆ, ಯುಗಾದಿ ಬರುವಂತೆ, ಬೊಂಬೂ ಬಜಾರಿಗೆ ವರ್ಷಂಪ್ರತಿ ಬರುವ ಬೆಂಕಿ ಮಳೆ ಬಿತ್ತು. ನಾನು ಕೊಳ್ಳಬೇಕೆಂದಿದ್ದ ಅಂಗಡಿಯೂ ಸುಟ್ಟು ಬೂದಿಯಾಯಿತು. ಅಲ್ಲಿದ್ದ ಅರ್ಧಸುಟ್ಟ ಬೊಂಬು, ಗಳು ಗಳನ್ನೇ ಇದ್ದಿಲು ಎಂದು ಮೂಟೆ ತುಂಬಿ ಮಾರಾಟವೂ ಆಯಿತೆನ್ನಿ. ನಾನೇನೋ ಮದುವೆ ಕಾಲ ಬಂತು, ಚಪ್ಪರಕ್ಕಾದರೂ ಬೇಕು, ಮದುವೇ ಕಾಲ ಮುಗಿಯಿತು ಎಂದರೆ, ಈ ಸಾಂಕ್ರಾಮಿಕ ರೇಷನ್ನು ಇತ್ಯಾದಿ ಗಲಾಟೆ ಇದ್ದೇ ಇರುತ್ತದೆ. ಹೇಗೂ ಗಳುಗಳಿಗೆ ಬೊಂಬುಗಳಿಗೆ ವರ್ಷಾಕಾಲ ಗಿರಾಕಿ ಇರುತ್ತದೆ ಎಂದು ಯೋಚಿಸಿದರೆ ಬೊಂಬಿನ ರಸ್ತೆ ರಸ್ತೇಗೇ ಬೆಂಕಿ ಬೀಳುವುದೇ! ಹಾಗೆಯೇ ಯೋಚಿಸಿದೆ. ಕಾರ್ಮೋಡದ ಅಂಚಿನಲ್ಲೇ ಸ್ಫಟಿಕತೆಯು ಕಾಣಿಸುವುದಲ್ಲವೇ. ಈ ಅನಾಹುತದ ನಂತರದಲ್ಲೇ ನನಗೆ ತೋರಿತು. ಹೇಗಿದ್ದರೂ ಬೊಂಬೂ ಬಜಾರು ಹೊಸದಾಗಿ ನಿರ್ಮಾಣವಾಗ ಬೇಕು. ಹಲವಾರು ಅಂಗಡಿಗಳವರೂ ಹೊಸದಾಗಿ ಉದ್ಯಮ ಸ್ಥಾಪಿಸಬೇಕು. ಈ ಅಂಗಡಿಗಳವರಿಗೇ ಹೊಸದಾಗಿ ಒಟ್ಟಾಗಿ, ಬೊಂಬುಗಳನ್ನು ಸರಪರಾಜು ಮಾಡಿದರೆ, ದೊಡ್ಡ ವ್ಯಾಪಾರವೂ ಆಗುತ್ತದೆ, ಕಷ್ಟವೂ ಕಡಿಮೆ ಎಂದು, ಯೋಚಿಸಿದೆ. ಹೆಚ್ಚಾಗಿ ಬೊಂಬುಗಳು ಸಿಗುವ ಸ್ಥಳವು ರಾಜೀವಪುರ. ಸರಿ ಅಲ್ಲಿಗೆ ಹೋಗಿ, ಅಲ್ಲಿದ್ದ ಮಾಲನ್ನೆಲ್ಲಾ ಮೆಳೆಯಮೇಲೇ ಕೊಂಡು, ಅವನ್ನೆಲ್ಲಾ ಕತ್ತರಿಸಿ ಇಲ್ಲಿಗೆ ರವಾನಿಸಲು ಏರ್ಪಾಡು ಆದಷ್ಟು ಬೇಗ ಮಾಡುವುದೇ ಒಳ್ಳೆಯದು ಎಂದು ನಿರ್ಧರಿಸಿ ನನ್ನ ಕಡೆಯವನೊಬ್ಬನಿಗೆ, ಸುಟ್ಟ ಅಂಗಡಿಗಳವರನ್ನು ಭೇಟಿ ಮಾಡಿ ಅವರುಗಳಿಗೆಷ್ಟೆಷ್ಟು ಬೇಕು ವಿಚಾರಿಸಿ, ಒಂದು ಪಟ್ಟಿಯನ್ನು ತಯಾರಿಸಹೇಳಿದೆ.

ನಾನು ನೇರವಾಗಿ ರಾಜೀವಪುರಕ್ಕೆ ಪ್ರಯಾಣಮಾಡಲು ಅಣಿಮಾಡಿಕೊಂಡೆ ಸ್ವಲ್ಪಮಟ್ಟಿಗೆ ಹಣವನ್ನು ತೆಗೆದುಕೊಂಡು, ಮಿಕ್ಕ ಹಣವನ್ನು ನಮ್ಮೂರು ಬ್ಯಾಂಕಿನಲ್ಲಿಟ್ಟು ಅಲ್ಲಿಂದ ರಾಜೀವಪುರಕ್ಕೆ ಒಂದು "ಹಣ ಕೊಡುವ" ಕಾಗದ ತೆಗೆದುಕೊಂಡು ಹೊರಟೆ.

ರೈಲ್ವೆ ನಿಲ್ದಾಣದಲ್ಲಿ ಟಿಕಿಟು ತೆಗೆದುಕೊಳ್ಳಲು ಹೋದರೆ, ಟಿಕೀಟು ಕಿಟಕಿಯ ಮೇಲೆಯೇ ಒಂದು ದೊಡ್ಡ ಬೋರ್ಡು. "ದೊಂಗಲುನ್ನಾರು ಜಾಗ್ರತ" ಎಂದು. "ಈ ರೈಲ್ವೆಯವರದು ಎಷ್ಟು ಪ್ರಾಮಾಣಿಕತೆ. ತಮ್ಮ ಇಲಾಖೆಯ ಟಿಕೆಟ್ ಮಾರುವವರನ್ನೂ ಪ್ರಯಾಣೀಕರು ನಂಬಕೂಡದೆಂದು, ಪ್ರಯಾಣೀಕರಿಗೆ ಎಚ್ಚರ ಕೊಟ್ಟಿದ್ದಾರೆ'' ಎಂದು ಮನಸ್ಸಿನಲ್ಲಂದುಕೊಂಡು, ಟಿಕೆಟ್ ಕೊಂಡ ನಂತರ, ಬಂದ ಚಿಲ್ಲರೆಯನ್ನು ಹುಷಾರಾಗಿ ಎಣಿಸಿ ನಂತರ ಹಣದ ಚೀಲಕ್ಕೆ ಸೇರಿಸಿ, ಸುರಕ್ಷಿತವಾಗಿ ಹೊರಕ್ಕೆ ಬಂದೆ.

ರೈಲಿನಲ್ಲಿ ಕುಳಿತೆ. ಅಲ್ಲೂ ಒಂದು ಬೋರ್ಡು. ನಾಲ್ಕು ಭಾಷೆಗಳಲ್ಲಿ ಒಂದೊಂದು ಪಂಕ್ತಿ ಬರೆದಿತ್ತು. ನನಗೆ ತಿಳಿದುದು ಎರಡೇ: ಇಂಗ್ಲೀಷು, ತೆಲುಗು. ಇನ್ನೆರಡರಲ್ಲೂ ಅದೇ ವಿಷಯ ಬರೆದಿರಬಹುದು ಎನ್ನಿಸಿತು. ಅಲ್ಲೂ ಅದೇ ಎಚ್ಚರಿಕೆ :

"ದೊಂಗಲುನ್ನಾರು ಜಾಗ್ರತ"

ಇದೇನು ವರಸೆ, ಅಚ್ಚ ಕನ್ನಡ ದೇಶ. ಕನ್ನಡದಲ್ಲಿ ಎಚ್ಚರಿಕೆ ಕೊಡಬಾರದೆ? ತೆಲುಗಿನಲ್ಲಿ ಕೊಡಬೇಕೆ ? ಅಂದರೆ ತೆಲುಗು ದೊಂಗಲು ಹೆಚ್ಚೇ? ಕನ್ನಡ ಕಳ್ಳರಿಲ್ಲವೇ? ಇದ್ದರೂ ತೆಲುಗಿನವರದು ಮೇಲುಗೈಯ್ಯಾಗಬೇಕೆ. ಈ ತರಹ ಯೋಚನೆಗಳು ಕಂಡಾಪಟ್ಟೆ ನುಳಿಯಲಾರಂಭಿಸಿದುವು. ಆ ಮೇಲೆ ಹೊಳೆಯಿತು : ರೈಲ್ವೆ ಹಿರಿಯಧಿಕಾರಿಗಳಲ್ಲಿ ಒಬ್ಬ ಆಂಗ್ಲೇಯ, ಒಬ್ಬ ಉರ್ದು, ಒಬ್ಬ ಮರಾಠಿ, ಒಬ್ಬ ತೆಲುಗ ಒಬ್ಬೊಬ್ಬರ ಭಾಷೆಯಲ್ಲೂ ಎಚ್ಚರಿಕೆ ಇತ್ತಿದ್ದಾರೆ. ಕನ್ನಡಿಗನಿಲ್ಲದ್ದರಿಂದ ಕನ್ನಡದಲ್ಲಿ ಎಚ್ಚರಿಕೆ ಇಲ್ಲ. ಯಾವಾಗಲೂ ಹೀಗೆಯೇ ಅನ್ನಿ. ಸಾರ್ವಜನಿಕರಿಗೆ ಬೇಕಾದುದೇ ಒಂದು, ಆಳಧಿಕಾರಿಗಳು ಕೊಡುವುದೇ ಒಂದು. ಇದಕ್ಕೆಲ್ಲಾ, ಆಳಧಿಕಾರಿಗಳಿಗೆ ಸಾರ್ವಜನಿಕ ಭಾಷೆ ಬಾರದಿರುವುದೇ ಕಾರಣ, ಈ ರೈಲ್ವೆ ಆಳಧಿಕಾರಿಗಳಲ್ಲಿ ತೆಲುಗರೇ ಹೆಚ್ಚು, ಅವರ ಮೇಲೆ ಆಂಗ್ಲೇಯರ ಕೈ. ಅಂದಮೇಲೆ ಸಾರ್ವಜನಿಕ ಭಾಷೆ ಮರೆಯಲ್ಪಟ್ಟರೆ ಆಶ್ಚರ್ಯವೇನು ? ಸಾರ್ವಜನಿಕರ ಹಿತಕ್ಕೆ ಧಕ್ಕೆ ಬಂದರೆ ಏನು ? ಕೂಗುವವರು ಕೂಗಲಿ, ಹೊಡೆದುಕೊಳ್ಳುವವರು ಹೊಡೆದುಕೊಳ್ಳಲಿ, ಆಗುವುದು ಆಗಿಯೇ ಆಗುತ್ತೆ ಇತ್ಯಾದಿ ವೇದಾಂತವೆಲ್ಲಾ ತೋರುತ್ತ ಬಂತು. ಛೇ, ಹೀಗೆ ಯೋಚಿಸಹೋದರೆ ಏನು ಪ್ರಯೋಜನ ? ಎಂದು ಹಾಗೆಯೇ ಮರೆತೆ.

ರೈಲು ಪ್ರಯಾಣ ಮುಗಿಯಿತು. ರಾಜೀವಪುರ ಸಿಕ್ಕಿತು. ಅಲ್ಲಿನ ರೈಲು ನಿಲ್ದಾಣದಲ್ಲೂ ಅದೇ ಬೋರ್ಡು. ಹುಷಾರಾಗಿ ಸಾಮಾನುಗಳನ್ನೆಲ್ಲಾ ಸಾಗಿಸಿಕೊಂಡು, ಹಿಂದೂ ಮಂದಿರ ಒಂದಕ್ಕೆ ಬಂದು ಅಲ್ಲಿನ ಮ್ಯಾನೇಜರನ್ನು ಅವನ ಆವರಣದಲ್ಲಿ ಭೇಟಿಯಾದೆ. ಅನುಕೂಲವಾದ ಕೊಠಡಿಯೊಂದು ಹದಿನೈದು ದಿನಗಳಿಗೆ ಬೇಕೆಂದೆ. ತನ್ನ ಪುಸ್ತಕದಲ್ಲಿ ನನ್ನ ಹೆಸರು ವಿಳಾಸ ಬರೆದುಕೊಳ್ಳ

ಲಾರಂಭಿಸಿದೆ. ಆಗ ಹಾಗೆಯೇ ತಲೆಯೆತ್ತಿದೆ. ಅವನ ತಲೆಯಮೇಲೆ ಗೋಡೆಯಲ್ಲಿ ಒಂದು ಬೋರ್ಡು.

ಸರಿ! ಸರಿಯಾಗಿ ಊಹಿಸಿದಿರಿ. ಅದೇ ಬೋರ್ಡು. ಓಹೋ ಈ ಊರು ಕೂಡ ರೈಲ್ವೆಯಂತೆಯೇನೋ! ಆದರೂ ಎಷ್ಟು ಪ್ರಾಮಾಣಿಕತೆ, ಎಚ್ಚರ ಕೊಟ್ಟು ಕದಿಯುತ್ತಾರಲ್ಲಾ ಎಂದಂದುಕೊಂಡೆ. ಆ ವೇಳೆಗೆ ಕೊಠಡಿಯ ಬೀಗದಕ್ಕೈಯನ್ನು ಒಬ್ಬ ನಾಯರ ಹುಡುಗನಿಗೆ ಕೊಟ್ಟು ಅವನ ಹಿಂದೆ ನನ್ನನ್ನು ಕಳುಹಿಸಿದ. ನನ್ನ ಕೊಠಡಿಗೆ ಹೋಗಿ ಸೇರಿಕೊಂಡೆ. ಅಲ್ಲಿದ್ದ ಕನ್ನಡಿಯ ಮೇಲೆ ಬೋರ್ಡಿತ್ತೋ ಇಲ್ಲವೋ ಹೇಳಲಾರೆ. ಏಕೆಂದರೆ ನೋಡುವುದಕ್ಕೇ ಭಯ ನನಗೆ.

ಅಂದೆಲ್ಲಾ ವಿಶ್ರಮಿಸಿಕೊಂಡು ಮಾರನೆಯ ಬೆಳಿಗ್ಗೆ ಬೊಂಬು ವ್ಯಾಪಾರಕ್ಕೆ ಹೊರಟೆ. ಬೊಂಬಾಧೀಶ್ವರನೆನಿಸಿಕೊಂಡಿದ್ದ ವಹಾಬ್‌ಸಾಬಿ ಅಂಗಡಿಗೆ ಹೋದೆ. ಅವನು ಎಷ್ಟು ಸರಪರಾಜು ಮಾಡುತ್ತಾನೋ ಎಲ್ಲವನ್ನೂ ವಿಚಾರಿಸಿಕೊಂಡೆ. ಗಳುಗಳಿಗೆ ಏನುಮಾಡಲಿ ಎಂದೆ. 'ಛೀ, ಈ ಚಿಕ್ಕ ಪುಟ್ಟ ವ್ಯಾಪಾರಗಳಿಗೆ ನಾನು ಕೈ ಹಾಕುವುದಿಲ್ಲ. ನಾನು ಭಾರಿ ಬೊಂಬುಗಳೊಂದನ್ನೇ ಒಟ್ಟು ವ್ಯಾಪಾರಮಾಡುವುದು' ಎಂದು ವಹಾಬ್‌ಸಾಬಿ ಎಂಜಲುಗಿದು ಹೇಳಿಯೇಬಿಟ್ಟ. ಅವು ಬೇಕಾದರೆ ಕೆಳಗಿನ ಬೀದೀಗೆ ಹೋಗಿ ವಿಚಾರಿಸಿ ಎಂದ—'ನೀವು ತೆಗೆದುಕೊಳ್ಳಬೇಕೆಂದಿರುವ ಮೂವತ್ತು ಸಾವಿರ ರೂಪಾಯಿಗಳ ಬೊಂಬಿಗೆ, ಹತ್ತುಸಾವಿರ ರೂಪಾಯಿ ಮುಂಗಡ ಕೊಡಿ' ಎಂದ. ಸರಿ ಮಧ್ಯಾಹ್ನ ಬ್ಯಾಂಕಿಗೆ ಹೋಗಿ ಹಣ ತೆಗೆದುಕೊಂಡು ತಂದು ಕೊಡುತ್ತೇನೆ ಎಂದು ಹೇಳಿ, ಕೆಳಗಿನ ಬೀದಿಗೆ ಹೊರಟೆ. ಅಲ್ಲಿ ಸಿಕ್ಕಿದ ಮಸ್ತಾನ್‌ಖಾನ್, ಗಳುಗಳಧಿಪತಿ. ಅವನ ಹತ್ತಿರವೂ ಇಪ್ಪತ್ತು ಸಾವಿರ ರೂಪಾಯಿ ಗಳುಗಳ ವ್ಯಾಪಾರ ಮಾಡಿ ಮಧ್ಯಾಹ್ನ ಮುಂಗಡದ ಹಣವನ್ನು ತಂದುಕೊಡುತ್ತೇನೆಂದು ಹೇಳಿ, ನೇರನೇ ಬ್ಯಾಂಕಿಗೆ ಹೋದೆ. ನಮ್ಮೂರಿನ ಬ್ಯಾಂಕಿನ "ಹಣ ಪಾವತಿ"ಯ ಕಾಗದ ತೋರಿಸಿ, ಇಪ್ಪತ್ತುಸಾವಿರ ರೂಪಾಯಿ ಹಣ ಬೇಕು ಎಂದೆ. ಬ್ಯಾಂಕಿನ ಕಾರ್ಯದರ್ಶಿಯು ನಿಮ್ಮ ರುಜುವನ್ನು ರುಜುವಾತು ಪಡಿಸುವರು ಯಾರಾದರೂ ಇದ್ದಾರೆಯೇ ಎಂದು ಕೇಳಿದ.

"ಈ ಊರಿಗೆ ನಾನು ಹೊಸಬ. ಅದಕ್ಕೇ ಈ ಕಾಗದ ತಂದಿದ್ದೇನೆ. ಹೊರಟಾಗಿನಿಂದ ಎಲ್ಲೆಲ್ಲೂ ಎಚ್ಚರಿಕೆ ಕೊಟ್ಟಿದ್ದಾರೆ, 'ದೊಂಗಲುನ್ನಾರು ಜಾಗ್ರತ' ಎಂದು. ನಿಮ್ಮ ಬ್ಯಾಂಕಿನಲ್ಲೇ ಬೋರ್ಡುಗಳು ಹಾಕಿದ್ದೀರಿ. ಅದಕ್ಕಾಗಿಯೇ ಹಣ ತರದೇ ಈ 'ಹಣ ಪಾವತಿ' ಕಾಗದ ತಂದೆ" ಎಂದು ಹೇಳಿದೆ.

'ಅಯ್ಯೋ! ಅದಕ್ಕೇನು ಪರವಾಗಿಲ್ಲ. ಈ ನೌಕರನನ್ನು ನಿಮ್ಮೊಡನೆ ನ್ಯಾಯಾಸ್ಥಾನಕ್ಕೆ ಕಳುಹಿಸುತ್ತೇನೆ. ನ್ಯಾಯಾಧೀಶರ ಮುಂದೆ ನೀವು ಈ ಹೇಳಿಕೆಗೆ ಸಹಿ ಹಾಕಿ. ಆತ ರುಜುವಾತು ಮಾಡುತ್ತಾನೆ. ನಂತರ ಹಣವನ್ನು ನಿಮಗೆ

ಕೊಡುತ್ತೇನೆ," ಎಂದು ಬಹುವಿನಯದಿಂದ ಹೇಳಿ, ನೌ ಕ ರ ನ ನ್ನು ನನ್ನೊಡನೆ ಕಳುಹಿಸಿಕೊಟ್ಟ.

◆ ◆ ◆

ನ್ಯಾಯಾಸ್ಥಾನಕ್ಕೆ ಬಂದೆವು. ನೌಕರನು ನ್ಯಾಯಾಧೀಶನ ಹತ್ತಿರ ಹೋಗಿ ಹೇಳಿದ. ನ್ಯಾಯಾಧೀಶರಂದರು, "ಒಂದು ಅಹವಾಲು ಬರೆದುಕೊಂಡು ಬನ್ನಿ. ನಂತರ ರುಜುವಾತುಮಾಡುತ್ತೇನೆ" ಎಂದು. ನಾನೇ ಒಂದು ಅಹವಾಲು ಬರೆದೆ. ತೆಗೆದುಕೊಂಡು ಹೋಗಿ ಕೊಟ್ಟೆವು. "ಇದಕ್ಕೆ ಹನ್ನೆರಡು ಆಣೆ ಸ್ಟಾಂಪು ಹಾಕಿ ತನ್ನಿ" ಎಂದ. ಹನ್ನೆರಡಾಣೆ ಸ್ಟಾಂಪು ಸಿಕ್ಕಲಿಲ್ಲ. ಹನ್ನೆರಡಾಣೆ ಸ್ಟಾಪು ಕಾಗದ ಕೊಂಡು ಕೊಂಡೆ. ಅದರಮೇಲೆ ಗುಮಾಸ್ತೆ ಕೈಲಿ, ಒಂದು ರೂಪಾಯಿ ತಿಂಡಿಗೆ ಕೊಟ್ಟು ಅಹವಾಲು ಬರೆಸಿದೆ. ನ್ಯಾಯಾಧೀಶನ ಹತ್ತಿರ ತೆಗೆದುಕೊಂಡು ಹೋದೆ. ನ್ಯಾಯಾಧೀಶ ತನ್ನ ಗುಮಾಸ್ತೆಯ ಕೈಲಿ ಕೊಟ್ಟು ನಮ್ಮ ಕೋರ್ಟಿನ ಸ್ಟಾಂಪು ಒತ್ತು ಎಂದು ಹೇಳಿದ.

ಆ ಗುಮಾಸ್ತೆ ಅಹವಾಲನ್ನು ಮೂಸಿ ನೋಡಿದ. "ಸ್ವಾಮಿ ಇದಕ್ಕೆ ಹನ್ನೆರಡು ಆಣೆ ಸ್ಟಾಂಪು ಸಾಲದು. ಇಂಥಾ ನಿಯಮ ಇಂತಹ ಕಲಂ ಪ್ರಕಾರ ಒಂದೂಕಾಲು ರೂಪಾಯಿ ಸ್ಟಾಂಪು ಹಚ್ಚಬೇಕು" ಎಂದ. ನ್ಯಾಯಾಧೀಶನು 'ಹಾಗೇನ್ರೀ, ನಾನೇನೋ ಈ ನ್ಯಾಯಾಸ್ಥಾನಕ್ಕೆ ಹೊಸಬ, ನೀವು ಹೇಳಿದ್ದೆ ದಿಟವಿರಬೇಕು' ಎಂದ. "ಸ್ಟಾಂಪು ಸಿಗುಲ್ಲವಲ್ಲಾ" ಎಂದೆ. "ಸಿಗದೆ ಇದ್ದರೆ ಬೇರೆ ಸ್ಟಾಂಪು ಕಾಗದ ಕೊಂಡುಕೊಂಡು ಬೇರೆ ಅರ್ಜಿ ಬರೆಸಿ" ಎಂದ ನ್ಯಾಯಾಧೀಶ ಸುಲಭವಾಗಿ.

ನಾನು ಬ್ಯಾಂಕಿನ ನೌಕರನ ಕಡೆಗೆ ನೋಡಿದೆ. ಅವನು ಕಣ್ಸನ್ನೆ ಮಾಡಿ ಹೊರಗೆ ಕರೆಕೊಂಡು ಬಂದ ನನ್ನನ್ನು. "ಹೇಗಿದ್ದರೂ ಒಂದಿಷ್ಟು ರೂಪಾಯಿ ಹೆಚ್ಚಾಗಿ ಕೊಡಬೇಕು. ಸ್ಟಾಂಪಿಗೆ ಕೊಟ್ಟು ಬೇರೆ ಬರೆಸಿ ಈ ಮಧ್ಯಾಹ್ನ ಇಲ್ಲಿ ಕಾಲ ಹಾಕುವ ಬದಲು, ಅದೇ ಹಣವನ್ನು ತಿಂಡಿ ಸಮೇತ ನೌಕರ ಗುಮಾಸ್ತೆಗೆ ಕೊಡಬಾರದೇ" ಎಂದ. ನನಗೂ ಇದು ಸರಿಯಾಗಿ ಕಾಣಿಸಿತು. ಹಾಗೆಯೇ ಆಗಲಿ ಎಂದೆ. ನೌಕರನಿಗೆ ತಿಂಡಿ ಕೊಡಿಸಿ ಕೈ ಬೆಚ್ಚಗೆ ಮಾಡಿದೆವು. "ಈ ಸ್ಟಾಂಪು ಕಾಗದದಲ್ಲೇ ಆಗಬಹುದು— ಈ ಕಲಂ ಪ್ರಕಾರ. ಆ ಕಲಂ ಇವರಿಗೆ ಅನ್ವಯಿಸುವುದಿಲ್ಲ" ಎಂದು ನ್ಯಾಯಾಧೀಶರಿಗೆ ಹೇಳಿದ. "ಅದೇಕೆ ಅನ್ವಯಿಸುವುದಿಲ್ಲ?" ಎಂದು ನ್ಯಾಯಾಧೀಶರು ಕೇಳಿಯೇ ಬಿಟ್ಟರು. ಕೆಟ್ಟೆ ನಾನು ಎಂದುಕೊಂಡೆ. ಗುಮಾಸ್ತೆಯು ಸಾಮಾನ್ಯನೇ? "ಅವರು ಈ ದೇಶದವರಲ್ಲ, ಅದಕ್ಕಾಗಿ ಅನ್ವಯಿಸುವುದಿಲ್ಲ" ಎಂದು ನ್ಯಾಯಾಧೀಶರಿಗೆ ನಾಚಿಕೆ ಬರುವಂತೆ ಹೇಳಿಯೇ ಬಿಟ್ಟ.


ಸರಿ, ಎಂದು ನ್ಯಾಯಾಧೀಶರು ಅದೇ ಅಹವಾಲು ಕೈಗೆ ತೆಗೆದುಕೊಂಡು, ತಾವು ಸಹಿ ಹಾಕಲು ಪೇನಾ ತೆಗೆದುಕೊಂಡರು, ಮೂರುಸಾರಿ ಸಹಿ ಹಾಕಿದರೂ, ಕಾಗದದ

ಮೇಲೇ ಗುರ್ತೇ ಬೀಳಲಿಲ್ಲ. "ಶಾಯಿ ಮುಗಿದಿರಬಹುದು, ನನ್ನ ಪೇನಾ ತೆಗೆದು ಕೊಂಡು ಸಹಿ ಹಾಕಿ" ಎಂದೆ. "ಹೌದು" ಎಂದು ನನ್ನ ಪೇನಾ ತೆಗೆದುಕೊಂಡು ಸಹಿ ಹಾಕಿ, ನನ್ನ ಪೇನಾ ತಮ್ಮ ಕಿವಿಹಿಂದೆ ಸಿಕ್ಕಿಸಿಕೊಂಡು, ಅಹವಾಲು ನನಗೆ ಹಿಂತಿರುಗಿ ಕೊಟ್ಟರು. ಅರ್ಜಿಯನ್ನು ಕೈಗತಮಾಡಿಕೊಂಡು ಪೇನಾ ಕೊಡುತ್ತಾ ರೇನೋ ಎಂದು ಅಲ್ಲಿಯೇ ನಿಂತೆ—ಅದರ ಸುದ್ದಿಯೇ ಇಲ್ಲ. ದೊಡ್ಡವರನ್ನ ಹೇಗೆ ಕೇಳುವುದು — ಕೇಳದೆ ಇದ್ದರೆ ಬರುವ ಹಾಗೆಯೇ ಇಲ್ಲವಲ್ಲಾ ಎಂದುಕೊಂಡು ಮೆಲ್ಲಗೆ ಕೆಮ್ಮಿದೆ. ಎರಡು ಸಾರಿ ಕೆಮ್ಮಿದೆ. ನ್ಯಾಯಾಸ್ಥಾನದಲ್ಲಿ ಏನು ಕೂಗಿದರೂ ಕೆಮ್ಮಿದರೂ ಮೂರುಸಾರಿ ಕೂಗಿ ಕೆಮ್ಮಿದರೇ ಉತ್ತರವಲ್ಲವೇ? ಮೂರನೆಯ ಸಾರಿ ಕೆಮ್ಮಿದಾಗ ನ್ಯಾಯಾಧೀಶರು ನನ್ನ ಕಡೆ ತಿರುಗಿದರು. ಸೂಚನೆಯನ್ನು ಈಯ ಲೋಸುಗ ನಾನು ಕಿವಿ ಕೆರೆದುಕೊಂಡೆ. "ಯಾಕಯ್ಯಾ ಏನುಬೇಕು? ಕಿವಿ ಮಧ್ಯಸ್ಥವೇ' ಎಂದರು. "ಅಲ್ಲಾ ಪೆನ್ನಿದೆ ನಿಮ್ಮ ಕಿವಿ ಹಿಂದೆ, ನನ್ನದು ಅದು ಎಂದು ಅರುಹಲು ನಾನು ಕಿವಿ ಕೆರೆದರೆ ಕಿವುಡೇ ಅನ್ನುತ್ತಾನಲ್ಲ ಎಂದು ರೇಗಿತು." "ಇಲ್ಲಾ ಪ್ರಭೋ! ನನ್ನ ಪೇನಾ ನಿಮ್ಮ ಕಿವಿ" ಎಂದೆ, ಓಹೋ! ಎಂದು ಅವರು ಪೇನಾ ತೆಗೆದು ಅರೆಮನಸ್ಸಿನಿಂದ ಹಿಂತಿರುಗಿ ಕೊಟ್ಟರು. ಅದನ್ನು ಮುಚ್ಚಳ ಮುಚ್ಚಿ ಇನ್ನೇನು ಜೇಬಿಗೆ ಇಡಬೇಕು ಅಷ್ಟರಲ್ಲೇ "ಇನ್ನೇನ್ರಿ ನಿಮ್ಮ ಕೆಲಸ ಆಯಿ ತಲ್ಲ. ಹೋಗಬಹುದು ಅಲ್ಲವೇ" ಎಂದು ಪೇನಾ ಕಳಕೊಂಡವರಂತೆ ಮೂದಲಿ ಸಿದರು.

ನನಗೇನೋ ರೇಗಿತು. ನನ್ನ ಕೆಲಸ ಮುಗಿದಿತ್ತು. "ಇಲ್ಲಾ ಪ್ರಭೋ, ಬಡವ ; ಒಂದು ಸೂಚನೆ ಕೊಡಬಹುದಾದರೆ ಕೊಟ್ಟು ಹೋಗೋಣ ಎಂದು ನಿಂತೆ. ಈ ಊರಿಗೆ ಬಂದಾಗಿನಿಂದ ಎಲ್ಲೆಲ್ಲೂ 'ದೊಂಗಲುನ್ನಾರು' ಜಾಗ್ರತ ಎಂದು ಜಾಹೀ ರಾತು ಬೋರ್ಡುಗಳಿದ್ದುವು. ಇದೊಂದು ಸ್ಥಳದಲ್ಲಿ ಮಾತ್ರ ಆ ಬೋರ್ಡು ಇಲ್ಲ. ಇಲ್ಲಿ, ಈ ಪೀಠದ ತಲೆಯಮೇಲೆ ಆ ಬೋರ್ಡು ಖಂಡಿತ ಇರಬೇಕು, ಎಲ್ಲರಿಗೂ ಎಚ್ಚರಿಕೆ ಕೊಟ್ಟಂತಾಗುತ್ತೆ. ಬಡವನಿಗೆ ಈ ಅನುಕೂಲವನ್ನು ಕೊಟ್ಟರೆ, ನಾನೇ ಚಿನ್ನದಕ್ಷರಗಳಲ್ಲಿ ಆ ಬೋರ್ಡನ್ನು ಬೊಂಬಿನಮೇಲೆ ಕೆತ್ತಿಸಿ, ಗಳುಗಳಿಂದ ತೂಗು ಹಾಕುತ್ತೇನೆ" ಎಂದು ಹೇಳಿ, ನ್ಯಾಯಾಸ್ಥಾನದ ನೌಕರನು ನನ್ನ ಹೆಸರನ್ನು ಇನ್ನು ಮೂರು ಸಾರಿ ಕೂಗುವವೇಳೆಗೆ, ಬ್ಯಾಂಕಿಗೆ ಓಡಿಬಂದು, ಹಣ ತೆಗೆದುಕೊಂಡು, ವಹಾಬ್‌ನಾಬಿ, ಮಸ್ತಾನ್‌ಖಾನ್‌ರಿಗೆ ಮುಂಗಡ ಕೊಟ್ಟು, ಬೇಗ ಬೇಗ ನಮ್ಮೂ ರಿಗೆ ಜಾಗ್ರತೆಯಿಂದ ಬಂದೆ ಅನ್ನಿ.

✤ ✤ ✤

——೧——



ಇವೇನೋ ಮಾಧು— ಯಾವುದಾದರೂ ನೌಕರಿಗೆ ಸೇರಬಾರದೆ— ಬಿ.ಎ. ಮಾಡಿ ಹೀಗೆ ವ್ಯರ್ಥವಾಗಿ ಕಾಲಹರಣ ಮಾಡುತ್ತಿ ?

— ಇಲ್ಲ ಮಾವ. ನಮ್ಮ ಜನಾಂಗದವರಲ್ಲಿ ಇನ್ನೂ ಯಾರೂ ಮಂತ್ರಿಗಳಾಗಿಲ್ಲ— ಅದೇನಾದರೂ ಸಿಗುತ್ತೋ ಎಂದು ನೋಡುತ್ತಿದೇನೆ



ಹಾಗೇ ಇರಲಿ ಕಣಯ್ಯಾ! ನಮ್ಮ ಆಫೀಸರು—ಏನು ಕೇಳಿದರೂ ನಿನಗೇನು ಕೇಡು ಎಂದೇ ಮಾತನಾಡಿಸುತ್ತಾರೆ.

ಗಿರಾಕಿ

ಶ್ರೀ ವಿಜಯಹಾಳು, ಶ್ರೀಶ್ರೀಹಾಳು, ಶ್ರೀನಿವಾಸಾಹಾಳು,
ರವಿವರ್ಮಹಾಳು, ಮಾರುತೀಹಾಳು, ಶ್ರೀ ಸೀತರಾಂಹಾಳು,—
ಎಲ್ಲರೂ, ಆ ಸಂಜೆ ಸಾಲಾಗಿ, ಗಜಿಬಜಿಯ ಸೋನೆಯಲಿ,
ಯಾರೊಬ್ಬರೂ ಸುಳಿಯದಾ ಪೀಡೆ ಮಳೆಯಲ್ಲಿ ನೊಣಹೊಡೆದು,
ದೀಪವನು ಸುಂಸುಂನೆ ಉರಿಸುತ್ತ ಅರನಿದ್ದೆಯೊಳಗಿರಲು—
ಜರಿಪೇಟ! ಕರಿ ಅಂಗಿ! ರಿಟೈರ್ಡು ಓವರ್ಸಿಯರೋ ಏನೊ?
ಗಂಟುಮಾಡಿದ ಮುದುಕ! ಮುತ್ತೈದೆ ಚಿಕ್ಕುಡುಗಿ! ಸೀರೆ, ಕುಪ್
ಪಸ, ಪಂಚೆ? ವಾಯಿಲ್ಲು? ಪ್ರಿಂಟಾದ್ದು? ಕುತ್ತಾಲಂ? ಕಂಚೀದು?
ಮಳೆಯಲ್ಲಿ ನನೆನನೆದ ನಾಯಿಯೋ ಎಂಬಂತೆ ತೊಯ್ದು ಮೈ
ಯೆಳೆತಂದು ಸರ್ರನೇ ಕೊಡಹುತ್ತ, ಮಾರುತೀ ಹಾಳೊಳಗೆ
ಕಾಲಿಟ್ಟರಿಬ್ಬರೂ!, ಉಳಿದವರ ಮುಖಮುರಿದು.

ಅವರ ಜಂಭವೆ ಜಂಭ!

ಬನ್ನಿ, ಬನ್ನೀ, ಎಂದು ಬಲ್ಬುಗಳ ಬೆಳಗಿಸುತ
ಹೊಸ ಜಮಾಖಾನೆಯನು ಅವರಿಗೆಂದೇ ಹಾಸಿ, "ಏನ್ಬೇಕು?
ಏನ್ಬೇಕು?" ಎಂದವರ ಸಾಹುಕಾರನೆ ಕೇಳಿ, ಆಳುಗಳು
ಮುತ್ತಿದರು.

ಬೀರುಗಳ ತೆರೆತೆರೆದು ಒಳಗಿನಿಂ ವಿವಿಧಬಣ್
ಣದ ಸೀರೆಗಳನು ಇಳಿಸುತ ಬೇಗ ಹರಡಿದರು ಸಮ್ಮುಖದಿ!—
ಕಾಲೇಜು, ಬಾಂಬಂಚು, ಖುರ್ಷೀದು, ನಶ್ಯದ್ದು, ಗಿಣಿಹಸುರು,
ಶೋಭನಾ ಸಮರ್ಥಳು ಸ್ಟೂಡಿಯೋದಲಿ ಧರಿಸಿ, ವಾಲ್ಮೀಕಿ
ಆಶ್ರಮಕೆ ತೆರಳಿದ್ದು, ಚಿಕರಿ ಬಣ್ಣದ ಸೀರೆ, ಗಂಧದ್ದು,
ನವಿಲಿಂದು, ಬೂದೀದು, ತಾರೆಯರ ತನುಗಳನು ಸೂರೆಗೊಂ
ಡಾಸೀರೆ, ರಿಬ್ಬನ್ನು ಪ್ರಬ್ಬಾತು, ಸುಬ್ಬಲಕ್ಷ್ಮೀ ಸೀರೆ——
ಎಲ್ಲವನು ತೆಗೆತೆಗೆದು ಅವರೆದುರು ಹಲ್ಕಿರಿದು, 'ಬೇಕೆ ಇದು?'

' ಸಾಕೆ ಇದು ? ' ' ಗ್ಯಾರಂಟಿ ', ' ಬೆಲೆ ಕಡಮೆ ', ಹೊಸಮಾಲು ', 'ಪ್ಯಾಷನ್ನು',
' ಒಲು ಚೀಪು ', ' ಕಂಟ್ರೋಲು ', ' ಈಗಲೇ ಲಾಭದಲಿ ಕೊಂಡಿರಿಸಿ '—
ಎಂದೆಲ್ಲ ಹೊಗಳುತ್ತ, ಇತರ ಹಾಳೆಲ್ಲರನು ಹಳಿಯುತ್ತ
ತೆಗಳುತ್ತ ಕೇಳಿದರು ಮುದುಕನನು... .

ಅವ ಘಾಟಿ, ಎದ್ದೋಗಿ,

ಹೊರಗಡೆಗೆ ಕೈನೀಡಿ ಮಳೆನಿಂತ ಚಿಹ್ನೆಗಳು ಕಂಡುಬರೆ,
ಕೂಲಾಗಿ, ಕಾಮಾಗಿ, " ಬಾ ! ಲಲಿತು ಹೋಗೋಣ ", ಎ ದು ಕಂ
ಬಿಯ ಕಿತ್ತ !

— ಪಾಟಾಳಿ

ಆಹಾರ ಉಳಿಸುವ ಬಗೆ : " ನಾವು ಈಗ ತೆಗೆದುಕೊಳ್ಳುವ ಆಹಾರದ ಮೂರ ನೆಯ ಒಂದು ಭಾಗದಿಂದಲೇ ನಮ್ಮ ಶರೀರ ಪೋಷಣೆಯಾಗುತ್ತದೆ " (ಅಮೇರಿಕನ್ ಡಾಕ್ಟರೊಬ್ಬರು)... .... ಇರಬಹುದು. ಆದರೆ, ನಮ್ಮೂರು ಡಾಕ್ಟರ ಪೋಷಣೆ ಯಾಗಬೇಕಾದರೆ, ಅಷ್ಟೂ ತಿನ್ನಬೇಕಲ್ಲಾ !

✦ ✦ ✦

ನಿಮ್ಮನ್ನು ನಾನು ಪ್ರೊಫೆಸರ್ ರಾಮೇಶಂ ಅಂತ ಕೂಗಲೋ, ಡಾ|| ರಾಮೇಶಂ ಅಂತ ಕೂಗಲೋ ?

ಹೇಗೆ ಬೇಕಾದರೆ ಹಾಗೆ !... ನನ್ನ ಸ್ನೇಹಿತರು ನನ್ನನ್ನ " ಚೇಳು ' ಅಂತ ಕೂಡ ಹೇಳುತ್ತಾರೆ.

ಸರಿ ! ಸರಿ ! ನಿಮ್ಮ ಪರಿಚಯ ಚೆನ್ನಾಗಿ ಮಾಡಿಕೊಂಡಿರುವವರು ಹಾಗೆ ಹೇಳ ಬಹುದೇ ಹೊರತು, ನಾನು !... ಈಗಲೇ.. ?.. .

✦ ✦

ಒಂದೇ ವರ್ಷ ವಯಸ್ಸಾದರೂ ನಾಲ್ಕಡಿ ಎತ್ತರದ ಗಂಡು ಮಗು ಇರುವ ನಮ್ಮ ಸ್ನೇಹಿತರೊಬ್ಬರಿಗೆ—ಎಲ್ಲಿ ಹಾಳು ವಿಮಾನಗಳು ತಗ್ಗಿನಲ್ಲಿ ಹಾರುತ್ತವೋ ಬರಬರುತ್ತಾ—ಎಂಬುದೇ ಹೆದರಿಕೆ.

✦ ✦ ✦



ಇದೊಂದೇ ಸೀರೆ ಇರೋದು ಕೊಂಡುಕೊಂಡು ಬಿಡೀಮ್ಮಾ ; ನಿಮ್ಮ ಪಕ್ಕದ ಮನೇ ಪಾರ್ವತಮ್ಮನವರು ಆಗಲೇ ಬಂದು ನೋಡಿಕೊಂಡು ಹೋದರು.

ಪ್ರಶ್ನೆಗೆ ಉತ್ತರ

(ಒಂದು ವಿಚಾರ ಪ್ರಚೋದಕ ಸುಲಭ ಪದ್ಯ)

೧

ನಗೆಯುದೇಕೆ ಬರ್ಪುದು ?
ಬರ್ಪುದು !
ಹಲ್ಲ ತೋರಲಲ್ಲವೆ ?
ತೋರ್ಪುದು !
ಆದರೇನು ?
ಹಲ್ಲ ತೋರಲೆಂದು ನಗೆಯು
ಬರುವುದಿಲ್ಲವು !
ನಗಲು ಹಲ್ಲ ತೋರ್ಪುದಷ್ಟೆ ;
ಬೇರೆ ಇಲ್ಲವು.

೨

ಬ್ಲೇಡದೇಕೆ ತರಿವುದು ?
ತರಿವುದು !
ಕೆನ್ನೆ ಹೊಳೆಯಲಲ್ಲವೆ ?
ಹೊಳೆವುದು !
ಆದರೇನು,
ಕೆನ್ನೆ ಹೊಳೆಯಲೆಂದು ಬ್ಲೇಡು
ತರಿವುದಿಲ್ಲವು !
ತರಿಯೆ ಕೆನ್ನೆ ಹೊಳೆವುದಷ್ಟೆ ,
ಬೇರೆ ಇಲ್ಲವು.

೩


ಕೈಯನೇಕೆ ನೀಡ್ವರು ?
ನೀಡ್ವರು !
ಲಂಚ ಬೀಳಲಲ್ಲವೆ ?
ಬೀಳ್ವುದು !
ಆದರೇನು,
ಲಂಚ ಬೀಳಲೆಂದು ಕೈಯ
ನೀಡಲಿಲ್ಲವು !
ನೀಡೆ, ಲಂಚ ಬೀಳ್ವುದಷ್ಟೆ ;
ಬೇರೆ ಇಲ್ಲವು.

೪

ಇದನ್ನೇಕೆ ಬರೆದೆನು ?
ಬರೆದಿರಿ !
ಕರ್ಮ ಸಮೆಯಲಿಲ್ಲವೆ ?
ಸಮೆಯಿತು !
ಆದರೇನು ?
ನಮ್ಮ ಕರ್ಮ ಸಮೆಯಲೆಂದು
ಬರೆಯಲಿಲ್ಲ, ನೀವ್ !
ಓದೆ, ಕರ್ಮ ಸಮೆಯಿತಷ್ಟೆ !
ಬೇರೆ ಇಲ್ಲವು.

—“ಕುವೆಂಪು” ಪ್ರಚೋದಿತ.

———o———



“ ನಿಮ್ಮ ತಂದೆ ಮನೇಲಿದಾರೆಯೇ ಮಗು ”,

“ ಇಲ್ಲ—ಹೊರಗೆ ಹೋಗಿದ್ದಾರೆ ”

“ ಕಛೇರಿಗೆ ಹೋಗಿದ್ದಾರೆಯೇ ? ”

“ ಇಲ್ಲ ”

“ ಅದು ಹೇಗೆ ಗೊತ್ತು ”

“ ಓಡಿ ಓಡಿ ಹೋಗುತ್ತಿದ್ದರು ”

ಬ್ಲೇಡುಗಳು

(ಒಂದು ವಿಮರ್ಶೆ)

ಬ್ಲೇಡು ಇದ್ದರೂ ಕ್ಷೌರ, ಇಲ್ಲದಿದ್ದರೂ ಕ್ಷೌರ. ಹಿಂದಿನ ಕಾಲದಲ್ಲಿ ಬ್ಲೇಡುಗಳು ಇರಲಿಲ್ಲವಾದುದರಿಂದ ಕೊಡಲಿಗಳನ್ನೇ ಉಪಯೋಗಿಸುತ್ತಿದ್ದರೆಂದು ತೋರುತ್ತದೆ. "ಮನೆ, ಮುಸೆ, ಕೊಡಲಿ ಮನೆ ;..." ಎಂಬ ಹಾಡನ್ನು ನೋಡಿದರೆ ಇದು ವ್ಯಕ್ತವಾಗುತ್ತದೆ. ಈ ಸಲಕರಣೆಗೆ ಗಂಡುಕೊಡಲಿ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಗಂಡಸರೇ ಹೆಚ್ಚು ಉಪಯೋಗಿಸುತ್ತಿದ್ದುದರಿಂದ ಈ ಹೆಸರು ಬಂದಿರಬಹುದೆ? ವಿಚಾರಮಾಡಬೇಕು. ಗಡ್ಡವೆಂಬ ವೈರಿ ವಠಾರಕ್ಕೆ ಕ್ರೂರ ಕುಠಾರವಾಗಿತ್ತು ಈ ಗಂಡುಗೊಡಲಿ.

ಕೊಡಲಿಗಳಿಗೆ ಒಂದೇ ಬಾಯಿ ಇರುತ್ತದೆ. ನಾಗರೀಕತೆ ಬೆಳೆದು ಬಂದಂತೆಲ್ಲ ಎರಡು ಬಾಯಿಯು ಅಥವಾ ಎರಡು ನಾಲಗೆಗಳ ಕೊಡಲಿಗಳು ಸೃಷ್ಟಿಯಾದವು. ಈ ವಿಚಿತ್ರವನ್ನು ಕಂಡು ಒಬ್ಬರು ಆಶ್ಚರ್ಯದಿಂದ "ಅತ್ತಲೂ ಕೊಯ್ಯುವುದು, ಇತ್ತಲೂ ಕೊಯ್ಯುವುದು" ಎಂದು ಉದ್ಗಾರ ತೆಗೆದರಂತೆ !

ಇಪ್ಪತ್ತನೆಯ ಶತಮಾನದಲ್ಲಂತೂ ಯುದ್ಧದ ಬಿಸಿಯಿಂದ ಬ್ಲೇಡುಗಳ ಅಭಾವವು ಹೆಚ್ಚಾಯಿತು. ಷೇವಿಂಗ್ ಸೆಲೂನುಗಳ ಬಾಗಿಲುಗಳಿಗೆ ಜೇಡರ ಹುಳು ಬಲೆ ಕಟ್ಟಿತು. ಗಡ್ಡವು ತಾನೇತಾನಾಗಿ ಫರಂಗಿ ಮುಳ್ಳಿನಂತೆ ಬೆಳೆಯಲು ಮೊದಲಾಯಿತು. ಸುಧಾರಕರೊಬ್ಬರು ಈ ಶೋಚನೀಯ ಸ್ಥಿತಿಯನ್ನು ಕುರಿತು ಆಡಿದ ಒಂದು ಮಾತನ್ನು ಹೇಳಿ ಈ ಪ್ರಬಂಧವನ್ನು ಮುಗಿಸಬಹುದು—

"ಬೆಳೆಯೇನೋ ಬೇಕಾದಷ್ಟಿದೆ !
ಆದರೆ
ಕೊಯ್ಯುವವರು ಮಾತ್ರ ಇಲ್ಲ"

—ಎನ್. ಪ್ರಹ್ಲಾದರಾವ್.

ರಾಮು : ನನ್ನ ತಂದೆ ಕುದುರೆ ಪೋಲೀಸ್, ಕಣೋ, ಕುದುರೆ ಪೋಲೀಸ್ !

ಕಿಟ್ಟು : ಹಾಗಂದರೇನು ? ಅದರಲ್ಲೇನು ದೊಡ್ಡಸ್ತಿಕೆ ?

ರಾಮು : ದೊಂಬಿಗಿಂಬಿಯಾದರೆ ಬೇಗನೆ ಓಡಿಹೋಗಿ ಬಿಡಬಹುದು, ಕುದುರೆ ಪೋಲೀಸಾದರೆ !



ಕರೀ ಕೊರಂಗು ಲೇಹ್ಯವು ಲಾವಣ್ಯಕಾರಿಯಾದುದು

ಆಸ್ಪತ್ರೆ ವರಾಂಡಾದಲ್ಲಿ

"ಈ ವರ್ಷದ ಜ್ವರದ ರೀತಿಯೇ ಬೇರೆ" "ಹೌದು, ಶಾಸ್ತ್ರಿಗಳೇ!" ಹೇಳಿದ್ದನ್ನೇ ಸಾಧಿಸಬೇಕು ಎಂಬ ಹಟವೇನೂ ಇಲ್ಲ ನನಗೆ. ಪಾಠಶಾಲೆಯಲ್ಲಿ ಪದ್ಮನಾಭಶಾಸ್ತ್ರಿಗಳು ಅದನ್ನೇ ಮೂರುಹೊತ್ತೂ ನನಗೆ ಹೇಳುತ್ತಿದ್ದರು. "ಲೋ! ಮೊಂಡತನ ಮಾಡಬೇಡ. ಹೇಳಿದ್ದೆಲ್ಲ ತಪ್ಪು, ಕೇಳಿದ್ದೆಲ್ಲ ಸುಳ್ಳು, ಅಂತ ಯಾಕೆ ತಲೆ ಚಚ್ಚಿಕೊಳ್ಳುತ್ತೀಯ," ಅಂತ ಕೇಳಿ ತಲೆಮೇಲೆ ಕುಟ್ಟುವರು, ಪಾಪ. ಅವತ್ತಿನಿಂದ ನಾನು 'ಅಲ್ಲ' ಅನ್ನೋದಿಲ್ಲ; ಈಗ, ಈ ಡಾಕ್ಟರು ನನ್ನ ನಾಡಿ ಹಿಡಿದು ನಾಲಗೆ ನೋಡಿ, 'ಶಾಸ್ತ್ರಿಗಳೇ! ಹೋದ ವರ್ಷದ ಮಲೇರಿಯಾನೇ ಮತ್ತೆ ಬಂದಿದೆ ತಮಗೆ,' ಅಂತ ಹೇಳಿದಾಗ ನಾನು ಏನಂದೆ ಗೊತ್ತೆ?....ಅಲ್ಲ, ಅನ್ನಲಿಲ್ಲ. "ಇದರ ರೀತಿಯೇ ಬೇರೆ, ನನಗೆ ಗೊತ್ತು, ಅಂದೆ". "ನಾನು ಬರುತ್ತೇನೆ, ಶಾಸ್ತ್ರಿಗಳೇ! ಹೊತ್ತಾಯಿತು.. .ನಾನು ಈ ಔಷಧೀನ''.... "ಹೇಳಬೇಕಾದ್ದಿಲ್ಲ, ಮುಂದಕ್ಕೆ ನನಗೆ ತಿಳಿಯಿತು. ಮನೆಯಲ್ಲಿ ಮಗುವಿಗೆ ಜ್ವರ?....ನಾನು ಅದನ್ನೇ ಹೇಳಿದ್ದು.... ಈ ವರ್ಷದ ರೀತಿಯೇ ಹೊಸದು. ಒಬ್ಬರಿಗೆ ಬಂತು ಅಂದರೆ ಇನ್ನೊಬ್ಬರಿಗೆ....'' "ಇಬ್ಬರು ಮೂರು ಜನಕ್ಕೆ ಒಟ್ಟೊಟ್ಟಿಗೆ...." "ಗೊತ್ತು, ಗೊತ್ತು. ಈ ವರ್ಷದ ಈ ಮಲೇರಿಯಾ ಸಮಾಚಾರ ನೀವೇನೂ ಹೇಳಬೇಕಾಗಿಲ್ಲ....'' "ದಿನಬಿಟ್ಟು ದಿನ ....'' "ದಿನ ಬಿಟ್ಟು ದಿನ!.... ತಿಂಗಳು ಬಿಟ್ಟು ತಿಂಗಳು....ನನಗೆ ಗೊತ್ತಿಲ್ಲವೆ? ನೀವು ಹೇಳಿದ್ದಕ್ಕೆ ಅಲ್ಲ ಅನ್ನುವುದಿಲ್ಲ ನಾನು........ಆದರೂ ನನಗೆ ಗೊತ್ತು. ನಾನು ಮೊನ್ನೆ ರಾಮಸ್ವಾಮಿಗೆ....ಕರ್ಣಾಟಕ ಸಂಘ ಸೆಕ್ರೆಟರಿಗೆ ಏನು ಹೇಳಿದೆ ಕೇಳಿ....ಅಪ್ಪಾ! ಕೆಮ್ಮುವುದಕ್ಕೆ ಅಂತ ನಾನು ಇಲ್ಲಿ ಬರಲಿಲ್ಲ. ನೀನು ಏರ್ಪಾಟು ಮಾಡಿರುವ ಸಂಗೀತಕ್ಕಿಂತ ನನ್ನ ಕೆಮ್ಮಿನಮೇಲೆ ಜನಕ್ಕೆ ಗಮನ ಹೋಗುತ್ತೆ ಅಂತ ನನಗೇನು ಗೊತ್ತು?.... ಈ ವರ್ಷದ ಮಲೇರಿಯಾನೇ ಹಾಗೆ!....ಅಂದೆ." "ಹೌದು! ನಮ್ಮ ಮಗು ಕೂಡ ಕೊಂಚ ಕೆಮ್ಮುತ್ತೆ." "ಕೆಮ್ಮುತ್ತೆ! ಗಂಟಲು ಒಡೆದು ಹೋಗುತ್ತೆ, ನೋಡುತ್ತಿರಿ. ಡಾಕ್ಟರೇನೋ ಹೇಳಬಹುದು....ಹೋದ ವರ್ಷದ ತರಹಾನೇ ಅಂತ....ಆದರೆ, ನನಗೆ ಗೊತ್ತು. ಇದರ ರೀತಿಯೇ ಬೇರೆ. ನನ್ನನ್ನ ನೋಡಿ, ನೀವು! ಸುಸ್ತು! ಮಾತನಾಡುವುದಕ್ಕೆ ಸುಸ್ತು. ಒಬ್ಬರ ಹತ್ತಿರ ನಾಲ್ಕು ನಿಮಿಷ ನಿಂತು ಎದ್ದಿರಾ, ಬಂದಿರಾ, ಹುಷಾರಾಗಿದಿರಾ, ಅನ್ನೋದಕ್ಕೂ ಕೂಡ ಬೇಜಾರು....ಕೆಲವುವೇಳೆ, ಈ ಹಾಳು ಸುಸ್ತಿನಲ್ಲಿ, ಕಾಶಿಗೋ ರಾಮೇಶ್ವರಕ್ಕೋ ಓಡಿಹೋಗಿ ಬಿಡೋಣ ಅನ್ನಿಸುತ್ತದೆ, ಗೊತ್ತೇನ್ರಿ, ಹುಂ. ಇವರೇನೋ ಹೇಳುತ್ತಾರೆ, ಹೋದ ವರ್ಷದ ತರಹ, ಅಂತೆ." "ಆದರೂ, ಔಷಧಿ ಕೊಟ್ಟಿದಾರಲ್ಲಾ" "ಕೊಟ್ಟಿದಾರೆ! ನಾವು ದಡ್ಡರು, ಇಸುಕೊಂಡು ಬರು

ತ್ತೀವೆ, ಕೊಡುತ್ತಾರ. ಈ ಜ್ವರದ ರೀತಿ ಅವರಿಗೇನು ಗೊತ್ತು....ತಪ್ಪು, ಸುಳ್ಳು, ಅಂತ ಹೇಳಬೇಡ ಅಂತ ಪದ್ಮನಾಭಶಾಸ್ತ್ರಿಗಳು ಹೇಳಿರುವ ಹೊತ್ತಿಗೆ ನಾನು ಸುಮ್ಮನೆ ಬಂದೆ....ಒಳಗೆ ಕೇಳಿಸಿದರೆ ಕೇಳಿಸಲಿ. ನನಗೇನು. ? ಅಲ್ರಿ ! ಈ ವರ್ಷ ಬಂದಿದೆ ಯಲ್ಲಾ ಈ ಮಲೇರಿಯಾ ಇದರ ಜಾತಿಯೇ ಬೇರೆ ...ಅದು, ಬಂದೋರಿಗೇನೆ ಗೊತ್ತಾಗಬೇಕಾದರೆ.... ಆತನಿಗೆ ಬಂದಿಲ್ಲ ... ಬರದೆ ಇದ್ದವರಿಗೆ ಹೇಗೆ ತಿಳಿಯ ಬೇಕು ?" "ಆದರೂ ತಾವು ಅದರ ಚಿಹ್ನೇನೆಲ್ಲ ಸ್ಪಷ್ಟವಾಗಿ ವಿವರಿಸುತ್ತೀರಲ್ಲಾ...." "ವಿವರಿಸುತ್ತೇನೆಯೇ ? ಚೆನ್ನಾಯಿತು. ನೋಡಿ ನಾನು ಅವರಿಗೆ ಹೇಳಿದ್ದು, ನಿಮಗೆ ತಿಳಿಸಿದ್ದು, ಎಲ್ಲ ಅದರ ಮೂರರ ಒಂದು ಪಾಲು, ಛೆ.. ನೂರರ ಒಂದು ಪಾಲು ಕೂಡ ಆಗಲಿಲ್ಲ. .ಅದೂ ಅಲ್ಲದೆ, ಈ ಜ್ವರ ಬಂದಾಗಿನಿಂದ ನನ್ನ ಗಂಟಲೇ ಕೂತುಬಿಟ್ಟಿದೆ ಬಾಯಾಡಿಸಿದರೆ ಮಾತೇ ಹೊರಡೋದಿಲ್ಲ... ಅದಕ್ಕೇ ನಾನು ಹೇಳೋದು .. ಈ ವರ್ಷದ ಜ್ವರದ ರೀತಿಯೇ ಬೇರೆ ಅಂತ. ಇವರನ್ನ ನಂಬ ಬೇಡಿ, ನೀವು...."

"ಡಾಕ್ಟರೇ ! ಪಕ್ಕದಮನೆ ನಾಹುಕಾರರ ತಲೆ ಗಾಯಕ್ಕೆ ತಮಗೆ ಎಷ್ಟು ಫೀಸ್ ಕೊಟ್ಟರು ?"

"ನಲವತ್ತು ರೂಪಾಯಿ ಬಂತು"

"ನೋಡಿ ! ಡಾಕ್ಟರೇ ! ನಮ್ಮ ಪುಟ್ಟು, ಹುಡುಗ, ಬಲುಜಾಣ, ಇವನೇ ಆ ಕಲ್ಲು ಬೀರಿದ್ದು ಗುರಿಯಿಟ್ಟು !"

✤ ✤ ✤

"ಲೋ ! ಮಗೂ ! ಯಾಕಳ್ತೀಯೋ ?"

"ನನ್ನಾಯಿ ಓಡೋಯ್ತು....ನನ್ನಾಯಿ ಓಡೋಯ್ತು...."

"ಹೋದರೆ ಹೋಗಲಿ. ನಿನ್ನಮನೆ ಎಲ್ಲಿ, ಮಗು ? ನಾನು ಕರ್ಕೊಂಡುಹೋಗಿ ಬಿಡ್ತೇನೆ"

"ಮನೆ ನಂಗೆ ಗೊತ್ತಿಲ್ಲ ! ನನ್ನಾಯಿಗೆ ಗೊತ್ತು !"

✤ ✤ ✤

ಮಾತು : "ಇನ್ನುಮೇಲೆ ಸಿಟಿ ಬಸ್ಸಿನಲ್ಲಿ ಆಸಾಮಿ ತೂಕಕ್ಕೆ ತಕ್ಕಹಾಗೆ ಚಾರ್ಜು ಮಾಡಬೇಕು"

ದಡಿಯನ ಮರುಮಾತು : ಹಾಗಾದರೆ, ನಿಮ್ಮಂತಹವರು ಕೈನೀಡಿದರೆ ಬಸ್ಸ ನಿಲ್ಲಿ ಸುವುದೇ ಇಲ್ಲ"

✤ ✤ ✤



ನಾನು ಹೇಗಿದ್ದರೂ ಅನ್ನ ತಿನ್ನುವಹಾಗಿಲ್ಲ ನನ್ನ ಕೂಪನ್ ಅಕ್ಕಿ ನಿಮಗೇ ಕೊಡ್ತೇನೆ ಡಾಕ್ಟರೇ—

ಆದರೆ ನೀವು ನಿಮ್ಮ ಕೂರ್ಪ ಸೌದೆ ನನಗೆ ಕೊಡಬೇಕು—

ಅನರ್ಥಕೋಶ

ಮಠ : ಹೆಗ್ಗಣಗಳ ನೆಲೆವೀಡು

ಮತ್ಸ್ಯಗಂಧಿ : ಇವಳಿಂದಲೇ ಭೀಷ್ಮ ಬ್ರಹ್ಮಚರ್ಯವನ್ನೇ ಪಟ್ಟು ಹಿಡಿದದ್ದು

ಮದುವೆ : ಎಂಥವನಿಗೂ ಇದನ್ನು ಪ್ರವೇಶಿಸಿದರೆ ಅರ್ಧ ಅಂಗಿಯೇ ಗತಿ

ಮನಿಆರ್ಡರ್ : ಮಾವನ ಆಧಿಪತ್ಯದಲ್ಲಿ ಸ್ಥಾಪಿತವಾಗುವುದೆಂದು ಅಳಿಯ ಕನಸು ಕಾಣುವ New order

ಮನೆ : ಕರ್ತಾರನ ಕಮ್ಮಟ

ಮಲೆಯಮಾರುತ : ಇದನ್ನು ಕವಿಗಳೇ ಹೊಗಳಬೇಕು. ನಮ್ಮಂಥವರಿಗೆ ನಡುಕ ಹತ್ತುತ್ತೆ

ಮಾಮೂಲು : ಆಡಳಿತ ಚಕ್ರದ ಕೀಲೆಣ್ಣೆ (Mum oil ಎಂಬುದರ ತದ್ಭವ)

ಮಾರಿ : ಮೋರೆಯನ್ನು ನೋಡಿ

ಮೂಗು : ಕೆಲವರಿಗೆ ಇದೇ ನಶ್ಯದ ಡಬ್ಬಿ

ಮೂಲೆ : ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತದ ಸ್ಥಾನ

ಮೋರೆ : ಯಾರದೇ ಆಗಲಿ, ಧಾರವಾಡದ ಕಡೆ, ಇದಕ್ಕೆ ಮಾರಿ ಅಂತಾರೆ

ಮೋಸ : ಇತರರಿಗೆ ಮಾಡಿದರೆ, 'ಜಾಣತನ;' ತಮಗೆ ಮಾಡಿದರೆ, "ದ್ರೋಹ"

ಮೋಕ್ಷ : ದಾಂಪತ್ಯ ವಿಚ್ಛೇದನ

ಮಂಗ : ಸರಿಯಾದ ದಾರಿ ಹಿಡಿದು ಜೀವನ ಸಾಗಿಸಿ ಘೋರ ಯುದ್ಧಗಳಿಂದ ಪಾರಾದ ನಮ್ಮ ಜಾಣ ನಂಟ

ಮಂಗಳ : ಅನೇಕ ಸಂಗೀತಕಾರರು ಇದನ್ನು ಹಾಡಿ ಸಭಿಕವೃಂದವನ್ನು ತಣಿಸುತ್ತಾರೆ

—ಖಾರಾಂತ.



ಹೋಗಲಿ ಬಿಡು ಅಪ್ಪಾ. ಮೇಷ್ಟ್ರು ಕೇಳಿದರೆ—"ಅಪ್ಪಾ ಲೆಕ್ಕಮಾಡಿ ಕೊಡಲಿಲ್ಲ ಅಮ್ಮಾ ಮಾಡಿದಳು" ಎಂದು ಹೇಳಿಬಿಡುತ್ತೇನೆ.

ನಾಡೀಹಬ್ಬ

ಅಥವಾ

ಕನಸಿನೊಳಗೊಂದು ಕನಸು

—o—

ಅಲ್ಲ. ಇದು ಬೇಂದ್ರೆ ಪದ್ಯ ಅಲ್ಲ. ಅವರದು 'ಕನಸಿನೊಳಗೊಂದು ಕಣಸು' ಅಂತ. ಅಂದರೆ, **ಣಕಾರ.** ನನ್ನದು 'ಕನಸು' ಅಂತ, **ನಕಾರ.** ಆದರೂ ಇದು ನ-ಣ ವ್ಯಾಜ್ಯ ಅಲ್ಲ. ಅವರದು ಓ ಆದರೆ ನನ್ನದು ಶೋ. ಅಷ್ಟೆ.

ನನಗೆ ಬಹುಕಾಲ ಈ ಕನ್ನಡಮ್ಮನ ಮಕ್ಕಳನ್ನು ಕಂಡರೆ ಹೊಟ್ಟೇಲಿ ಕಿಚ್ಚು ಹತ್ತಿದ ಹಾಗೆ ಆಗ್ತಿತ್ತು. ಅವರ ನಾಡಹಬ್ಬಗಳ ವರದಿ ಓದಿದಾಗಲೆಲ್ಲ, ಅವರ ಉಪನ್ಯಾಸ ಉಪಾಹಾರಗಳ ವರ್ಣನೆ ಕೇಳಿದಾಗಲೆಲ್ಲ, ಅವರ ತಿಂಡಿ ತುರಾಯಿಗಳ ಸುದ್ದಿ ಎದ್ದಾಗಲೆಲ್ಲ ಬಾಯಲ್ಲಿ ನೀರೂರಿ, ಮೈಯೆಲ್ಲಾ ಜ್ವರ ಬಂದಹಾಗೆ ಆಗಿಬಿಡುತ್ತಿತ್ತು. ನೀನೂ ಒಂದೆರಡು ನಾಡುಹಬ್ಬ ನೋಡಿಬಿಟ್ಟರೆ ನಿನಗೂ ಈ ಜ್ವರ ನಿಂತು ಹೋಗುತ್ತೆ ಅಂತ ಒಬ್ಬಿಬ್ಬರು ಅನುಭವಸ್ಥರು ಹೇಳಿದರು. ರಾತ್ರೀ ಹಗಲೂ ಅದನ್ನೇ ನಾನು ಜಪಮಾಡುತಿರುವಾಗ, ಒಂದು ದಿನ ರಾತ್ರಿ ನನಗೊಂದು ಕನಸು ಬಿತ್ತು.

'ಎದ್ದಾಗ ಇಲಿ ಆದದ್ದು ನಿದ್ದೇಲಿ ಹುಲಿ ಆಗುತ್ತೆ' ಅಂತ ಒಂದು ಗಾದೆ. ಅದರ ಹಾಗೆ ಮಂಗಳೂರಿನಿಂದ ಒಂದು ಆಹ್ವಾನ, ಧಾರವಾಡದಿಂದ ಒಂದು ಆಮಂತ್ರಣ, ಮೈಸೂರಿನಿಂದ ಒಂದು ನಿಮಂತ್ರಣ, ಗುಲ್ಬರ್ಗದಿಂದ ಒಂದು ಕರೆಯೋಲೆ, ಇನ್ನೊಂದು ಕಡೆಯಿಂದ ಒಂದು ಕೂಗುಕಾಗದ—ಹೀಗೆ ಸರಸರವಾಗಿ, ಸರಪಣಿಯಾಗಿ ಬಂತು, ಬಂತು, 'ನಾಡಹಬ್ಬಕ್ಕೆ ನಮ್ಮಲ್ಲಿಗೆ ಬನ್ನಿ, ನಾಡಹಬ್ಬಕ್ಕೆ ನಮ್ಮಲ್ಲಿಗೆ ಬನ್ನಿ' ಅಂತ. ನಾಡಹಬ್ಬ ನಡೆಯೋದೋ ನವರಾತ್ರೆ ಕಾಲದಲ್ಲಿ. ನವರಾತ್ರೆ ನಡೆಯೋದೋ ಒಂಬತ್ತು ದಿವಸ ಮಾತ್ರ. ನನ್ನ ಕರೆಯುತ್ತಿರುವವರೋ ಹತ್ತು ಹದಿನೈದು ಜನ. ಕಡೆಗೆ, ಏನುಮಾಡುವುದೆಂದು ತಿಳಿಯದೆ, ಲಾಟರಿ ಹಾಕಿದ ಹಾಗೆ ಚೀಟಿ ಹಾಕಿ ನೋಡಿದೆ. ಮೊದಲು ಮಂಗಳೂರು ಬಂತು. ಗಂಟುಮೂಟೆ, ಅಲ್ಲ, ಟ್ರಂಕು ಹೋಲ್ಡಾಲ್ ಕಟ್ಟಿದೆ.

ಮಂಗಳೂರಿನ ಹತ್ತಿರ ಸಮುದ್ರ ಇದೆಯಂತೆ. ಆದರೇನು? ಪಾಪಿ ಮಂಗಳೂರಿಗೆ ಹೋದರೂ ಮೊಣಕಾಲುದ್ದವೇ ನೀರು? ಟ್ರಂಕಿನಮೇಲೆ ಹಾಸಿಗೆ ಇರಿಸೋ ವೇಳೆಗೆ ಒಂದು ವೈರ್ ಬಂತು. "ಮಂಗಳೂರಿನಲ್ಲಿ ಪ್ಲೇಗು ಬದುಕೋ ಆಶೆ ಇದ್ದರೆ ಬರಬೇಡಿ" ಅಂತ. ಏನೋ ಈ ನಾಡಹಬ್ಬದ ನೆವದಲ್ಲಿ ಘಟ್ಟಗಿಟ್ಟ ನೋಡೋಣ ಅಂತಿದ್ದೆ. ಬಿತ್ತು ಅದಕ್ಕೆ ಚಕ್ರ.

ತಿರಿಗು ಹಾಕಿದೆ ಲಾಟರಿ. ಗದಗು ಅಂತ ಬಂತು. ಚಪ್ಪಲಿ ಅಂತ ಜ್ಞಾಪಕ ಆಯ್ತು. 'ಜೈ ವೀರನಾರಾಯಣ' ಎಂದುಕೊಂಡವನೆ ಹಾಸಿಗೆ ಟ್ರಂಕಿನಮೇಲೆ ಇಟ್ಟು ಹೊರಟೇ ಬಿಟ್ಟೆ. ಗದಗೂ ಸೇರಿದೆ. ಅಲ್ಲಿ ಒಬ್ಬ ದೊಡ್ಡ ವೈದ್ಯರ ಮನೇಲಿ ನಮಗೆ ಆತಿಥ್ಯ. ಅವರು ಅಲ್ಲಿ "ಮುಂದಿನ ಡಿಸೆಂಬರ್ ತಿಂಗಳು ನೀವು ಇಲ್ಲಿ ಬರುತೀರಿತಾನೆ. ಆಗ ಇಲ್ಲಿ ಅಖಿಲಕರ್ನಾಟಕ ಗದಗುಚಪ್ಪಲಿಧಾರಕರ ಸಮ್ಮೇಳನ ನಡೆಯುತ್ತೆ. ನಿಮ್ಮ ಬುಳ್ಳಾಪುರದಿಂದ ನೀವೇ ಪ್ರತಿನಿಧಿಗಳಾಗಿ ಬರಬೇಕು. ಬಂದಾಗ ನಮ್ಮಲ್ಲೇ ನೀವೂ ನಿಮ್ಮ ಮಿತ್ರರೂ ಇಳೀಬೇಕು. ನಿಮಗೋಸ್ಕರ ಅರ್ಧಮನೆ ಖಾಲಿಮಾಡಿಸಿ ಇಡತೇನೆ" ಎಂದು ಹಳಹಳಿಯಿಂದ ಹೇಳಿದರು. ಆಗಲಿ ಎಂದೆ.

ಗದಗಿನಲ್ಲಿ ತಿರಿಗಿ ಲಾಟರಿ ಹಾಕಿದೆ. ಕಲಬುರ್ಗಿ ಅಂತ ಬಂತು. ಗದಗು ಬಿಟ್ಟೆ. ಕಲಬುರ್ಗಿ ಸೇರಿದೆ. ನನ್ನ ಉಪನ್ಯಾಸ ಹೇಗಾಯಿತೋ ಆ ಊರವರು ಹೇಳಬೇಕು. ಆದರೆ ನನಗೆ ನಡೆದ ಉಪಾಹಾರ ಆತಿಥ್ಯಗಳು ಮಾತ್ರ "ಅಗದಿ ನೆಟ್ಟಗಾದವು." ಮೂರು ದಿವಸ ಅಲ್ಲಿ ಮೇದು ಮೆಲಕುಹಾಕಿ ಆಯ್ತು. ಮೂರ ನೆಯ ರಾತ್ರಿ ಮಹಾರಾಯರೊಬ್ಬರ ಮನೇಲಿ ಮಹಾಸಂತರ್ಪಣೆ. ತಿನ್ನಲಾರದೆ ಬಲವಂತಕ್ಕೆ ತುರುಕಿಕೊಳ್ಳುತಾ ಇದ್ದೇನೆ. ಎದುರಿಗೆ ಅಸಾಧ್ಯವಾದ ಚರ್ಚೆ ನಡೀತಾ ಇದೆ: 'ಲಕ್ಷ್ಮೀಶನ ದೇವಪುರ ಕಡೂರು ಜಿಲ್ಲೆಯ ದೇವನೂರೆ? ಅಥವಾ ಹೈದರಾ ಬಾದಿಗೆ ಸೇರಿದ ಸುರಪುರವೆ?' ಅಂತ. ಎಲ್ಲರೂ ಮಹಾ ಸಾಹಿತಿಯಾದ ನನ್ನ ಕಡೇನೆ ನೋಡುತಾ ಇದ್ದಾರೆ, ಕಡೇ ನಿರ್ಣಯಕ್ಕೆ. ನಾನೋ ಕೆಳಗಡೆ ಊಟದ ಭಾರ, ಮೇಲುಗಡೆ ನಿದ್ರೆಯ ಭಾರ ಎಳೆದು ಎಳೆದು ಯ್ಯಾರು ಯಾರು ಮಾತನಾಡಿ ದರೂ ಅವರವರ ಕಡೆ ತಲೆ ತೂಗತಾ ಇದೇನೆ. ಕಡೇ ೧೧ ಗೆ ಯಾರೋ ಬಂದು, ನನ್ನ ಕೈ ತೊಳೆದು, ಕಾಲೊಬ್ಬರು ಒಂದು ಕಡೆ, ತಲೆಯೊಬ್ಬರು ಒಂದುಕಡೆ ಹಿಡಿದು ಹಾಸಿಗೆಮೇಲೆ ಎಸೆದು, ಹೊದಿಕೆ ಮುಸುಕು ಮುಖದಮೇಲೆ ಎಳೆದಹಾಗಾಯ್ತು.

ಇಲ್ಲಿಂದ ಮುಂದಕ್ಕೇ ನಾನು ಹೇಳಿದ್ದು· ಕನಸಿನ ಒಳಗೆ ಒಂದು ಕನಸು ಅಂತ. ಬಂದರು ಇಬ್ಬರು ಯಮದೂತರು ಇದ್ದಹಾಗೆ. "ಸ್ವಾಮಿ ಸುರಪುರದಲ್ಲೂ ನಾಡಹಬ್ಬ ಮಾಡತೇವೆ. ಬರಬೇಕು" ಎಂದಿತು ಒಂದು ಜೊತೆ ತುಟಿ. "ಮಂಗ ಳೂರಿನಲ್ಲಿ ಇದ್ದಹಾಗೇ ಇಲ್ಲೂ ಮಲೆನಾಡು. ಘಟ್ಟಗಿಟ್ಟ. ಬನ್ನಿ" ಎಂದಿತು ಇನ್ನೊಂದು ಜೊತೆ ತುಟಿ. ಹೋಗೋಣವೇ ಬೇಡವೇ ಎಂದು ನಾನು ಹೊರಳು ತಿರುವಾಗ, ಒಬ್ಬ ನನ್ನ ಎಡರಟ್ಟೆ ಹಿಡಿದು "ಪ್ಲೇಗಿಗೆ ಹೆದರಿಕೊಂಡು ಮಂಗಳೂರಿಗೆ ತಪ್ಪಿಸಿಕೊಂಡರೆ ನಾವು ಬಿಡತೇವಾ ನಿನ್ನಬೆನ್ನು!" ಎಂದ. ಇನ್ನೊಬ್ಬ ಬಲರಟ್ಟೆ ಹಿಡಿದು "ಘಟ್ಟ ನೋಡಬೇಕಾ ನೀನು, ಗಿಟ್ಟ? ಬಾ, ಕಟ್ಟಿಟ್ಟದೇವೆ ನಿನಗೆ ಚಟ್ಟ" ಎಂದು ತಾಜಾಕವಿಯ ಹಾಗೆ ತಾಳ ತಟ್ಟಿಕೊಂಡು ಸಂಬೋಧಿಸಿದ.

ಇಲ್ಲಿಂದಲೇ, ನಾಡಪಾಲಿಗೆಲ್ಲ ನಾಡಹಬ್ಬವಾದದ್ದು ನನ್ನಪಾಲಿಗೆ ನಾಡೀಹಬ್ಬ ವಾಯಿತು. ಏನೇನು ಗೋಳುಕರೆದರೂ, ಏನೇನು ದಮ್ಮಯ್ಯಗುಡ್ಡೆ ಹಾಕಿದರೂ

ಆ ಯಮದೂತರು ನನ್ನ ರಟ್ಟೆ ಬಿಡಲಿಲ್ಲ. ಕಾವ್ಯದಲ್ಲಿ ಹೇಳುವ ಹಾಗೆ “ ಹೆಚ್ಚು ಹೇಳಿ ಫಲವೇನು ? ಸುರಪುರದ ಸಂದರ್ಶನವಾಯಿತು. ಪ್ಲೇಗಿನ ಸಂದರ್ಶನವೂ ಆಯಿತು. (ಅಚ್ಚ ಕನ್ನಡದಲ್ಲಿ ಹೇಳುವುದಾದರೆ ಆ ಅಸುರಪುರದಲ್ಲಿ ನಾನು ಕಾಲಿಟ್ಟ ಕೂಡಲೆ ಪ್ಲೇಗಿನ ಇಲಿ ನನ್ನ ಕಾಲು ಬೆರಳು ಕಚ್ಚಿತು.)

ಪ್ಲೇಗು ಬಂದರೆ ಪ್ಲೇಗು ಡಾಕ್ಟರು ಬರಬೇಡವೆ ? ಬರಲೇ ಬೇಕು. ಸಾಯು ವವನ ಕೊನೆಗಾಲದ ಕೋರಿಕೆ ಎಂದು ನಾನು ನನ್ನ ಚಿಕಿತ್ಸೆಗೆ ಎಲ್ಲಾ ವೈದ್ಯರನ್ನೂ ಬಿಟ್ಟು ನನ್ನ ಗದಗಿನ ವೈದ್ಯರನ್ನೇ ವರಿಸಿಕೊಂಡೆ. ಆಹ! ಏನು ಮಾಯವ್ವೋ. ನೆನೆದವರ ಮನದಲ್ಲಿ ನಾರಾಯಣ! ವೈದ್ಯೋ ನಾರಾಯಣೋಹರಿಃ ! ಆ ವೈದ್ಯರೂ ಹಾಗೆಯೇ, ಗದಗಿನ ಚಪ್ಪಲಿಯ ಹಾಗೆಯೇ. ಮೆಟ್ಟಿದರೆ ಬೇಗ ಬಿಟ್ಟುಕಳಿಯು ವಂತಿಲ್ಲ.

ನವರಾತ್ರಿಯಲ್ಲಿ ಅಂಟಿದ ಪ್ಲೇಗಿಗೆ ಅವರೇ ಗತಿ ತೋರಿಸಿದರು. ವ್ರೈ ತುಂಬಿ ಕೊಳ್ಳೊವರೆಗೂ ಇಲ್ಲೇ ಇರಿ ಎಂದರು. ನವೆಂಬರು ತುಂಬಿದವೇಳೆಗೆ ನವೆದ ವ್ರೈಯೂ ತುಂಬಿಕೊಂಡಿತು. ‘ ಚಪ್ಪಲಿ ಸಮ್ಮೇಳನಕ್ಕೆ ನಿಲ್ಲಿ ’ ಎಂದರು. ‘ ಹೋಗೋದು ಏಕೆ ? ಬರೋದು ಏಕೆ ? ಒಂದೇ ಸಲ ಹೋಗಿಬಿಡಿ ’ ಎಂದರು. ‘ ವೈದ್ಯರು ಹೇಗೆ ಹೇಳಿದರೆ ಹಾಗೆ ’ ಎಂದೆ. ನಿಂತೆ. ಕ್ರಿಸ್‌ಮಸ್ ಬಂತು. ಚಪ್ಪಲಿ ಸಮ್ಮೇ ಳನ ಬಂತು. ಬಂತು. ಹಾಗೇ ಹೋಯ್ತು. ಜನವರಿಗೆ ಹೊಸ ಜನ್ಮ ಬಂತು ಅಂತ, ಏಳೋದೂ ಬೀಳೋದೂ ಕಾಣದೆ ಊರಿಗೆ ಓಡಿ ಬಂದೆ.

ಮೊದಲನೆಯ ತಾರೀಖು ಆಫೀಸಿಗೆ ಹೋದೆ. “ ಯಾರ್‍ರೀ ಅದು ? ” ಎಂದ ಜವಾನ. “ ನಾನು ” ಎಂದೆ ಜಬರದಸ್ತಿಯಿಂದ. “ ಯಾರಯ್ಯ ನೀನು ” ಎಂದ ಗುಮಾಸ್ತ. “ ನಾನು ಕಾಣ್ರಿ, ನಾನು ” ಎಂದೆ, ಹಲ್ಲುಕಿರೀತ. “ ಯಾರೊ ನೀನು ? ” ಎಂದರು ಸಾಹೇಬರು. “ ನಾನು ಸಾರ್ ? ತಮ್ಮ ಪಾದಸೇವಕ ” ಅಂತ ಅಡ್ಡಬಿದ್ದೆ. ಸಾಹೇಬರು “ ಮೂರು ತಿಂಗಳಿಂದ ಮುಚ್ಚಿಕೊಂಡಿದ್ದ ನಿನ್ನ ಮುಖಾನಾ ತಿರುಗೂ ಬಿಚ್ಚುತೀಯಾ ? ಎಬೌಟ್-ಟರ್ನ್ ! ಡಿಸ್‌ಮಿಸ್ ” ಎಂದು ಗರ್ಜಿಸಿ, ಎಡಗಾಲೆತ್ತಿದರು. “ ಘಟ್ಟ ಅಂತೆ ! ಬೆಟ್ಟ ಅಂತೆ ! ಘಟ್ಟದ ಕಲ್ಲು, ಬೆಟ್ಟದ ಮಣ್ಣು ನಿನ್ನ ಬಾಯಿಗೆ ” ಎಂದು ಎಡಗೈಯೆತ್ತಿದರು.

“ ಅಯ್ಯಯ್ಯೋ ” ಅಂತ ಕಿರಿಚಿಕೊಂಡು ಕಣ್ಣುಬಿಟ್ಟೆ. ಕನ್ನಡ ಪತ್ರಿಕೆಗಳ ಕಾಲಂಕಾಲಂಗಳೆಲ್ಲ ‘ ನಾಡುಹಬ್ಬ ! ನಾಡಹಬ್ಬ ! ’ ಅಂತ ಹೊಡಕೋತಿದ್ದುವು. ನನ್ನ ಎದೆ ಮಾತ್ರ ‘ ನಾಡೀಹಬ್ಬ ! ನಾಡೀಹಬ್ಬ ! ’ ಅಂತ ತುಡಿಕೋತಿತ್ತು.

ಸಾಕೋ ಸಾಕಪ್ಪ, ಈ ನಾಡಹಬ್ಬ, ನಾಡೀಹಬ್ಬ !

—— o ——



ರೇಷನ್ ಆಫೀಸರ ಮಗ ಕಣೋ ಅವನಾ—

ಜೀವನ್ ಸುಪ್ತ

ಶ್ರೀಕಂಠಯ್ಯನ ನಿದ್ದೆ ಎಂದರೆ ಕಲ್ಲುನಿದ್ದೆ ; ದಿನವೂ ಮನೆಯಲ್ಲಿ ಸೀತೆ ಓಡಿ ಬಂದು ಎದೆಮೇಲೆ ಕುಕ್ಕರಿಸಿ ಮೂತಿ ತುಳಿದ ಹೊರತು ಅವನು ಎದ್ದು ಏಳಾಗಲಾರ. ಬಿ. ಎ. ಪರೀಕ್ಷೆಗೆ ಡಿಸೆಂಬರಿಂದ ಮಾರ್ಚಿ ತನಕ ನಿದ್ದೆಕೆಟ್ಟು ಓದಿದ್ದರ ಸಾಲವನ್ನು ಅವನು ಹೀಗೆ ಕಂತು ಕಂತಾಗಿ ತೀರಿಸುತ್ತಿದ್ದ. ಅಂದು, ಆ ರೈಲಲ್ಲೂ ಅವನ ನಿದ್ದೆಯನ್ನು ಅದೇ ಬಂಡೆತನ ಆವರಿಸಿತ್ತು. ಸುತ್ತಮುತ್ತಿದ್ದ ನಲವತ್ತೆಂಟು ಜನರ ನೂಕು ನೂಕಲು ಕೆಮ್ಮಲು ಸೀನಲು ಯಾವುದೂ ಅವನ ಸಮಾಧಿಯನ್ನು ಹದಗೆಡಿಸಲಿಲ್ಲ. ನಾಲ್ಕೈದು ಹಸುಗೂಸುಗಳು ಬೊಜ್ಜುಬಾಯಿತೆರೆದು ಕಿರಿಚಿದಾಗಲೂ ಅವನು "ಭದ್ರಂ ಕರ್ಣ"ನಾಗಿಯೇ ಪವಡಿಸಿದ್ದ. ಗೊಲ್ಲಹಳ್ಳಿ ಸ್ಟೇಷನಿನಲ್ಲಿ ಸಂತೆ ದೊಂಬಿ ಒಳನುಗ್ಗಿ ದನಧಾನ್ಯಗಳ ಬೆಲೆಯನ್ನೂ ಬೆಲೆ ಹತ್ತೋಟೆಯ ಒಳತೋಟೆಗಳನ್ನೂ ಒಬ್ಬರಿಗೊಬ್ಬರು ಅಬ್ಬರಿಸಿಕೊಂಡರು. ಅವನ ತಲೆದೆಸೆಯ ಕಿಟಕಿಯನ್ನೇ ಯಾರೋ ತೆರೆದರು, ಮುಚ್ಚಿದರು, ಗಡಗಡಿಸಿದರು, ಧೊಪ್ಪೆನಿಸಿದರು. ಅದರ ಮೂಲಕ ಹಲವರು ಒಳಕ್ಕೆ ನೆಗೆದರು, ಹಲವರು ಹೊರಕ್ಕೆ ಹಾರಿದರು. ಅದರೊಳಗಿಂದ ತಲೆಗಳನ್ನು ತೂರಿದರು. ತಲೆಗಳ ಹಿಂದೆಯೇ ಟ್ರಂಕುಗಳನ್ನೂ ಎಳೆದು ತಂದರು. ಆದರೂ ಶ್ರೀಕಂಠಯ್ಯನ ಚಿತ್ತ ಸುಪ್ತವಾಗಿಯೇ ಇತ್ತು.

ಬಿಸಿರಕ್ತದ ತರುಣರನೇಕರು ಅವನನ್ನು ಎಬ್ಬಿಸಿ ಕೂರಿಸಲೇಬೇಕೆಂದು ಹಠ ಮಾಡಿದರು. ಮುದುಕಿಯೊಬ್ಬಳಂತೂ ಒಟಗುಟ್ಟುತ್ತಲೇ ಇದ್ದಳು. ಆದರೂ, ಅವನ ಮುಖಶಾಂತಿಯ ಮಾಟದಿಂದ ಅವನು ಉಳಿದುಕೊಂಡನು. ಕುಕ್ಕುಟಾಸನ ಮರ್ಕಟಾಸನ ಅಶ್ವಾಸನ ಬರೀ ಉಛ್ವಾಸನ ಮಡಿಲಾಸನ ಸಡಿಲಾಸನ ಬೂದೀನಾಯಾಸನ ಬೀದೀನಾಯಾಸನ ಏಕಪಾದಾಸನ ಅರ್ಧಪೃಷ್ಠಾಸನ ಮುಂತಾದ ತಪೋಭಂಗಿಗಳಲ್ಲಿದ್ದ ಆ ಜನಸಮೂಹದ ನಡುವೆ ಶ್ರೀಕಂಠಯ್ಯನ ಶವಾಸನ ವಿಶೇಷ ರೀತಿಯ ಸೊಬಗಿಂದ ರಾರಾಜಿಸಿತು. ಮಿಕ್ಕವರೆಲ್ಲ ಅವನ ಸುಖದ ಸಾಕ್ಷಿಗಳು ; ಅವನ ಸುಷುಪ್ತಿಯ ಸೇವಕರು. ಆ ಗದ್ದಲದ ಮಧ್ಯೆ ಅವನೊಬ್ಬ ಪ್ರಶಾಂತಮೂರ್ತಿ.

ನಮ್ಮ ಜನರ ಅಂತರಂಗದಲ್ಲಿ ಶತಶತಮಾನಗಳಿಂದಲೂ ಅಹಿಂಸಾಮಂತ್ರದ ತಂಪು ನೆಲೆಸಿರುವುದರಿಂದ, ಶ್ರೀಕಂಠಯ್ಯನನ್ನು ಅಲ್ಲಾಡಿಸಿ ಅವನನ್ನೆಬ್ಬಿಸಿ, ಆ ಅರೆ ಬೆಂಚಿನಮೇಲೆ ಕೂರಲು ಯಾರಿಗೂ ಮನಬರಲಿಲ್ಲ. ಅವನ ವಿರೋಧಪಕ್ಷದವರೂ ಕೂಡ ಅಲ್ಲಲ್ಲಿ ಒರಗಿ ಮೂಕರಾದರು. "ಬಿಡಿ ಪಾಪ! ಅರೆನಿದ್ದೆಯಲ್ಲಿ ಎಬ್ಬಿಸುವುದು ಅಧರ್ಮ" "ಯಾವ ಕನಸಿನಲ್ಲಿದಾನೋ, ಮಹರಾಯ?" "ಒಳ್ಳೇ ಪ್ರಾಯದ ಹುಡುಗ" "ಇಂಥ ಭೀಷಣರೇಷಣದಲ್ಲೂ ಹೇಗೆ ದುಂಡು ದುಂಡಾಗಿ ಬೆಳೆದಿದಾನೆ ನೋಡಿ" "ಅತ್ತೆಮನೆಗೆ ಹೋಗುತ್ತಿದಾನೆ ಅಂತ ಕಾಣುತ್ತೆ, ಉಟ್ಟಿರುವ ಜರಿಪಂಚೆ ನೋಡಿದರೆ" "ಮೀಸೆಮೇಲೆ ಕುಣಿದಾಡುತ್ತಿರುವ ..ಮುಗುಳ್ನಗೆ

ನೋಡಿ" ಎಂದು ಮುಂತಾಗಿ ಹಿರಿಯರು ಕನಿಕರಿಸಿದರು. "ಆತನ ಕಣ್ಣಿಗೆ ಮಣ್ಣು ಹುಯ್ದರೆ ನಮ್ಮ ಕಣ್ಣಿಗೆ ನಿದ್ದೆ ಹತ್ತುತ್ತದೆಯೇ ? ವೃಥಾ ಯಾಕೆ ಹಿಂಸೆ ?" ಎಂದು ವಾದಿಸಿ ಅವರು ಶ್ರೀಕಂಠಯ್ಯನನ್ನೇ ನೋಡುತ್ತ ಅವನ ಕಳೇಬರವನ್ನು ಕಾಯುವವರಂತೆ ಸುತ್ತ ನಿಂತಿದ್ದರು.

ಅಷ್ಟುಹೊತ್ತಿಗೆ ತುಮಕೂರು ಬಂತು. ಶ್ರೀಕಂಠಯ್ಯನ ಮುಖಭಾವ ಕೊಂಚ ಮಾರ್ಪಟ್ಟಿತು. ಎದೆಯೊಳಗಿನ ಯಾವುದೋ ಸಂಕಲ್ಪ ಅವನ ಹಣೆಯಮೇಲೆ ಕಾಣಿಸಿತು. ಒಂದುಸಾರಿ ಅವನು ಮೂಗಿನ ಮೇಲುಭಾಗವನ್ನೆಲ್ಲ ಬಲಗೈಯಿಂದ ಸವರಿದ. ಆಗ ಮೊದಲಾಯಿತು, ಗೊರಕೆ.

ಆ ಗೊರಕೆಯ ಸರಿಗಮ ಮಗರಿಸ, ಪಾಟಿ ಸವಾಲು ಉದಾತ್ತ ಅನುದಾತ್ತ, ಪ್ರಗತಿಶೀಲತೆ ಪ್ರಗತಿಶೂಲತೆ, ಗರ ಗಸ, ಇವುಗಳ ಲಹರಿಗೆ ಇಡೀ ಗಾಡಿ ತಲೆದೂಗಿತು. ಪ್ರಪಂಚದಲ್ಲಿರುವ ಇನ್ನೂರು ಚಿಲ್ಲರೆ ಕೋಟಿ ಮನುಷ್ಯರ ಪೈಕಿ ಒಬ್ಬರ ಹಾಗೆ ಮತ್ತೊಬ್ಬರಿಲ್ಲ. ತೊಟ್ಟಿಲ ಮಗುವಾಗಿರುವಾಗ ಎರಡನೆಯ ತಾಯಿ, ತಂದೆಯ ತದ್ರೂಪು ಎಂದು ನಾವು ಮುದ್ದಿಸಿದರೂ, ಬೆಳೆಯುತ್ತಾ ಬೆಳೆಯುತ್ತಾ ಅದು ಅವರಿಬ್ಬರಿಂದಲೂ ದೂರವಾಗಿ ಮೂರನೆಯ ವ್ಯಕ್ತಿಯಾಗಿ ಜಗತ್ತಿನ ವೈವಿಧ್ಯತೆಗೆ ಉದಾಹರಣೆಯಾಗಿ ಬಿಡುತ್ತದೆ. ದೇವರ ಈ ಸಾಮರ್ಥ್ಯವನ್ನು ಕಂಡು ನಾವು ಚಕಿತರಾಗುತ್ತೇವೆ. ಅದೇರೀತಿಯ ಚಾಕಚಕ್ಯತೆ ಶ್ರೀಕಂಠಯ್ಯನ ಗೊರಕೆಯಲ್ಲೂ ಇತ್ತು. ಒಂದರ ಹಾಗೆ ಮತ್ತೊಂದಿರಲಿಲ್ಲ. ಆ ಗೊರಕೆಯ ತಾನ ಮಾನ ಶ್ರುತಿ ಪ್ಲುತಗಳಲ್ಲಿನ ಏರಿಳಿತಗಳು, ಅದರ ಉಗಮಸ್ಥಾನಗಳಲ್ಲಿನ ಅನಿರೀಕ್ಷಿತ ಬದಲಾವಣೆಗಳು, ಮುಕ್ತಾಯದಲ್ಲಿನ ಬಗೆಬಗೆಯ ಚಮತ್ಕಾರಗಳು, ಗತಿಯಲ್ಲಿನ ಬಗೆಬಗೆಯ ಡೊಂಕುಕೊಂಕುಗಳು---ಇವು ಆ ತುಂಬು ಸಭೆಯ ಕುತೂಹಲವನ್ನು ಕೆರಳಿಸಿದವು. ಶ್ರೀಕಂಠಯ್ಯನ ಸುಪ್ತಚೇತನ ಆ ನಲವತ್ತೊಂದು ಜನರೊಂದಿಗೆ ಚೆಲ್ಲಾಟವಾಡುತ್ತಿತ್ತೋ ಎನಿಸುವಂತೆ, ಅವನ ಗೊರಕೆ ಇದ್ದಕ್ಕಿದ್ದ ಹಾಗೆ ನಿಂತೇ ಬಿಡುವುದು. ಆಗ ಅವರೆಲ್ಲರಿಗೂ ತಾವು ಪ್ರಯಾಣಿಕರು, ನಡುರಾತ್ರಿ ಸಮಯ, ಜಾಗ ಕಿಷ್ಕಿಂಧೆ, ಎಂಬ ಅರಿವುಂಟಾಗುವುದು. ಮತ್ತೆ ಆ ಮನಮೋಹಕ ಶಬ್ದಲಹರಿ ಹರಿಯುವುದಿಲ್ಲವೆ ? ಎಂಬ ಪ್ರಾರ್ಥನೆ ಒಳಮೂಡುವುದು. ಶ್ರೀಕಂಠಯ್ಯನ ಬಲಗೈ ಮೂಗನ್ನು ಸವರುವುದು ! ಮತ್ತೆ ಪ್ರಾರಂಭ !

ಹೀಗೆ ಆ ಜಂಗಮ ಜನಾರ್ದನರನ್ನು ಶ್ರೀಕಂಠಯ್ಯ ಮಮಕಾರ ಲೇಶವಿಲ್ಲದೆ ನಾದನೈವೇದ್ಯದಿಂದ ಆರಾಧಿಸಿದ. ಉಪಕಾರಿ ನಾನು, ಎನ್ನುಪಕೃತಿಯು ಜಗಕೆ ಎಂಬ ವಿಪರೀತ ಮತಿಯನುಳಿದು ಅವನು ಕೃತಕೃತ್ಯನಾದ. ಅಕರ್ಮದಲ್ಲಿ ಕರ್ಮ ಮಾಡುವುದೆಂದರೆ, ಗೊರಕೆಯೇ ಸರಿಯಾದ ಉದಾಹರಣೆ. ಅದರಿಂದಾಗುವ ಹಿಂಸೆಗೂ ಸಡಗರಕ್ಕೂ ಕೌತುಕಕ್ಕೂ ಗೊರಕಿಗನು ಹೊಣೆಗಾರನಲ್ಲ. ಅವನದು ಕೇವಲ ಅನಾಸಕ್ತಿ, ಅವನು ಕೇವಲ ಜೀವನ್ಸುಪ್ತ.

—ನಾ. ಕ.



ಇವರೇ— ಚುನಾವಣೇಲಿ ಜಯಿಸಿ ನಮಗೆ ದಾರಿ ತೋರಿಸುವವರು.

ಬೋರಮ್ಮನ ಶಿಫಾರಸ್ಸು

ಮುಸುರೆ ತಿಕ್ಕೋ ಬೋರಿ ಬೆಳಗ್ಗೆ ಒಂಬತ್ತೂಮುಕ್ಕಾಲು ಗಂಟೆಗೆ ಬಂದಳು. ಅಮ್ಮಾವರಿಗೋ ಸಿಟ್ಟು ಧಗಧಗ ಅಂತಿತ್ತು. ಕಾಫೀ ಪಾತ್ರೆ ಕೂಡ ಗಲಬರಿಸಿರಲಿಲ್ಲ.

"ಬೋರಿ, ಏನೇ ಹೀಗೆ? ನಾಲ್ಕು ರೂಪಾಯಿ ಕೊಡತಾ ಇದ್ದೆವು. ಐದಾಯ್ತು, ಆರಾಯ್ತು. ಇನ್ನೂ ಸಾಲ್ದು ಅಂತೀಯ. ಇಷ್ಟು ತಡಾ ಮಾಡಿದರೆ, ನೋಡಮ್ಮ,....ಚೆನ್ನಾಗಿರೊಲ್ಲ" ಎಂದರು.

ಬೋರಿ ಬಲಕೆನ್ನೇಲಿ ತುಂಬಿದ್ದ ತಂಬುಲದ ತುತ್ತನ್ನ ಎಡಕೆನ್ನೆಗೆ ವರ್ಗಾಯಿಸಿ, ಮೊಂಡಮೂಗು ಮೇಲಕ್ಕೆತ್ತಿಕೊಂಡು "ಅದೇ ಅವ್ವ. ನಾನೂ ಯೋಳ್ಬೇಕೂ ಅಂತಿದ್ದೆ. ನಾಳೆ ಅತ್ತನೇ ತಾರೀಕಿಂದ ಬೇರೆ ಯಾರನಾರಾ ಮಡೀಕ್ಕೊಳ್ಳಿ, ಮುಸುರೆ ತಿಕ್ಕಾಕೆ" ಅಂದಳು.

ಅಮ್ಮಾವರು ಕೊಂಚ ಬಿಗುವಾದರು. "ಅಷ್ಟೆಲ್ಲ ಜೋರು ಮಾಡಿದರೆ, ಬೋರಿ, ನಿನ್ನ ಹತ್ತು ದಿವಸದ ಸಂಬಳ......"

"ಅಯ್ಯೊ, ಅದಕ್ಕೇನ್ರವ್ವ, ನಿದಾನಾ ಕೊಡಿ. ಅಂಗೂ ಕೊಡಿದಿದ್ರೆ ಆಯ್ತು, ಬುಡಿ, ನಾವೇನು ಪೊರಗಿನೋರಾ ಅವ್ವ? ಯೆಂಗೋ ಒಸಿ ಸೌರಿಸ್ಕೊಂಡ್ರಾಯ್ತು.

ಅಮ್ಮಾವರ ಬಾಯಿ ಕಟ್ಟಿಹೋಯಿತು. ಏನು ಹೇಳಬೇಕೋ ತಿಳಿಯಲಿಲ್ಲ. ಕೊನೇಗೆ "ತಿಪ್ಪೇಲೇನಾದರೂ ದುಡ್ಡಿನ ಗಿಡ ಹೂ ಬಿಡತೇನೆ?" ಎಂದು ಕಹಿಯಾಗಿ ಕೇಳಿದಳು.

"ಐ ಬುಡ್ರವ್ವಾ. ಯಾಕ್ ನೆಗಾಡ್ತೀರಿ. ನಮ್ಮ ಪುಟ್ಟೀರಪ್ಪ ಇಲ್ವಾ, ಅವ್ವ, ಅವ ಕಪ್ಪೆಕೊಪ್ಪಲ್ ತಾವ ಒಂದು ಮಿಲ್ಟೇರಿ ಕಂತ್ರಾಟು ಇಡಿದವ್ನೆ. ಬತ್ತಿಯಾ ಬೋರಿ ಅಂದ. ಜಿನಾ ಬೆಳಗ್ಗೆ ಲಾರಿ ಬಂದು ಕರಕೊಂಬತ್ತೈತೆ, ಸಂಜೀಗೆ ತಂದು ಬುಟ್ಬುಡುತ್ತೈತೆ, ದಿನಾ ಒಂದಕ್ಕೆ ಒಂದೂಕಾಲು ರೂಪಾಯಿ ಕೂಲಿ ಅಂದ ಅವ್ವ".

ಅಮ್ಮಾವರಿಗೆ ಉಸಿರು ಸಿಕ್ಕಿಕೊಂಡ ಹಾಗಾಯಿತು. "ಮಿಲಿಟರೀಗೂ ಬಂತೆ ಮುಸುರೆ?" ಎಂದರು.

"ಮುಸುರೆ ಅಲ್ಲಾವ್ವಾ, ಮೊಳೆ ಕೆಲಸ ಅವ್ವ, ಒಂದು ಬಕೀಟು ತುಂಬ ಮೊಳೆ ತುಂಬಿಕೊಂಡು, ಬೇಕಾದವರಿಗೆಲ್ಲಾ ಅದೆಂತಾದ್ದೊ ಸಪ್ಲೈಮಾಡೋದಂತವ್ವೆ. ಏನೂ ಕಷ್ಟ ಇಲ್ಲ ಅಂತಂದ, ಅವ್ವ, ಪುಟ್ಟೀರಪ್ಪ....ಏನ್ರವ್ವಾ, ಹತ್ತನೇ ತಾರೀಕು

ಗಂಟೆ ಬತ್ತಾ ಇರೋಣ್ವಾ, ಅಥವಾ ಇವತ್ತಿಂದಲೇ ಚಾಕರಿ ಸಾಕು ಅಂತೀರಾ, ಅವ್ವ ? ''

ಏನು ಹೇಳಿಯಾರು, ಪಾಪ, ಅಮ್ಮಾವರು ! ಬಾಗಿಲುವಾಡಕ್ಕೆ ತಲೆ ಒರಗಿಸಿ, ನವರಾತ್ರಿ ಗೊಂಬೆಯ ಹಾಗೆ ಕಣ್ಣು ಪಿಳಿಪಿಳಿ ಬಿಟ್ಟರು.

ಬೋರಿಯೇನೋ ಹತ್ತನೆಯ ತಾರೀಕಿನವರೆಗೂ ಕೆಲಸಮಾಡಿದಳು. ಅಮ್ಮಾವರು ಯಜಮಾನರೊಡನೆ ಮಂತ್ರಾಲೋಚನೆ ಮಾಡಿ, ಬೇರೆ ಉಪಾಯವಿಲ್ಲದೆ, ಹತ್ತುದಿನದ ಸಂಬಳ ಎಲೆ ಅಡಿಕೆ ಸಹಿತ ಕೊಟ್ಟು ಕಳುಹಿಸಿದರು. ಆ ಹೊತ್ತೇ ಮುಸುರೆ ತಿಕ್ಕುವುದಕ್ಕೆ ಶ್ರೀಕಾರ ತಿದ್ದಿದರು. ಮೂರು ತಿಂಗಳು ಕಳೆಯುವದರೊಳಗೆ ಬೋರಿಯನ್ನು ಮೀರಿಸುವಷ್ಟು ಪ್ರವೀಣರಾದರು.

ಒಂದು ದಿನ ಅಮ್ಮಾವರು ಮುಸುರೆ ತಿಕ್ಕುತ್ತಿದ್ದಾಗ ಬೋರಿ ಬಂದಳು ಅದೇ ಹಳೇ ರವಿಕೆ, ಅದೇ ಹಳೇ ಸೀರೆ. ಬೋರಿ ಪುನಃ ಕೆಲಸಕ್ಕೆ ಬಂದಿರಬೇಕೆಂದು ಅಮ್ಮಾವರಿಗೆ ಉಸಿರು ಬಂದ ಹಾಗಾಯಿತು.

" ಏನು ಬೋರಿ ? ಚೆಂದಾಗಿದ್ದೀಯ ? '' ಎಂದರು.

" ನಿಮ್ಮ ಆಸೀರ್ವಾದ, ಅವ್ವ, ಇದೇನವ್ವ, ನೀವೇನೆ ಕುಂತ್ಬುಟ್ರಿ, ಮುಸುರೆ ಉಜ್ಜಾಕೆ ? "

" ಮತ್ತೇನು, ಬೋರಿ ? ಯಜಮಾನರಿಗೆ ಬರೋ ಎಂಬತ್ತೈದು ರೂಪಾಯಲ್ಲಿ ಮುಸುರೇವಳಿಗೆ ಮೂವತ್ತು ರೂಪಾಯಿ ಕೊಟ್ಟರೆ ಆಗುತ್ತೆಯೆ ? ''

" ಅದಕ್ಕೇ ಅವ್ವ, ನಾನೂ ಇವತ್ತು ಬಂದದ್ದು. ಪುಟ್ವೀರಪ್ಪನಿಗೆ ಒಬ್ಬರು ನಂಬಿಕಸ್ತರು ಬೇಕಂತೆ, ಅವ್ವ. ದಿನಾ ಒಂಬತ್ತು ರೂಪಾಯಿ ಕೊಡತಾನಂತೆ. ನಿಮ್ಮ ಐನೋರ್ನ ಇಸಾರಿಸ್ತೀಯಾ ಬೋರಿ, ಅಂತಂದ...ಅಯ್ಯಯ್ಯೊ ! ಇದ್ಯಾಕ್ರವ್ವ, ನಿಂತಂಗೇನೆ ಬಿದ್ಬುಟ್ರಿ ! ''

ಅಮ್ಮಾವರು ಮೂರ್ಛೆ ಹೋಗಿದ್ದರು. " ಮುಸುರೆ ತಿಕ್ಕೋದು ಅಂದರೇನು ಮಕ್ಕಳಾಟಾನ, ಅವ್ವ ? ನಿಂವ್ಕೆಗೆ ತಡದಾತ ಇಂಥಾ ಚಾಕ್ರಿ " ಅಂತ ಬೋರಿ, ಪಾಪ, ಅಮ್ಮಾವರ ತಲೇಗೆ ನೀರು ತಟ್ಟಿದಳು. ಅವಳ ಕಣ್ಣಲ್ಲೂ ಎರಡು ಹನಿ ನೀರು ತುಂಬಿಕೊಂಡಿತು.

—o—

ಉದರನಿಮಿತ್ತಂ ಬಹುಕೃತ ರೇಷನ್.

ನವೀನ ಗಾದೆಗಳು

(ಪರೀಕ್ಷೆ—ಫಲಿತಾಂಶ)

1 ಪುಸ್ತಕ ಓದಿ ಮಸ್ತಕ ಊದಿಕೊಂಡಿತು

2 ಪಾಸಾಗುವಷ್ಟು ಬರೆದಿದೇನೆ ; ಫೆಯಿಲಾಗುವಷ್ಟು ಬಿಟ್ಟಿದೇನೆ

3 —ಂಡೇದರ ಪಾಸಿಗೆ, ನೂರೆಂಟು ವಿಘ್ನ !

4 ಉತ್ತರದ ಪೌರುಷ ಅತ್ತೆಮಗಳ ಮುಂದೆ

5 ಕುಂಬಳಕಾಯಿ ಬಂತಲ್ಲೋ, ಅಂದರೆ, ಎದೆ ಸೀಳಿನೋಡು, ಅಂದ

6 ಇಪ್ಪತ್ತೆನ್ಸಗೆ, ಒಪ್ಪತ್ತೆ ತರ್ಪಣ

7 ಎಂಜಲು ನೋಟ್ಸನ್ನ ಎರವಲು ತಂದ

8 ಕಾರೇವಾಸಿ, ಕತ್ತೆ ಕಾಗದದಲ್ಲೇ ಬರೆ

9 ಪುನರಾಯಾನ್ ಮಹಾಲಿಪಿಃ

10 ಬಿ. ಎ. ಅಂತ ಬಂದರೂ, ಭೀತಿ ಇದ್ದೇ ಇದೆಯಲ್ಲೋ ?

11 ಅತ್ತಲಾಗೂ ಇಲ್ಲ, ಇತ್ತಲಾಗೂ ಇಲ್ಲ, ಅಡ್ಡಗೋಡೆಮೇಲಿನ ಭೂಪ !

12 ಸುಬ್ಬರಾಯರ ಸೊಸೆಯಾಗಿ ಮೈಲಾರಿರಾಯರ ಮಗಳಾಗಿ ನಂಗೊತ್ತಿಲ್ವೆ,
ಎಂ. ಎ. ಅಂದರೆ,—Married againಉ, ಅಂತ ?

13 ಗೆಲ್ತು ಹೈದ ಆಂದ್ರೆ, ಸರಿ, ಕರ್ಕೊಂಡು ಹೋಗಿ ಕಾಲೇಜು ಸೇರಿಸು, ಅಂದ

14 ಪಾಸಾದರೆ ಅಳಿಯನ ಕೈಬರಹ ; ಫೆಯಿಲಾದರೆ ಸೊಸೆ ಹಣೇ ಬರಹ

15 ಪರೀಕ್ಷೆ ಕಟ್ಟಿನೋಡು ! ಫಲಿತಾಂಶ ಓದಿನೋಡು !

16 ಬೊಗಳೋ ಹುಡುಗ ಬರೆಯೋದಿಲ್ಲ ; ಬರೆಯೋ ಹುಡುಗ ಬೊಗಳೋದಿಲ್ಲ

ಆಧುನಿಕ ಕವನರಚನೆ

" ಕ್ರಾಂತಿ " ಎಂಬುದೇ ಆಧುನಿಕ ಕವನದ ವಿಷಯ. ಆ ಮಾತಿಗೆ ಸಂಕ್ರಾಂತಿ, ವಿಶ್ರಾಂತಿ, ವಿಭ್ರಾಂತಿ, ಕಾಂತಿ, ಶಾಂತಿ, ವಾಂತಿ—ಇವೇ ಸುಲಭಪ್ರಾಸಗಳು. ಆಧುನಿಕ ಆಂದೋಲನೆಗಳಲ್ಲಿ ಭಾಗವಹಿಸುವ, ಅಥವಾ, ಭಾಗವಹಿಸಲೆಳಿಸುವ ಯಾವ ಕವಿಯೂ ಕೂಡ,—ತುಳಿತ, ದಳಿತ, ಬಡವ, ಕುರುಡ, ನರಕ, ದ್ವೇಷ, ಅಶ್ಲೀಲ, ರೈತ, ಹಾ, ಉದ್ಧಾರ—ಈ ಮಾತುಗಳನ್ನು ಬಿಡುವ ಹಾಗಿಲ್ಲ. ಆದ್ದರಿಂದ, ಆಧುನಿಕ ಕವನ ಹೀಗೆಯೇ ಇರಬೇಕಾಗುತ್ತದೆ. ಗತ್ಯಂತರವಿಲ್ಲ:—

ಹಾ ! .. ..

ರೈತೋದ್ಧಾರದ ವಿಭ್ರಾಂತಿ !

ಕುರುಡರ ದಳಿತರ ಸಂಕ್ರಾಂತಿ !

ಅಶ್ಲೀಲ ಕಾಂತಿ ....

ನರಕದ ವಾಂತಿ ....

ಬಡವರ ತುಳಿತಕೆ ವಿಶ್ರಾಂತಿ !

ದ್ವೇಷದ ಶಾಂತಿ ! !..... ..

ಶಾಂತಿ ! ....

—o—

❧ ಯುದ್ಧಾನಂತರದ ನನ್ನ ಯೋಜನೆ ❧

[ಕೇವಲ ಎರಡೇ ವರ್ಷಗಳವರೆಗಿನ ಕಾರ್ಯಕ್ರಮ]

೧ ಬಾಡಿಗೆ ಮನೆ ಸಿಗಲಿಲ್ಲವೆಂಬ ನೆಪದಿಂದ ಬಂಗ್ಲಿ ಹೆಗ್ಗಣಗಳಾಗಿ ಸೇರಿರುವ ಇಬ್ಬರು ಆಳಿಯಂದಿರನ್ನೂ ಓಡಿಸುವುದು, ಅವಳು ವಿರೋಧಿಸಿದರೆ, ಹೆದರಬಾರದು.

೨ ಅವರು ಹೊರಟಕೂಡಲೇ, ಸೌದೆ ತರಿಸಿ, ಬಿಸಿನೀರು ಕಾಯಿಸಿ, ಸ್ನಾನ ಮಾಡುವುದು.

೩ ರೇಷನ್ ಕಾರ್ಡನ್ನು ಹರಿದು ಬಿಸಾಕುವುದು. ಹಾಲಿ ಜಾರಿಯಲ್ಲಿರತಕ್ಕ ಸೋಮವಾರ ಗುರುವಾರ ಶನಿವಾರ ವಿಪತ್ತುಗಳನ್ನೂ ಏಕಾದಶಿ ಉಪವಾಸವನ್ನೂ ವಜಾಮಾಡಿ ದಿನವೂ ಎರಡುಹೊತ್ತು ಪುಷ್ಕಲವಾಗಿ, ಅಂದರೆ, ಒಂದು ಚಮಚ ಬೆಣ್ಣೆಕಾಯಿಸಿದ ತುಪ್ಪ ಸಹಿತವಾಗಿ, ಊಟಮಾಡುವ ವ್ಯವಸ್ಥೆ.

೪ ರೂಮುಗಳಿಗೆಲ್ಲ ಹೊಸ ಬಲ್ಬುಗಳನ್ನು ಜೋಡಿಸುವುದು. ೭ ರೀಮು ಬಿಳಿಕಾಗದ ತರಿಸಿ ಈಗ ಮೆದುಳನ್ನು ಕೊರೆಯುತ್ತಿರುವ ಭಾರೀ ಕಾದಂಬರಿಯನ್ನು ಬರೆದು ಮುಗಿಸಿ, ಶಿಂಗ್ರಾಚಾರಿಗೆ ಓದಿ ತೋರಿಸುವುದು. ಅವನು ಸಾಲ ಕೊಟ್ಟರೆ, ಅದನ್ನು ಅಚ್ಚುಹಾಕಿಸುವುದು. ಮಾರಿ ಲಾಭಾ ಪಡೆದುಕೊಳ್ಳಲಿ.

೫ ಕಾರಿಗೆ ಹೊಸ ಟೈರುಗಳು ತರಿಸಿ ಸ್ಟಾರ್ಟ್‌ಮಾಡಲು ಪ್ರಯತ್ನಿಸುವುದು. ಎಷ್ಟುದೂರ ಹೋಗುತ್ತೋ, ಅಷ್ಟುದೂರ ಹೋಗುವುದು.

೬ ಏರೋಪ್ಲೇನಲ್ಲಿ ಆದಷ್ಟುಬೇಗ ಹಾಲಿವುಡ್ಡಿಗೆ ಹೋಗಿ ಪ್ರೇಕ್ಷಣೀಯ ರನ್ನೆಲ್ಲ ಪ್ರೇಕ್ಷಿಸುವುದು.

೭ ಅಷ್ಟುಹೊತ್ತಿಗೆ ಬಿ. ಎಸ್. ರಾವ್ ಸಮಿತಿಯವರ ವರದಿ ಕಾನೂನಾಗದೆ ಇದ್ದರೆ, ಒಂದಕ್ಕೆ ಕುಂಕುಮ ಹಚ್ಚಿ, ತಂದೇ ಬಿಡುವುದು.

೮ ಆಮೇಲೆ, ಇದ್ದೇ ಇದೆ—ಮನೆಯಲ್ಲಿ ಯುದ್ಧ !

ರನ್ನಿಂಗ್				ಸ್ಟಾಂಡಿಂಗ್ (ವರ್ಷಕ್ಕೆ)			
ಗಾಡಿ ಬಾಡಿಗೆ	3	0	0	ಸೌದೆ ಸ್ನಾನ	72	0	0
ಕಾಗದ	10	0	0	ಊಟ ಇತ್ಯಾದಿ	1500	0	0
ಟೈರ್	150	0	0	ಚಿಲ್ಲರೆ	28	0	0
ಶಿಂಗ್ರಾಚಾರಿಗೆ ಕಾಫಿ	3	0	0				
ಏರೋಪ್ಲೇನ್	500	0	0				
ಕುಂಕುಮ	0	0	6				
ಏರೋಪ್ಲೇನ್	1000	0	0				
	1666	0	6		1600	0	0

ಯುದ್ಧನಿಧಿಯ ಲಾಟರಿಯಲ್ಲಿ ಮೊದಲನೆಯ ಬಹುಮಾನ ಬಂದಕೂಡಲೇ, 3266—0—6 ನ್ನು ಇದಕ್ಕಾಗಿಯೇ ತೆಗೆದಿಡುವೆನು. "ಉದ್ಧರೇತ್ ಯುದ್ಧಂ ಯುದ್ಧಾನಂ" ಎಂಬುದೇ ನನ್ನ ನೀತಿ.

—ಶ್ರೀಶೈಲ.

—o—

ಈ ಊರಲ್ಲಿ, ನೋಡಪ್ಪ, ಒಂದಿಪ್ಪತ್ತು ಜನ, ಬೆಳೆದ ಹುಡುಗೀರನ್ನ ಮದುವೆ ಮಾಡಿಕೊಡದೆ ಮನೆಯಲ್ಲಿರಿಸಿಕೊಂಡು ಕೂತಿದಾರೆ....ದುಡ್ಡಿದೆ, ಕಾಸಿದೆ, ವಿದ್ಯಾ ಇದೆ, ಒಳ್ಳೇವರ ಸಿಕ್ಕುತ್ತಿ........

ನಿನಗೆ ಹೇಗೆ ಗೊತ್ತು ? ಒಳ್ಳೇ ವರ ಸಿಕ್ತಾನೆ, ಅಂತ ?

ನಾನೇ ಹೋಗಿ ಉದ್ಧಕ್ಕೂ ಕೊಡುತ್ತೀರಾ ಅಂತ ಕೇಳಿ ಬಂದೆನಲ್ಲಾ


◆ ◆ ◆

ನಾನೂ ನಮ್ಮಣ್ಣಾ ರಾಜಾನೂ ದೂರದ ನಂಟರು !

ದೂರದ ನಂಟರು ! ಹಾಗಂದರೇನೋ ?

ಅವನು ಮೊದಲನೆಯವನು ! ನಾನು ಹದಿಮೂರನೇವನು ?

◆ ◆ ◆



ಇದೇನೋ ಅವತಾರ !

ರಜಾಕ್ಕೆ ಬರೆದುಕೊಂಡಿದ್ದೇನೆ, ನಾಳೆ ಸಾಹೇಬ್ರನ್ನ ನೋಡಬೇಕು ಕಣೋ

ಕಾಫಿ ಮನೆ

(ಶ್ರೀ. ಕೆ. ವಿ. ಪುಟ್ಟಪ್ಪನವರ ಕ್ಷಮೆ ಬೇಡಿ)

ಕ್ಲಾಸುಗಳ ಹೋರಾಟದಲಿ
ಮೇಷ್ಟರುಗಳಾ ಹಾರಾಟದಲಿ
ಬಗೆ ಕದಡಿ ಕಂಗೆಡಲು
ಓ! ವಿದ್ಯಾರ್ಥಿಯೇ ಬಾ! ಇಲ್ಲಿ
ಕಾಫಿ ಮನೆಗೆ

ಮೆತ್ತಗಿನ ಕುರ್ಚಿ ಇದೆ
ಆರಾಮವಾಗಿ ಕುಳಿತಿರಲು,
ತುಂಬಿಸಲು ಕಿವಿಗಳನು
ರೇಡಿಯೋ ಗಾನವಿದೆ,

ಹೊಟ್ಟೆಯನು ತುಂಬಿಸಲು,
ವಿವಿಧ ತಿಂಡಿಯಿದೆ,
ಸೋದರನೆ ಬಾ ಇಲ್ಲಿ
ಧನ್ಯನಾಗುವೆ ಇಲ್ಲಿ
ಪೂರ್ಣನಾಗುವೆ ಇಲ್ಲಿ
ಕಾಫಿ ಮನೆಯಲ್ಲಿ

ಘಂಟೆಗಳು ಮೊಳಗುತಿರೆ
ಗಂಟಲದು ಒಣಗಿ ಬರೆ
ಕಾಲೇಜು ಮುಚ್ಚುತಿರೆ
ಹೊಟ್ಟೆಯಾ ಕರೆಯು ಬರೆ
ಅಧ್ಯಾಪಕನೆ ಬಾ ಇಲ್ಲಿ
ಕೂತು ನೋಡು

ದೋಸೆಯನು, ಇಡ್ಲಿಯನು
ಸೀಕಾರ ತಿಂಡಿಗಳ ತಿಂದುನೋಡು
ಕಾಫಿಯನು ತಂಪನೆಯ ಹಣ್ರಸವ
ಹೊಗೆಬತ್ತಿಯನು
ಮನದಣಿಯೆ ಕುಡಿದುನೋಡು

ತಿಂದು ಹೆಚ್ಚಾಗಿ ಮೈಮರೆಯೆ
ಭ್ರಾಂತಿಗೊಂಡವನಂತೆ ನಿಂತು ನೋಡು
ಕಾಳರಾತ್ರಿಯ ದಿನಗಳಲಿ

ಬೆಳಗಿನ ಕ್ಲಾಸಿರಲು
ಬೇಗ, ಬಹು ಬೇಗದಲಿ
ನಿದ್ದೆಯಾ ಜೋಂಪಿನಲ್ಲಿ
ಹಿಂಡು ಹಿಂಡಾಗ ವಿದ್ಯಾರ್ಥಿಗಳು
ಬಂದು ಕಾದಿರಲು
ದುಂಡಾಗಿ ಕೆಂಪಾಗಿ
ಬೆಣ್ಣೆ ದೋಸೆಯಂದು

ತಟ್ಟೆಮೇಲೇರಿ ಬರುತಲಿರೆ
ಅಲ್ಲಲ್ಲಿ ಚೆಲ್ಲಿರುವ
ಕಾಫಿ ಬಿಂದುಗಳ
ನೊಣ ಮುತ್ತುತಿರೆ
ತಟ್ಟೆ, ಬಟ್ಲಿನ ಶಬ್ದ ಮಿತಿಮೀರುತಿರೆ,
ಕೂತಲ್ಲಿ, ನಿಂತಲ್ಲಿ, ಹುಡುಗನೇ !

ಈ ಚೆಲುವ ನೋಡು
ಕಾಲವನು ಕಳೆಯುವೊಡೆ
ಸೋಮಾರಿ ಬಾ ಇಲ್ಲಿ
ತುಣುಕುಗಳ ಹೇಳುವೊಡೆ
ತುಣುಕುಮಿಣಕನೆ ಬಾ ಇಲ್ಲಿ
ಕತೆಗಳನು ಕಟ್ಟುವೊಡೆ,
ಕತೆಗಾರ ಬಾ ಇಲ್ಲಿ,
ದೇಗುಲವು ಹುಡುಗರಿಗೆ
ಉಪವನವು ರಸಿಕರಿಗೆ
ಈ ಕಾಫಿ ಮನೆಯು

——— o



ಇನ್ನೂ ಮನೆ ಕಟ್ಟಿಸುಕ್ಕೇ ಇಲ್ಲ ಆಗಲೇ ಮಿಲಿಟರಿಯವರು 'ನಮಗೆ ಬೇಕು' ಎಂದು ಹುಕುಂ ಹೊರಡಿಸಿ ತಲೆಮೇಲೆ ಕಲ್ಲು ಹಾಕುತ್ತಾರಲ್ರೀ !

ಸಭಿಕರ ಸಂಘ

ಉಪನ್ಯಾಸ ಲೆಕ್ಚರು ಭಾಷಣ ಅಂದರೆ ಸರಿ, ಯಾವ ಊರಲ್ಲಾದರೂ, ಕೇಳುವುದಕ್ಕೆ ಹೋಗುವವರು ಕೇವಲ ಅದೇ ಮಂದಿ. ಅವರಿಗದೊಂದು ಚಟ! ವಿಷಯ ಇರಲಿ, ಇಲ್ಲದಿರಲಿ, ಏನೇ ಇರಲಿ, ಭಾಷಣಕಾರರು ಯಾರೇ ಆಗಲಿ, ಮುಂದಿನ ಮೂವತ್ತು ನಲವತ್ತು ಸೀಟು ತುಂಬ ಅವರೇ.

ಹಾಗಂದಮೇಲೆ, ಅವರು ಕೊಂಚ ಮನಸ್ಸುಮಾಡಿ ತಮ್ಮದೇ ಒಂದು ಸಂಘ ಮಾಡಿಕೊಂಡು ಕಾರ್ಯದರ್ಶಿಗಳೊಂದಿಗೆ ಕೆಲವು ಷರತ್ತುಗಳನ್ನು ಕಲ್ಪಿಸಿಕೊಂಡರೆ, ಭಾಷಣಕಲೆ ಶ್ರೋತ್ರಿಯಕಲೆ, ಎರಡೂ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.


ಈ ಕೆಳಗಿನ ಷರತ್ತುಗಳನ್ನು 'ಸಭಿಕರ ಸಂಘ' ದವರು ಮಾದರಿಗಾಗಿ ಅವಗಾಹಿಸಬಹುದು :—

(೧) ನಮೂದಿಸಿದ ಕಾಲಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ನಡೆಸತಕ್ಕದ್ದು. (೨) ಉಪನ್ಯಾಸ ಹೇಗೆ ಕೊನೆಗಾಣುವುದೋ ಎಂಬ ಭೀತಿ ಇದ್ದಾಗ ಮಾತ್ರ ದೇವತಾ ಪ್ರಾರ್ಥನೆ ಮಾಡತಕ್ಕದ್ದು (೩) ಪರಿಚಯಭಾಷಣವನ್ನು ಮೊದಲೇ ಮಾಡಿದರೆ ಅನೇಕವೇಳೆ ಸಭಿಕರಿಗೆ ಮೋಸ ಮಾಡಿದಂತಾಗುವುದರಿಂದ, ಉಪನ್ಯಾಸ ಮುಗಿದ ಮೇಲೆಯೇ ಅವಶ್ಯವಿದ್ದರೆ ಮಾಡತಕ್ಕದ್ದು (೪) ಉಪನ್ಯಾಸಕರು ಕಪಟ ವಿನಯ ನೈಚ್ಯಾನುಸಂಧಾನ ಅಧ್ಯಕ್ಷ ಸ್ತೋತ್ರ ಇವುಗಳಿಗಾಗಿ ಕಾಲವಿಲಂಬಮಾಡದೆ, ನೇರವಾಗಿ ವಿಷಯಪ್ರತಿಪಾದನೆ ಮಾಡತಕ್ಕದ್ದು. (೫) ಅವರ ಗಂಟಲಿನ ಉಚ್ಚ ಪ್ರಮಾಣ ೧೦೦—೧೫೦ ಡೆಸಿಬೆಲ್ ಇರತಕ್ಕದ್ದು. (೬) ಅವರ ಮಾತಿನ ವೇಗ ನಿಮಿಷಕ್ಕೆ ೧೨೦ ಮಾತನ್ನು ಮೀರದೆ, ೮೦ ಮಾತಿಗೆ ಕಡಮೆಯಾಗದೆ, ಸಾಗತಕ್ಕದ್ದು. (೭) ಕೃತಕದಂತ ಕನ್ನಡಕ ನಶ್ಯದ ಬುರುಡೆ ಗಡಿಯಾರ ಕರವಸ್ತ್ರ ನೀರು ಮುಂತಾದ ಯಾವ ಸಾಮಗ್ರಿಯ ಅಭಾವದಿಂದಲೂ ಉಪನ್ಯಾಸಕರು ತಡವರಿಸಕೂಡದು. (೮) ಮಹಿಳಾವೃಂದ, ಪತ್ರಿಕಾ ಪ್ರತಿನಿಧಿ, ಡೆಪ್ಯುಟಿ ಕಮಿಷನರ್, ಮುಂತಾದ ಯಾವೊಂದನ್ನೇ ದಿಟ್ಟಿಸದೆ, ಉಪನ್ಯಾಸಕರು ಪಕ್ಷಪಾತರಹಿತವಾಗಿ, ಸಭಾಮಂಟಪದ ಮಂದಿರದ ಎಲ್ಲ ಕಡೆಗಳಿಗೂ ತಿರುಗುತ್ತಾ ಒದರತಕ್ಕದ್ದು. (೯) ಉಪನ್ಯಾಸದ ನಡುವೆ ಕೈ ಚಪ್ಪಾಳೆ ಮುಂತಾದವುಗಳಿಂದ ಯಾವುದಾದರೂ ಹಾಸ್ಯವೋ ಸಂಸ್ಕೃತ ಶ್ಲೋಕವೋ ಅಂಕಿ ಅಂಶವೋ ಸಭಿಕರ ಗಮನಕ್ಕೆ ಬರದಿದ್ದಲ್ಲಿ, ಕನಿಷ್ಠ ಪಕ್ಷ ೩ ಸಭಿಕರೆದ್ದು ನಿಂತು ಕೇಳಿದಕೂಡಲೇ ಉಪನ್ಯಾಸಕರು ಅದನ್ನು ಪುನಃ ಉಚ್ಚರಿಸತಕ್ಕದ್ದು. (೧೦) ಸಭಿಕರೆದುರಿಗೆ ಉಪನ್ಯಾಸಕ, ಕಾರ್ಯದರ್ಶಿ ಅಧ್ಯಕ್ಷ

ಪ್ರಾರ್ಥನಕಾರರು ಯಾರೂ ನೀರಲ್ಲದೆ ಮತ್ತಾವ ಪಾನೀಯವನ್ನೂ ಸೇವಿಸಬಾರದು (೧೧) ವಂದನಾರ್ಪಣೆಯ ನೆಪದಲ್ಲಿ ಚಂದಾ ಬಾಕಿಯ ಗುಟ್ಟನ್ನು ಕಾರ್ಯದರ್ಶಿ ಪ್ರಸ್ತಾಪಿಸಕೂಡದು (೧೨) ಯಾರಿಗೇ ಆಗಲಿ ಹಾರ ತುರಾಯಿಗಳನ್ನು ಅರ್ಪಿಸುವ ಮೊದಲು ಸಭಿಕರ ಅಪ್ಪಣೆಯನ್ನು ಪಡೆಯತಕ್ಕದ್ದು. ಕನಿಷ್ಠಪಕ್ಷ ೫ ಜನರಾದರೂ ಕೂಡದು ಎಂದರೆ, ತಂದ ಹಾರ ತುರಾಯಿಗಳನ್ನು ಹರಾಜು ಹಾಕಿಸಿ ಬಂದ ಹಣವನ್ನು ಫಂಡಿಗೆ ಸೇರಿಸತಕ್ಕದ್ದು. (೧೩) ಸಭಿಕರ ಪೈಕಿ ಕನಿಷ್ಠಪಕ್ಷ ೨೦ ಜನರು ಎದ್ದುನಿಂತು ‘ ಸಾಕು ’ ಎಂದು ಕೂಗಿದರಾಗಲಿ, ೨೫ ಜನರು ಕೂತು ಆಕಳಿಸಿದರಾಗಲಿ, ಉಪನ್ಯಾಸವನ್ನು ತಕ್ಷಣವೇ ನಿಲ್ಲಿಸತಕ್ಕದ್ದು. ಕೃತಕ ಆಕಳಿಕೆಯನ್ನೂ ಈ ಲೆಕ್ಕಕ್ಕೆ ಸೇರಿಸಿಕೊಳ್ಳಬೇಕು. (೧೪) ಕೂತುಕೊಳ್ಳಲು ಕುರ್ಚಿಗಳಿಲ್ಲದಿದ್ದರೆ, ಕಾರ್ಯದರ್ಶಿಗಳು ಪಾದರಕ್ಷೆಗಳನ್ನು ತೆಗೆದಿರಿಸಿ ರಶೀತಿ ಕೊಡತಕ್ಕದ್ದು. (೧೫) “ ಮಹನೀಯರಿಗೆ ” ಪ್ರತ್ಯೇಕಸ್ಥಳವನ್ನು ಏರ್ಪಡಿಸಕೂಡದು.

—ಪಾರಾಳಿ.

— o —



ಯಾಕೆ ನಿಂತಿದ್ದೀರಿ ಕೂತುಕೊಳ್ಳಿ ಸ್ವಾಮಿ, ಕುರ್ಚೀಲಿ !



ನೀವು ಕಛೇರೀಲಿ ಯಾವಾಗಲೂ ಹೀಗೇ ಕೂತುಕೊಳ್ಳುವುದು.

— ಅದಕ್ಕೋಸ್ಕರ ಕುರ್ಚಿಗೆ ಎರಡು ಕಾಲೇ ಇಟ್ಟುಬಿಡುತ್ತೇನೆ.

ಹೊಸ ಉತ್ಸವಗಳು

ಕೌನ್‌ಸಿಲ್ ಮೆಂಬರುಗಳು, ಅಡ್ವೈಸರುಗಳು, ಮಾಜಿ-ಹಾಲಿ ಮಂತ್ರಿಗಳು ಗೌರ್ನರುಗಳು ಗೌರ್ನೆಸ್ಸುಗಳು ಬಿರುದಾಂಕಿತರು ಬಾಪಲಿದಾರರು ತುಂಬಿ ತತ್ತರಿಸುತ್ತಿರುವ ಈ ಕಂಗಾಲದಲ್ಲಿ ಇಂಥವರು ಇನ್ನೂ ಹೆಚ್ಚು ಸಮಾರಂಭಗಳಲ್ಲಿ, ಜನತಾ ಜನಾರ್ದನರ ಮುಂದೆ ಶೋಭಾಯಮಾನವಾಗಿ ಮೆರೆಯಲು, ಅವಕಾಶ ಕಲ್ಪಿಸಿಕೊಡುವುದಕ್ಕಾಗಿಯೇ ಕೆಲವು ಹೊಸ ರೀತಿಯ ಉತ್ಸವಗಳನ್ನು ಕೆಳಗೆ ಸೂಚಿಸಿವೆ. ನಮ್ಮ ಸಲಹೆಯಂತೆ ಅವುಗಳನ್ನು ನಡೆಸಿ, ಮೇಲೆ ಹೇಳಿದ ಮಹನೀಯವೃಂದವನ್ನು ಆಹ್ವಾನಿಸಿ ಅವರ ಮನಸ್ಸಂತೋಷಪಡಿಸಬೇಕೆಂದು ಕೋರುತ್ತೇವೆ. ಈ ಉತ್ಸವಗಳು ನೆರವೇರಿದರೆ, ಅವುಗಳ ಸಂಕ್ಷಿಪ್ತ ಪತ್ರಿಕಾ ವರದಿ ಈ ರೀತಿ ಇರುತ್ತದೆ : ಉದಾಹರಣೆಗೆ :

(1) ಚಿಕರಿ ಕಫೆಯ ಸಮಾಪ್ತಿ ಮಹೋತ್ಸವ

ಈ ದಿನ ಸಂಜೆ ಸರ್ ಟಿ. ರೊಬಸ್ಟಾರವರು ಡೆಟೆನ್ಯು ರೋಡಿನಲ್ಲಿರುವ ಚಿಕರಿ ಕಫೆಯ ಸಮಾಪ್ತಿಮಹೋತ್ಸವದ ಅಧ್ಯಕ್ಷತೆ ವಹಿಸಿದರು. ಮಾಮೂಲಿನಂತೆ ಅವರ ಅನುಯಾಯಿಗಳೆಲ್ಲರೂ ಸಭೆಯಲ್ಲಿ ಹಾಜರಿದ್ದು ಕೈಚಪ್ಪಾಳೆಯಲ್ಲಿ ಭಾಗವಹಿಸಿದರು. ಹೋಟಲ್ ಮಾಲೀಕರಾದ ಅಲ್ಪಪ್ರಾಣಾಚಾರ್‌ರವರು ವರದಿಯನ್ನೊಪ್ಪಿಸಿ ಮಹಾಜನರ ಸಹಾಯವನ್ನು ಕೋರಿದರು. ಅನ್ನಪೂರ್ಣಾ ಆರ್ಕೆಸ್ಟ್ರಾರವರ ಸಂಗೀತ ನಡೆಯಿತು. ಅನಂತರ, ಸರ್ ರೊಬಸ್ಟಾರವರು ಕಫೆಯ ದುಸ್ಥಿತಿಯನ್ನು ವಿವರಿಸುತ್ತಾ ಆರೋಗ್ಯ ಅಧಿಕಾರಿಗಳ ಅಸಹನೆ, ಮಹಾಜನರ ಅಸಹಕಾರ ಹಾಗೂ ಸಾಲಗಾರರ ಪಠಾಣತನ, ಇವು ಮೂರೂ ಈ ದುರಂತ ರುದ್ರನಾಟಕಕ್ಕೆ ಕಾರಣಭೂತಗಳೆಂದು ಹೇಳಿದರು. ಅನಂತರ ಅಧ್ಯಕ್ಷರು ಮುಂಬಾಗಿಲ ಬಳಿಗೆ ಬಿಜಯಮಾಡಿ, ಸಾನಿಟರಿ ಸಿಬ್ಬಂದಿಯ ಜೈಕಾರಗಳ ನಡುವೆ ಕಫೆಯ ಬೋರ್ಡನ್ನು ಕೆಳಕ್ಕಿಳಿಸಿದರು. ಲೇಡಿ ರೊಬಸ್ಟಾರವರು ಕಫೆಯ ಇಡ್ಲಿ ಪಾತ್ರೆಯನ್ನು ಸ್ವಹಸ್ತದಿಂದಲೇ ಹರಾಜು ಹಾಕಿದರು. ಶೀಘ್ರದಲ್ಲೇ ಇತರ ಸಾಮಾನುಗಳೂ ಮಾರಾಟವಾಗಿ, ಮಾಲೀಕರು ಸುರಕ್ಷಿತವಾಗಿ ಊರು ಸೇರುವಂತಾಗಲಿ, ಎಂದು ಹಾರೈಸಿದರು. ಉಪಹಾರಾನಂತರ ಸಭೆ ಮುಕ್ತಾಯಗೊಂಡಿತು.

(2) ಶಾಲಾ ನಿರ್ಮೂಲಮಹೋತ್ಸವ

ಕಳೆದವರ್ಷ ಓದಿನಹಳ್ಳಿಯಲ್ಲಿ ತೆರೆಯಲಾದ ಸರ್ಕಾರಿ ಪ್ರಾಥಮಿಕಶಾಲೆಯ ನಿರ್ಮೂಲಮಹೋತ್ಸವವನ್ನು ಇತೋಪ್ಯತಿಶಯವಾಗಿ ಅಪೂರ್ವ ಉತ್ಸಾಹವೈಭವಗಳಿಂದ ಗ್ರಾಮವಾಸಿಗಳೂ ಇಲಾಖಾ ಅಧಿಕಾರಿಗಳೂ ಸೇರಿ ನಿನ್ನೆ ದಿ. ಬ. ಮತ್ತು

ಪ್ರ. ಪ್ರ. ಮೆಂ. ಶ್ರೀ ......ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಆರು ಮೈಲಿ ಆಚೆಗಿನ ದೊಡ್ಡ ರಸ್ತೆಯಿಂದ ಅಧ್ಯಕ್ಷರನ್ನು ಬಾಜಾಬಜಂತ್ರಿ ಸಮೇತ ಎತ್ತಿನಗಾಡಿ ಯಲ್ಲಿ ಮೆರವಣಿಗೆಯಲ್ಲೇ ಗ್ರಾಮಪ್ರವೇಶಮಾಡಿಸಿದರು. ಉಪಾಹಾರಾನಂತರ, ಹಸುರುವಾಣಿ ಚಪ್ಪರದಲ್ಲಿ ಮಹಾಸಭೆ ಸೇರಿತು. ಇಂಥ ಉತ್ಸವಗಳ ಅವಶ್ಯಕತೆ, ಶಾಲಾನಿರ್ಮಾಣದ ಕೆಲಸದಲ್ಲಿ ಗ್ರಾಮಸ್ಥರು ತೋರಿಸಿದ ಒಗ್ಗಟ್ಟು, ಅದರಿಂದ ದೇಶದ ಏಳಿಗೆಗೆ ಆಗುವ ಪ್ರಯೋಜನ ಇವೇ ಮುಂತಾದ ವಿಷಯವಾಗಿ ಅಧ್ಯಕ್ಷರು ಸುಮಾರು 3 ಗಂಟೆಕಾಲ ಭಾಷಣಮಾಡಿದರು. ಅನಂತರ, ಅವರ ನಾಲ್ಕು ವರ್ಷದ ಚಿಕ್ಕ ಬಾಲಕಮಣಿ, ಪುಟ್ಟಾರಿ, ಎಂಬುವನು ತನ್ನ ಸ್ವಹಸ್ತದಿಂದ ಶಾಲಾ ಬಾಗಿಲನ್ನು ಮುಚ್ಚಿ ಬೀಗ ಹಾಕಿ, ಬೀಗದಕೈಯನ್ನು ಊರ ಬಾವಿಯೊಳಕ್ಕೆ ಎಸೆದನು. 36 ಗ್ಯಾಸ್‌ಲೈಟುಗಳ ಸಹಿತ ಅಧ್ಯಕ್ಷರನ್ನು ಮತ್ತೆ ಮೆರವಣಿಗೆಯಲ್ಲಿ ದೊಡ್ಡ ರಸ್ತೆಗೆ ಸಾಗಿಸಿ, ಗ್ರಾಮಸ್ಥರು ಹಿಂತಿರುಗಿದರು.

(3) ಸೇತುವೆ ಬಂದ್ ಮಹೋತ್ಸವ

ಲಕ್ಷ್ಮಣತೀರ್ಥನದಿಗೆ ಬೂದಿಗುಡ್ಡದ ಬಳಿ ಹಾಕಿದ್ದ ಸೇತುವೆಯಮೇಲೆ ಪ್ರಯಾಣಿಕರೂ ಗಾಡಿಗಳೂ ಹೋಗಕೂಡದು ಎಂದು ಚೀಫ್ ಇಂಜನೀಯರ್ ಆರ್ಡರ್ ಮಾಡಿರುವರಷ್ಟೆ. ಸದರಿ ಸೇತುವೆಗೆ ಅಡ್ಡವಾಗಿ, “ ಅಪಾಯ ” ಎಂಬ ಬೋರ್ಡಿನ ಭೂಸ್ಥಾಪನೋತ್ಸವವನ್ನು ನಿನ್ನೆ ಸಂಜೆ ಮಾಜಿ ಮಂತ್ರಿ. ರು ನೆರವೇರಿಸಿದರು. ಉಪಾಹಾರದ ನಂತರ ಡಿಸ್ಟ್ರಿಕ್ಟ್‌ಬೋರ್ಡ್ ಅಧ್ಯಕ್ಷರು ಭಿನ್ನವತ್ತಳೆಯನ್ನರ್ಪಿಸುತ್ತಾ, ಬೋರ್ಡನ್ನು ಅಂದವಾಗಿ ಬರೆದುಕೊಟ್ಟ ಶ್ರೀಮಾನ್ ಶಿಂಗಂ ಅವರಿಗೆ ಒಂದು ಚಿನ್ನದ ಪದಕವನ್ನು ಡಿಸ್ಟ್ರಿಕ್ಟ್‌ಬೋರ್ಡಿನವರು ಕೊಡುವುದಾಗಿಯೂ ಅದನ್ನು ಅಧ್ಯಕ್ಷರೇ ತಮ್ಮ ಸ್ವಹಸ್ತದಿಂದ ಆತನಿಗೆ ನೀಡಬೇಕಾಗಿಯೂ ಕೇಳಿಕೊಂಡರು. ಅನಂತರ, ಡಿಸ್ಟ್ರಿಕ್ಟ್‌ಬೋರ್ಡಿನವರಿಗಾಗಿ ಶ್ರೀ ಟಿ. ಕೆ. ಎಸ್. ಅಂಡ್‌ಕೊ ರವರು ತಯಾರಿಸಿದ್ದ ಬೆಳ್ಳಿ ಪಿಕಾಸಿಯಿಂದ ಶ್ರೀ . ರು ರಸ್ತೆಯನ್ನು ಅಗೆದಂತೆ ಮಾಡಿ “ ಅಪಾಯ ”ದ ಬೋರ್ಡನ್ನು ಸೇತುವೆಗಡ್ಡವಾಗಿ ಈಚೆ ದಡದಲ್ಲಿ ನಿಲ್ಲಿಸಿದರು. ಆಚೆ ದಡದಲ್ಲಿ ನಿಲ್ಲಿಸಬೇಕಾದ “ ಅಪಾಯ ” ದ ಬೋರ್ಡನ್ನು ಮುಂದಿನ ತಿಂಗಳು ಹಾಲಿ ಶ್ರೀ . ರವರು ಭೂಸ್ಥಾಪನೆಮಾಡುವರಂತೆ.

(4) ಸುಂಕದಕಟ್ಟೆ ಧ್ವಂಸ ಮಹೋತ್ಸವ

ಮಂದಾರಪುರದ ಸುಂಕದಕಟ್ಟೆಯನ್ನು ಹೊಸದಾಗಿ ನಿರ್ಮಾಣವಾದ ಕಟ್ಟಡಕ್ಕೆ ನಾಲ್ಕು ತಿಂಗಳ ಹಿಂದೆಯೇ ವರ್ಗಾಯಿಸಿದ್ದರೂ, ಹಳೇ ಕಟ್ಟಡದ ಧ್ವಂಸೋತ್ಸವವು ಇದುವರೆಗೂ ನೆರವೇರಲಿಲ್ಲ. ಆದರೆ, ನಿನ್ನೆ ಸಂಜೆ ಡಾ. ರಾ. ಬ. ಶ್ರೀ ಅಧ್ಯಕ್ಷತೆಯಲ್ಲಿ ಈ ಸಮಾರಂಭವು ಬಹಳ ಯಶಸ್ವಿಯಾಗಿ ಕೈಗೂಡಿತು. ಊರಿನ ಅನುಕೂಲಸ್ಥರಿಗೆಲ್ಲ ಸಾಹುಕಾರ್....ರು ಚೊಕ್ಕ ಭೋಜನವನ್ನೇರ್ಪಡಿಸಿದ್ದರು. ಹೊಸ ಸುಂಕದ ಕಟ್ಟೆಯ ಬಳಿ ಮಂತ್ರಿಗಳಿಗೆ ಬಿನ್ನವತ್ತಳೆ ಮಾನಪತ್ರ ಹೂವಿನಹಾರ

ಗುಲಾಬಿ ತುರಾಯಿ ಇತ್ಯಾದಿಗಳನ್ನು ಶಾಸ್ತ್ರೋಕ್ತವಾಗಿ ಸಮರ್ಪಿಸಲಾಯಿತು. ತಳಿರು ತೋರಣಗಳಿಂದಲಂಕೃತವಾದ ಹಳೇ ಕಟ್ಟೆಯಲ್ಲಿ ಮಹಾಸಭೆ ನಡೆಯಿತು. ಹಳೆಯದನ್ನೆಲ್ಲ ತೊಡೆದುಹಾಕಿ ಹೊಸಬಾಳಿಗೆ ಹೊಸ ಜೀವನಕ್ಕೆ ಹೊಸ ಯುಗಕ್ಕೆ ತಕ್ಕಂತೆ ಹೊಸ ಹೊಸಭಾವನೆಗಳನ್ನೂ ಭವನಗಳನ್ನೂ ಕಟ್ಟಿಸಿಕೊಳ್ಳಬೇಕೆಂದು ಮುಂದಾಗಿ ಅಧ್ಯಕ್ಷರು ಭಾಷಣಮಾಡಿ ಸಭಿಕರನ್ನೆಲ್ಲ ಹುರಿದುಂಬಿಸಿದರು. ಆದ್ದರಿಂದ, ಸುಂಕದ ಕಟ್ಟಡದ ಗೋಡೆಯಿಂದ ಅವರು ಸ್ವಹಸ್ತದಿಂದಲೇ ಒಂದು ಇಟ್ಟಿಗೆಯನ್ನು ಕೀಳುತ್ತಲೂ, ಸಭಿಕ ಮಹಾಶಯರೆಲ್ಲರೂ ನುಗ್ಗಿ ಒಂದೇ ತಾಸಿನೊಳಗೆ ಇಡೀ ಕಟ್ಟಡವನ್ನು ನೆಲಸಮಮಾಡಿ ಪದಾರ್ಥಗಳನ್ನೆಲ್ಲ ತಮ್ಮ ತಮ್ಮ ಮನೆಗಳಿಗೆ ಸಾಗಿಸಿಬಿಟ್ಟರು. ರಾತ್ರಿ 9 ಗಂಟೆಗೆ ಕಂಟ್ರಾಕ್ಟರ್ ಮುನಿಯಪ್ಪನವರು ಬೆಳಗಿನ ಅತಿಥಿಗಳಿಗೆಲ್ಲ ಭೋಜನ ಕೂಟವೊಂದನ್ನೇರ್ಪಡಿಸಿದ್ದರು. ಸಂಗೀತ ನೃತ್ಯ ನಾಟಕಾಭಿನಯಗಳೊಂದಿಗೆ ಈ ಸಮಾರಂಭವು ಸಮಾರೋಪವಾಯಿತು.

— —o— —

ಮೇಷ್ಟ್ರು : ಈ ಶಿಲಾಶಾಸನಗಳನ್ನು ಕೆತ್ತಿದ್ದು ಯಾರೋ ?

ಹುಡುಗ : ನಾ. ..ನಾ....ನಾನಲ್ಲ, ಸಾರ್ !

ಮೇಷ್ಟ್ರು : ರಾಮು ! ನೀನು ಹೇಳೋ ! ಯಾರು ಕೆತ್ತಿದರು ?

ಇನ್‌ಸ್ಪೆಕ್ಟರ್ : ಯಾಕ್ರಿ ಅವನನ್ನ ಕೇಳುತ್ತೀರಿ ? ಇಷ್ಟು ಗೊತ್ತಾಗುವುದಿಲ್ಲವೆ ? ಆ ಮೊದಲನೆಯ ಹುಡುಗನೇ ಕೆತ್ತಿರಬೇಕು. ಕರೆಯಿರಿ ಅವನನ್ನ ಇಲ್ಲಿ !

◆ ◆ ◆

ಸ್ವಾಮಿ ! ತಾವು ಗುಮಾಸ್ತೆ ರಾಮಣ್ಣನವರ ನಂಟನೇ ?


ನಾನೇ ಗುಮಾಸ್ತೆ ರಾಮಣ್ಣ !

ಓ ! ಹಾಗೆ ಹೇಳಿ ಮತ್ತೆ ! ಅವರಹಾಗಿದೀರಲ್ಲಾ ನೀವು ಅಂತ ಅಷ್ಟು ಹೊತ್ತಿಂದ ಅದೇ ಅನುಮಾನ ನನಗೆ !

◆ ◆ ◆

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದವಿಗೆ ತಮ್ಮನ್ನು ಚುನಾಯಿಸಿದರೆ, ತಾವು ಮುಂದೆ ಯಾವುದೂ ಬರೆಯುವುದಿಲ್ಲವೆಂಬ ಭರವಸೆಯನ್ನು ಹಲವು ಬರಹಗಾರರು ಕೊಡಲು ಸಿದ್ಧರಿರುವರಂತೆ....ಹಾಗಾದರೆ, ಈ ವರ್ಷ ನಾಲ್ಕೈದು ಮಂದಿ ಅಧ್ಯಕ್ಷರಿರಬಾರದೇಕೆ ?

◆ ◆ ◆



ಏನ್ ರಾಯರೇ ಹೊರಟಿರಿ ?

ಅವಾನನ್ನ ಕೈಲಿ ಕಾಗದ ಕೊಟ್ಟಿದ್ದೆ ಟಪಾಲಿಗೆ ಹಾಕಲು—

—ಸರಿಯಾಗಿ ಹಾಕುತ್ತಾನೋ ಇಲ್ಲವೋ ನೋಡುಕ್ಕೆ ಹೋಗುತ್ತಿದ್ದೇನೆ,

ಕಾಯಕಲ್ಪ

ಕ್ರಿಸ್ತ ಶಕ 639 ರಲ್ಲಿ ಕರ್ಣಾಟಕ ಚಕ್ರವರ್ತಿಯಾದ ಎರಡನೆಯ ಪುಲಿಕೇಶಿಯು ಉತ್ತರದ ದೊರೆಯೂದ ಶ್ರೀಹರ್ಷನನ್ನು ಸೋಲಿಸಿ ಕರ್ಣಾಟಕದ ಕೀರ್ತಿಯನ್ನು ಹೆಚ್ಚಿಸಿದನು. ಆ ಯುದ್ಧವು ನಡೆದು ಏನಿಲ್ಲ ಅಂದರೂ ಸಾವಿರದ ಮುನ್ನೂರು ವರ್ಷಗಳ ಮೇಲಾಯಿತು. ಅದನ್ನ ನಾವು ಈಗ ನೆನೆಸಿಕೊಂಡು ಸಂತೋಷಪಡುತ್ತೇವೆ, ಬೆನ್ನು ತಟ್ಟಿಕೊಳ್ಳುತ್ತೇವೆ, ಮೀಶೆಮೇಲೆ ಕೈಹಾಕಿಕೊಂಡು ಯುದ್ಧವೀರರಂತೆ ಲೆಫ್ಟ್ ರೈಟ್ ಮಾಡುತ್ತೇವೆ. ಅದನ್ನು ಕನ್ನಡಿಗರ ಎಮ್ಮೆಯ (ಹೆಮ್ಮೆ!) ಪರುಹು ಎನ್ನುತ್ತೇವೆ.

ಏನೇ ಇರಲಿ ಆ ಯುದ್ಧಕ್ಕಿಂತ ಆಗ ನಡೆದ ಒಂದು ಸಣ್ಣ ಕಥೆಯು ಬಹಳ ಸ್ವಾರಸ್ಯವಾದದ್ದು. ಅದನ್ನು ಕೆಲವು ಆಧಾರಗಳಿಂದ (?) ಇಲ್ಲಿ ಸಂಗ್ರಹಿಸಲಾಗಿದೆ.

ಯುದ್ಧ ಎಂದರೆ ಎಲ್ಲ ಕಾಲದಲ್ಲೂ ಒಂದೆ. ಈಗ ಬಾಂಬುಗಳಿಗೂ ಟ್ಯಾಂಕುಗಳಿಗೂ ಹಣ ಖರ್ಚಾದರೆ ಆಗ ಆನೆ ಕುದುರೆಗಳಿಗಾಗಿ ಹಣ ಬೇಕೇ ಆಗಿತ್ತು. ಹರ್ಷನ ಕಡೆ ಅರವತ್ತು ಸಾವಿರ ಆನೆ ಇದ್ದುವಂತೆ. ಇನ್ನು ಅವನನ್ನು ಗೆದ್ದ ಪುಲಿಕೇಶಿಯ ಹತ್ತಿರ ಎಷ್ಟಿದ್ದುವೋ ಆ ಪರಮಾತ್ಮನಿಗೂ ತಿಳಿಯದು. ಹೀಗಿರುವಾಗ ಅವುಗಳಿಗೆಲ್ಲ ಆಹಾರ, ಜನಕ್ಕೆ ಆಹಾರ, ದನಕ್ಕೆ ಆಹಾರ— ಹೀಗೆ ಆಹಾರದ ಅಭಾವ ಬಹಳವಾಯಿತಂತೆ. ಆಗಬೇಕಾದ್ದು ನ್ಯಾಯವೇ. ಚತುರರಾದ ಮಂತ್ರಿಗಳು ಆಗಲೂ ಇದ್ದುದರಿಂದ ಆಹಾರಸಮಸ್ಯೆಯು ಬಹಳ ಬೇಗ ಪರಿಹಾರವಾಯಿತು. ಉತ್ತರದಲ್ಲೂ ದಕ್ಷಿಣದಲ್ಲೂ ರೇಷನಿಂಗ್ ಪ್ರಾರಂಭವಾಯಿತಂತೆ. ಬಡವರಿಗೆ ಹೊಟ್ಟೆ ಹೆಚ್ಚು ಅನ್ನುವಂತೆ ಬರಗಾಲದಲ್ಲಿ ಜನ ಬಾಯಿಬಾಯಿ ಬಿಡುತ್ತಿದ್ದರಂತೆ. ಬಂಗಾಳಾದಲ್ಲಂತೂ ಮಳೆಬೆಳೆ ಇಲ್ಲದೆ ಕ್ಷಾಮ ಪ್ರಾರಂಭವಾಯಿತು.

ಇಂಥಾ ಬರಗಾಲದ ಬಿಸಿಗೆ ಸಿಕ್ಕಿ ನಶಿಸಿಹೋದವರಲ್ಲಿ ದೇವದತ್ತನೂ ಒಬ್ಬ. ಅವನು ಬಾದಾಮಿ ಯಲ್ಲಿ ಇದ್ದನು. ಅಕ್ಕಿ ಹಕ್ಕಿ ಏನೂ ಸಿಕ್ಕದೇ, ಆನೆಯಂತಿದ್ದ ಪ್ರಾಣಿ ಆಡಿನಂತೆ ಆಗಿಹೋದ. ಹೆಂಡತಿ ಕೂಡ "ಗುರ್ತೇ ಸಿಕ್ಕೊಲ್ಲ" ಅಂದಳಂತೆ. 'ಔಷಧಿ ಕುಡಿ, ಅದು ಕ್ಷಯ' ಅಂತ ಜನ ಅಂದರಂತೆ. 'ಏನು?' ಎಂದ ದೇವದತ್ತ. "ಏನಾದರೂ ತಾಕತ್" ಎಂದು ಉತ್ತರ ಬಂತು ಏನು ತಾಕತ್ತು ತೊಗೊಳ್ಳೋದು? ಹಾಲು ಹಾಗಿರಲಿ ಹಾಲಿನಂತಹ ನೀರಿಗೂ ತೊಂದರೆ. ಬಾದಾಮಿಯಲ್ಲಿದ್ದೂ ಬಾದಾಮಿಗೆ ಬರಗಾಲ. ಮಥುರೆಗೆ ಹೋದರೆ ಮಧುರವಾಗಿ ಏನಾದರೂ ಸಿಕ್ಕುತ್ತೆ ಎಂದರೆ ಕೈಲಿ ಕಾಸಿಲ್ಲ. ದೊಡ್ಡವರ ಗತಿಯೇ ಕೆಟ್ಟಿರುವಾಗ ಬಡವರ ಪಾಡೇನು? ಸಿಂಹನಾದನೆಂಬ ಹರ್ಷನ ಮಂತ್ರಿ ಹೊಟ್ಟೆಗೆ ಸಾಲದೇ ಮೂಷಕನಾದ

ನಾಗಿದ್ದನೆಂದು ವರ್ತಮಾನ. ಕಾಮರೂಪದ ಜನ ಕುರೂಪಿಗಳಾಗಿದ್ದರು. ಭಂಡಿ ಕುಮಾರನು ಕೈಗಾಡಿ ಕುಮಾರನಾಗಿದ್ದ. ಹಂಸವೇಗನು ಪಿಪೀಲಿಕಾವೇಗಿಯಾದದ್ದು ಸುಳ್ಳಲ್ಲ. ಮಹಾಮಾನದವರೆಲ್ಲ ಹೀನಮಾನಕ್ಕೆ ಬಂದಿದ್ದರು. ಇದನ್ನೆಲ್ಲಾ ಕಂಡು ಪುಲಿಗೇಶಿಗೇ ಪುಕಲು ಹತ್ತಿತಂತೆ. ಇನ್ನು ಪ್ರಜಾಹಿತೈಷಿಗಳಾದ ಕೆಲವು ಪಂಡಿತ ಶಿಖಾಮಣಿಗಳು ಅಳಲೆಕಾಯಿನಿಂದಲೇ ಅಮೃತವನ್ನು ತಯಾರುಮಾಡಲು ಪ್ರಯೋಗಗಳನ್ನು ಗುಪ್ತವಾಗಿ ನಡೆಸುತ್ತಿದ್ದರಂತೆ.

ನಶಿಸಿಹೋದ ದೇವದತ್ತನಿಗೆ ಒಂದುದಿನ ಗಾಳಿಯಲ್ಲಿ ಒಂದು ವರ್ತಮಾನ ಬಂತು. ಅದು ಯಾರೋ ಯಕಟ ಋಷಿಗಳಂತೆ. ಎಲ್ಲೋ ಹಿಮಾಲಯದ ಗುಹೆಗಳಲ್ಲಿ ಇದ್ದಾರಂತೆ. ಅವರು ಯೌವ್ವನಪ್ರಾಪ್ತಿಗಾಗಿ ಒಂದು ಹೊಸ ಔಷಧಿಯನ್ನು ಕಂಡುಹಿಡಿಯುತ್ತಿದ್ದಾರಂತೆ. ಗಿಂತೆ, ಕಂತೆ, ಇತ್ಯಾದಿ. 'ಅದರ ಹೆಸರೇನು' ಅಂದ ದೇವದತ್ತ. ಗಾಳಿ "ಕಾಯಕಲ್ಪ" ಅಂತ ಸಿಳ್ಳು ಹೊಡೀತು. ದೇವದತ್ತನು ಪುಲಕಿತನಾದ. ಕಾಯ ಸ್ವಲ್ಪವಾದ ತನಗೆ ಕಾಯಕಲ್ಪವೇ ಸರಿ ಎಂದುಕೊಂಡ. ನಮಯ ಕಾದು ಹೆಂಡತಿಗೆ ಅದನ್ನ ತಿಳಿಸಿದ. 'ಮೊದಲು ಆ ಔಷಧಿ ನನಗೆ ಕೊಡಿಸಿ' ಅಂದ್ಲು ಆ ಹೆಣ್ಣು. 'ಇರಲಿ ತರುತ್ತೇನೆ ನೋಡು' ಅಂತ ತೊಡೆ ತಟ್ಟಿ ದೇವದತ್ತನು ಉತ್ತರಮುಖಿಯಾದ. ಸಂಸ್ಕೃತಜ್ಞಾನ ಚೆನ್ನಾಗಿದ್ದು ಕಾಳಿದಾಸನ ಮೇಘದೂತವನ್ನು ಓದಿದ್ದನಾದಕಾರಣ ನಮ್ಮ ಕಥಾನಾಯಕನು ಶ್ರಮವಿಲ್ಲದೆ ಹಿಮಾಲಯದ ದಾರಿಯನ್ನು ಗುರುತಿಸಿ ಅದರ ತಪ್ಪಲನ್ನು ಸೇರಿದನು. ಉಪವಾಸ ವನವಾಸಗಳಿಂದ ಆತನು ಅರೆಜೀವಿಯಾಗಿದ್ದನು. ಆದರೂ ಅವನ ಪ್ರಾಣಪುಷ್ಪವು ಕಾಯಕಲ್ಪದ ತೊಟ್ಟಿನ ಬಲದಿಂದ ಇನ್ನೂ ಉದುರದೇ ಜೋಲಾಡುತ್ತಿತ್ತು. ಕಷ್ಟಪರಂಪರೆಗಳನ್ನು ಎದುರಿಸಿ ದೇವದತ್ತನು ಯಕಟ ಮುನಿವರ್ಯರ ಆಶ್ರಮವನ್ನು ಪತ್ತೆಮಾಡಿದನು. ಆಗ ಸಂಜೆಯಾಗಿತ್ತು. ಮಂಜುಮುಸುಕಿದ ಹಿಮಾಲಯದ ಬೆಳುಪನ್ನು ಕತ್ತಲ ಮೊತ್ತವು ನುಂಗುತ್ತಿತ್ತು.

ಆಶ್ರಮದ ಹೊರನಿಂತು ಆಲಿಸಿದ. ಒಳಗಡೆ ಶಿಷ್ಯರು ಸಂಭ್ರಮದಿಂದ ಕೆಲಸ ಮಾಡುತ್ತಿದ್ದುದರ ಅರಿವಾಯಿತು. ಯಕಟ ಋಷಿಗಳ ಮಾತುಗಳು ಆಗಾಗ ಅರ್ಧಂಬರ್ಧ ಕೇಳಿಸುತ್ತಿತ್ತು. ", ಇನ್ನೇನು ಕಾಯಕಲ್ಪ ಸಿದ್ಧಿ ಆದಂತೆಯೇ ಸರಿ .. .... ಇಗೋ ಈ ಚೂರ್ಣವನ್ನು ಆ ಕಷಾಯದಲ್ಲಿ ಕಲಸು . ಉಷ್ಣಪ್ರಮಾಣ ಹದಗೆಡದಿರಲಿ... ... ಒಂದು ತೊಟ್ಟು ಕುಡಿದರೆ ಸಾಕು ಹತ್ತುವರ್ಷದ ಶಕ್ತಿಯನ್ನು ಗಳಿಸಿಕೊಂಡಂತೆಯೇ ... ... ಯುದ್ಧ.... ನಷ್ಟ ... ಪೆದ್ದ.... ಕಷಜ. ಲೋಕಸೇವಾರ್ಥ ...." ಈ ಮಾತುಗಳನ್ನು ಕೇಳುತ್ತಲೇ ದೇವದತ್ತನ ಹೃದಯವು ನಾಯಿಯ ಬಾಲದಂತೆ ಬಡಿದುಕೊಂಡಿತು. ಹೋಗಿ ಯಕಟ ಋಷಿಗಳಿಗೆ ನಮಸ್ಕಾರಮಾಡಿ ಭಿಕ್ಷೆ ಬೇಡಲೇ ಎಂದುಕೊಂಡ. ಆ ವಿಚಾರ ಒಪ್ಪಲಿಲ್ಲ. ಮೂಗಿನಲಿ ಬೆರಳಿಟ್ಟ ! ಮುಕುಟವ ತೂಗಿದ ! ತುಸು ನಕ್ಕ. ಕೈಕೈ ಹಿಸುಕಿದ. ಪಕ್ಕದ ಒಂದು ಪೊದೆಯಲ್ಲಿ ಕಾಣದಂತೆ ಅವಿತುಕೊಂಡು ಕುಳಿತ.

ಹನ್ನೆರಡು ಗಂಟೆ ಇರಬಹುದು. ಮಟಮಟರಾತ್ರಿ. ಯಕಟ ಮುನಿವರ ಆಶ್ರಮವು ನಿದ್ರಾಂಗನೆಯ ಆಲಿಂಗನದಲ್ಲಿದೆ. ಆಗ ದೇವದತ್ತನ ಕಣ್ಣುಗಳು ಅರಳಿದುವು. ಸೊಂಟ ನೆಟ್ಟಗಾಯಿತು. ಕಾಲು ಲೆಫ್ಟ್ ರೈಟ್ ಮಾಡಿತು. ಬೆಕ್ಕಿನಂತೆ ಅವನು ಆಶ್ರಮವನ್ನು ಪ್ರವೇಶಿಸಿದ. ಎಲ್ಲರಿಗೂ ಗಾಢನಿದ್ರೆ. ಹುಡುಕಿದ. ಅಗ್ನಿಕುಂಡ, ಹುಲಿಯಚರ್ಮ, ಋಷಿಗಳು, ನಿದ್ರೆ, ಅವರ ತಲೆಯ ಬಳಿ ದೊಡ್ಡದೊಂದು ಪಾತ್ರೆ, ಸುತ್ತಲೂ ಸಣ್ಣಸಣ್ಣ ಪಾತ್ರೆಗಳು, ದೊಡ್ಡ ಪಾತ್ರೆಯಮೇಲೆ ಏನೋ ಬರೆದಿತ್ತು. ಬೆಂಕಿಯ ಬೆಳಕಿನಲ್ಲಿ ಓದಿದ. ಕಾ....ಯ ಕ ಲ್ಪ! ಹಿರಿ ಹಿರಿ ಹಿಗ್ಗುತ್ತ ಅದರ ಹತ್ತಿರಕ್ಕೆ ಹೋಗಿ ಬಿರಿ ಬಿರಿ ನೋಡುತ್ತ ಪಾತ್ರೆಯನ್ನು ಕೈಯಲ್ಲಿ ಎತ್ತಿ ಕಣ್ಣುಮುಚ್ಚಿ ಕುಡಿದುಬಿಟ್ಟ... ಆದಂತಾಯಿತು! ಬಹುದಿನದ ಬಾಯಾರಿಕೆ. ಬಹುದಿನದ ಬಯಕೆ. ಹಸಿವು. ಪಾತ್ರೆ ಬರಿದಾಗಿತ್ತು. ಮುಂದೆ ಏನಾಯಿತೋ ದೇವದತ್ತನಿಗೆ ತಿಳಿಯದು.

ಆದರೆ ಬೆಳಗಿನಲ್ಲಿ ಆಶ್ರಮದಲ್ಲಿ ದೊಡ್ಡ ಕೋಲಾಹಲವೆದ್ದಿತ್ತು ಇದೆಲ್ಲಿಂದ ಬಂತು? ಯಾವಾಗ? ಹೇಗೆ? ಮೈತುಂಬ ಕೂದಲಿದೆ? ಎಂದು ಎಲ್ಲರೂ ಪ್ರಶ್ನೆ ಮಾಡುವರೇ ದೇವದತ್ತನು 'ಟರ್' ಎಂದು ಹಲ್ಲು ಬಿಟ್ಟ!


ಹತ್ತುವರ್ಷದ ಯೌವ್ವನವನ್ನು ಪಡೆಯುವ ಅವಸರದಲ್ಲಿ ದೇವದತ್ತನು, ಪ್ರಮಾಣಮೀರಿ ಕಾಯಕಲ್ಪವನ್ನು ಸೇವಿಸಿ ಪುನರ್ಜನ್ಮವನ್ನೇ ಪಡೆದ!—ಕೋತಿಯಾಗಿಬಿಟ್ಟ— ದೊಡ್ಡ ಗೋರಿಲ್ಲ ಆಗಿಬಿಟ್ಟ.

— ಎನ್ ಪ್ರಹ್ಲಾದರಾವ್.

ಗಂಡ: ನಿನ್ನ ಡ್ರೆಸ್ ಅವಾಂತರದಿಂದ ನೋಡು, ಆ ಬಸ್ ಆಗಲೇ ಹೊರಟು ಹೋಯಿತು.

ಹೆಂಡತಿ: ನೀವು ಅಷ್ಟು ಅವಸರಮಾಡಿ ಎಳೆದುಕೊಂಡು ಬಂದದ್ದರಿಂದ, ನೋಡಿ, ಮುಂದಿನ ಬಸ್ ಇನ್ನೂ ಬರಲೇ ಇಲ್ಲ, ಇಲ್ಲೇ ಕಾಯುತ್ತಾ ನಿಂತಿರಬೇಕು ಹಾಳು.

"ಇಹಲೋಕವೆಂಬುದು ವಕ್ಕಾರನ ತಮ್ಮಟೆಯಯ್ಯಾ!" ಆರ್ಯೋಕ್ತಿ.



ನಮ್ಮಪ್ಪ ಕೊಂಡುಕೊಂಡಿದ್ದು ಈ ಕಾರನ್ನ ನಾನ್ನೂರು ರೂಪಾಯಿಗೆ—ಮಿಲಿಟರಿ ಕಂಟ್ರಾಕ್ಟರಿಂದ...

—ನಿಮ್ಮಪ್ಪ ಈಗ ಮಿಲಿಟರಿ ಎಂಜಿನಿಯರಲ್ಲವೇ ?

—ಹೌದು, ಮೊನ್ನೆ ತಾನೆ ಇಲ್ಲಿ ಛಾರ್ಜು ತೆಗೆದುಕೊಂಡರು.

ಒಲೆಗೊಂದು ಓಲೆ

ನನ್ನ ಪ್ರೀತಿಯ ಗೆಳತಿ ಲೀಲಾ !

ನಿನ್ನ ಅಚ್ಚುಮೆಚ್ಚಿನ ಮುದ್ದು ಕಾಗದ ನಿನ್ನೆ ಬಂತು. ಇಲ್ಲಿಯವರೆಗೆ ಅದನ್ನು ಎಂಟಾವರ್ತಿ ಓದಿದ್ದೇನೆ. ಅದನ್ನು ಓದಿದಾಗ ನನ್ನ ಕಣ್ಣಲ್ಲಿ ನನ್ನ ಅರಿವಿಲ್ಲದೆಯೇ ನೀರು ತುಂಬಿತು. ಮೈಸೂರು ಹೈಸ್ಕೂಲಲ್ಲಿ ನಾವು ಕಳೆದ ಮೂರುವರ್ಷಗಳ ಸವಿ ನೆನಪುಗಳೆಲ್ಲ ಮತ್ತೆ ನನ್ನ ಹೃದಯವನ್ನು ತಣಿಸಿದುವು. ಲೀಲಾ! ನನ್ನ ಎಜು ಕೇಷನ್ ಅಲ್ಲಿಗೇ ಮುಗಿಯಿತು. ಇವರ ಮನೆಯವರು ಅದಕ್ಕೆ ಕಲ್ಲು ಹಾಕಿದರು. ನೀನೂ ಪದ್ಮನೂ ಕಾಲೇಜು ಸೇರಿದಿರಿ ಅಂತ ಕೇಳಿದಾಗ ನಾನು ಎಷ್ಟು ಅಸೂಯೆ ಪಟ್ಟೆ ಗೊತ್ತೆ....ಗೊತ್ತಿದ್ದರೆ, ನೀನು ಈಗ ನಿನ್ನ ಮದುವೆಗೆ ನನಗೆ ಕಾಗದ ಬರೆಯು ತ್ತಿರಲಿಲ್ಲ. ಅದಿರಲಿ, ನಾವು ಈಗ ಇಲ್ಲಿದೇವೆ ಅಂತ ನಿನಗೆ ಹೇಗೆ ತಿಳಿಯಿತು ? ಥ್ಯಾಂಕ್ಸ್, ಲೀಲಾ ! ನೀನೇ ಇಡೀ ಅಡ್ರೆಸ್ಸನ್ನು ಪತ್ತೆಹಚ್ಚಿ ಬರೆದು.... ತುಂಬಾ ಕಷ್ಟಪಟ್ಟಿದೀಯಾ 'ಗೆಳತಿ' ಅಂದರೆ, ಹಾಗಿರಬೇಕು. ಬೈದಿ ಬೈ, ನಮ್ಮ ಕ್ಲಾಸಿನಲ್ಲಿ ಸೀತಮ್ಮ ಇರಲಿಲ್ಲವೆ, ಕುಳ್ಳಿ ಸೀತಮ್ಮ, ನಮ್ಮ ಎದುರು ಮನೆಯಲ್ಲೇ ಇದಾಳೆ.... ಆಗಲೇ ಮೂರು ಮಕ್ಕಳು ... ನನ್ನನ್ನ ಕಂಡರೆ ಮುಸುಡಿ ತಿರುಚಿ ಕೊಂಡು ಹೋಗುತ್ತಾಳೆ. ಹೋಗಲಿ. ಅವಳ ಮೂತಿನೋಡೋ ಅಸಹ್ಯವೇ ತಪ್ಪಿತು ! ಬಿಡು...

ನಿನ್ನ ಪ್ರಾಣಕಾಂತನಾಗಲಿರುವ ಪುಣ್ಯಪುರುಷ ಸೆಕ್ರೆಟೇರಿಯಟ್‌ನಲ್ಲಿ ಆಗಲೇ ಕೆಲಸದಲ್ಲಿದ್ದು ತಿಂಗಳಿಗೆ ೭೫+೧೫+೮-೮-೦... ಎಂದು ನೀನು ಬರೆದಿರುವುದನ್ನು ನೋಡಿ ನನಗೆ ಪರಮಸಂತೋಷ. ನಿನಗೆ ಜ್ಞಾಪಕವಿದೆಯೇ, ಲೀಲಾ, ನಾವು ನಮ್ಮ ಸ್ಕೂಲು ಗಾಡಿಖಾನೆಯಲ್ಲಿ ಕೂತು ಗಂಡನಿಗೆ ಯಾವ ಇಲಾಖೆಯಲ್ಲಿ ಕೆಲಸ ಇರಬೇಕು, ಅಂತ ಚರ್ಚೆಮಾಡಿದ್ದು ? ನೀನು ಅವತ್ತು ಪೋಲೀಸ್ ಇಲಾಖೆ ಯಾದರೆ, ಬಸ್‌ನಲ್ಲಿ ಕಾಸಿಲ್ಲ, ಅಡಿಗೆ ಶಿಶುಪಾಲನೆ ಸೌದೆ, ನೀರು, ಇತ್ಯಾದಿಗಳಿಗೆ ಪೋಲಿಸಿನವರೇ ಸಿಕ್ತಾರೆ, ಅರಸಿನ ಕುಂಕುಮಕ್ಕೆ ಹೋಗುವಾಗ ಹೆಡ್ಕೇಡಂ ಜವಾ ನನ್ನ ಕರೆದುಕೊಂಡು ಹೋಗುವಹಾಗೆ, ಕಾನ್‌ಸ್ಟೇಬಿಲ್ನೇ ಹಿಂದೆ ನಡೆಯಿಸಿಕೊಂಡು ಹೋಗಬಹುದು, ಎಂದೆಲ್ಲ ಹೇಳಿದ್ದೆ... ಈಗ....ಅವರಿಗೆ ಮನೆ ಜವಾನರೆಷ್ಟು ಮಂದಿ ಇದಾರೆ, ಲೆಕ್ಕಹಾಕಿದಿಯಾ ? ಬರೀತಿಯಾ, ಮುಂದೆ ? ನಿನ್ನ ಹಿಂದೆ ಬರುವಾಗ ಡವಾಲಿ ಹಾಕಿಸು, ಮರೆಯಬೇಡ....

ಆದರೂ, ಲೀಲಾ !, ಹೇಳೇಬಿಡ್ತೇನೆ, ಬಾಗಿಲು ಬೋಲ್ಟ್ ಹಾಕಿಕೊಂಡು, ಓದು, ಇದನ್ನ ! ಓದಾದಮೇಲೆ, ಒಲೆಯೊಳಕ್ಕೆ ಹಾಕಿಬಿಡು !.... ಖಂಡಿತ ?

ಆಮೇಲೆ... ಊಂ.... ನಿನ್ನ ಸಂಗ ಬಿಟ್ಟುಬಿಡುತ್ತೇನೆ, ಅಷ್ಟೆ ... ಖಂಡಿತ.... ಒಲೆಗೆ ಹಾಕ್ತಿಯಾ? ಆ? ಹುಂ ಹಾಗಾದರೆ, ಮುಂದಕ್ಕೆ ಬರಿಯುತ್ತೇನೆ .. ನಿನ್ನನ್ನು ಕಂಡರೆ ನನಗೆ ಈಗಲೂ ಕೊಂಚ ಹೊಟ್ಟೆಕಿಚ್ಚು! . .

ಯಾಕೆ ಅಂತೀಯೋ? ಹೇಳುತ್ತೇನೆ. ನಾವು ಅವತ್ತು ಮಾತಾಡಿದ ಹಾಗೇನೇ ನನಗೇನೋ ಡಾಕ್ಟರೇ ಸಿಕ್ಕು. ಆದರ ಆದರೆ ದಿನವೂ ನನಗೆ ಅದೇ ಕೊರಗು. ಇವರು ಇಂಜಿನಿಯರಾಗಿರಬಾರದಿತ್ತೆ? ಅಕೌಂಟೆಂಟಾಗಿರಬಾರದಿತ್ತೆ? ಕ್ಲಾರ್ಕಾಗಿರ ಬಾರದಾಗಿತ್ತೆ? ಪೋಲೀಸು? ಎಕ್ಸೈಸು? ಫಾರೆಸ್ಟು? ಕಡೀಗೆ,... ಮೇಷ್ಟ್ರು? .. ಆದರೆ, ನನ್ನ ಹಣೆಬರಹಕ್ಕೆ ಯಾರನ್ನು ದೂರಿದರೇನು ಫಲ? ನಾನೇ ಬರೆದು ಕೊಂಡೆನಲ್ಲಾ, ಡಾಕ್ಟರು, ಅಂತ!

ನೀನೇ ಯೋಚಿಸು, ಲೀಲಾ! ಮೈ ಅಂದರೆ ಇವರಿಗೆ ನರ, ಮಾಂಸ, ತೊಗಲು, ರಕ್ತ ಪಿತ್ತರಸ, ಇತ್ಯಾದಿಗಳ ಗೂಡು, ಅಷ್ಟೆ, "ಏನುಸುಖ ಇದು ಏನುಸುಖ" ಅಂತ ದಾಸರಪದದಲ್ಲಿ ಬರುತ್ತದಲ್ಲಾ, ಹಾಗೆಯೇ. ಮುತ್ತಿನಸಾಲಿನ ಹಲ್ಲು, ಹವಳದ ತುಟಿ, ಗುಲಾಬಿ ಕೆನ್ನೆ, ಮಿಂಚಿನ ಬಳ್ಳಿಯಹಾಗಿನ ಮೈ .... ಊಹುಂ. ಇವರಿಗೆ ನಾವು ಅಂದರೆ, ಇಷ್ಟು ಉಪ್ಪು, ಇಷ್ಟು ಕಬ್ಬಿಣ, ಇಷ್ಟು ನೀರು ಇಷ್ಟು ಸೋಡಿಯಂ ನಿನ್ನ ತೂಕ ಕಡಿಮೇ ಆಯಿತು, ನಿನ್ನ ಟೆಂಪರೇಚರ್ ಇಷ್ಟು ಇದ್ದೇ ಇರಬೇಕಲ್ಲ, ಇದೇ ಇವರ ಪ್ರೀತಿಯ ಮಾತುಗಳು! ಹನಿಮೂನಿನ ಹನಿಗಳು!

ಮೊನ್ನೆ ಹೊಸದಾಗಿ ಬ್ರಿಡ್ಜ್ ಬಳೆ ಮಾಡಿಸಿ ಹಾಕಿಕೊಂಡು, ಕೈ ತೋರಿಸಿದರೆ, ಹಿಡಿದು, ಪಲ್ಸ್ ಎಣಿಸುತ್ತಾರೆ! ಇಲೆಕ್ಟ್ರಿಕ್ ಬಿಲ್ ಬಂದಿದೆ, ಅಂದರೆ ಎಲ್ಲೋ ಜ್ಞಾನದಲ್ಲಿ, ಇಂಜೆಕ್ಷನ್ ಕೊಟ್ಟರೆ ಸರಿಹೋಗುತ್ತೆ, ಅಂತಾರೆ. ಬೆಂಡೋಲೆ ತಿರುಪು ಕೆಟ್ಟುಹೋಗಿದೆ ಅಂದರೆ, ಎಕ್ಸ್‌ರೇ ನೋಡುತ್ತೇನೆ, ಅಂತಾರೆ. ಸದಾ ಖಾಯಿಲೆ ಕಸಾಲೆ ವಾಂತಿ ಭೇದಿ ಕಜ್ಜಿ ಜ್ವರ ಇದರ ವಿಚಾರವೇ, ಊಟಮಾಡುವಾಗಲೂ, ನಾನು ಯಾರ ವಿಷಯ ಮಾತನಾಡಿದರೂ, ಅವರಿಗೆ ಡಯರಿಯ, ಇವರಿಗೆ ಅನೀಮಿಯ, ಅಂತ ಹೊಲಸನ್ನೇ ನೆನೆಸುತ್ತಾರೆ. ರೇಗಿದರೆ, 'ರೆಸ್ಟ್ತಕೊ', ತೆಪ್ಪಗಿದ್ದರೆ, 'ಓಡಾಡು', ಓಡಾಡಿದರೆ. 'ಸುಸ್ತು'; ಒರಗಿದರೆ, 'ಟಾನಿಕ್'; ಕೊಂಚ ಉಬ್ಬಿದರೆ, 'ಗ್ಲಾಂಡ್', ಕರಗಿದರೆ, 'ಟಿ. ಬಿ."........

ಸಾಮಾನ್ಯವಾಗಿ ನಾವು ಮನೆಯಲ್ಲಿ ತಲೆನೋವು ಅಂದರೆ, ಸಿನಿಮಾಗೋ ಲಾಲ್‌ಬಾಗಿಗೋ ತಂಪು ಹೊತ್ತಿನಲ್ಲಿ ತಿರುಗಿಸಿನೋದಿಲ್ಲವೆ ಗಂಡಸರು? ಇವರು ಹಾಗಲ್ಲ. ರೊಮಾನ್ಸು, ಜವುಳಿ ಅಂಗಡಿ, ಜುಯಲರಿಮಾರ್ಟ್‌ನ ಚಿಕಿತ್ಸೆ ಇವರಿಗೆ ಹೊಳೆಯುವುದೇ ಇಲ್ಲ. ಇವರೇನು ಮಾಡುತ್ತಾರೆ ಗೊತ್ತೆ, ನಾನು ಬೇಕು ಅಂತ ಮಂಕು ಬಡಿದ ಹಾಗೆ ಕೂತು ಮೊಂಡಾಟ ಹಿಡಿದರೆ? ..."ಇದನ್ನ ನುಂಗಿ

ತಣ್ಣೀರು ಕುಡಿ!'' ಅಂತ ಎರಡು ಕರೀ ಗುಳಿಗೆ ಕೊಡುತ್ತಾರೆ. ಇದಕ್ಕೇನು... ನಗೋದೇ, ಅಳೋದೇ ನೀನೇ ಹೇಳು, ಲೀಲಾ! ಹೆಚ್ಚುಕಡಮೆ, ನಾವು ಹೇಗೆ ಕಂಡ್ರೂನೂ, ಹಲ್ಲು ಕಿತ್ತುಬಿಡುತ್ತೇನೆ, ಸೂಜಿ ಚುಚ್ಚಿಬಿಡುತ್ತೇನೆ, ಒಳ ನಾಲಗೆ ಕುಯ್ದುಬಿಡುತ್ತೇನೆ, ರಕ್ತ ತೆಗಿಸುತ್ತೇನೆ, ಹಣೆಗೆ ಐಸ್ ಕಟ್ಟಿಕೊ, ... ಹೊಟ್ಟೆಗೆ ಬಿಸಿನೀರು ಕಟ್ಟಿಕೊ, ಇದೇ ಇವರ ಲಲ್ಲೆ, ಉಪಚಾರ, ಇವರ ಒಲವಿನ ರೀತಿ!

ಊಟಕ್ಕೆಕೂತರೆ, 'ಇದನ್ನ ಇಷ್ಟು ತಿನ್ನು' 'ಅದನ್ನ ಮುಟ್ಟಬೇಡ' 'ಇದರಲ್ಲಿ ವಿಟಮಿನ್ ಇದೆ' 'ಕಣ್ಣಿಗೊಳ್ಳೇದು ಕೆಂಪು ಮೂಲಂಗಿ' ಥೂ ಥೂ "ಸಾರಿಗೆ ಉಪ್ಪುಸಾಕೆ?" "ಅಂತ ನಾನು ಕೇಳಿದರೆ," ನಿನ್ನ ಮೂಳೆಯಲ್ಲಿ ಕಾಲ್ಸಿಯಂ ಸಾಲ್ದು" ಅಂತಾರೆ! ಆ 'ಟೊಮೊಟೋನ'ನ ನಮ್ಮೂರಿನವರು ಅಸಹ್ಯ ಅಂತ ಬಿಸಾಕ್ತಿದ್ದರಲ್ಲಾ, ಅದನ್ನೇ ಮೂರುಹೊತ್ತು ಸಾರು, ಹುಳಿ, ಸೂಪು, ಬಜ್ಜಿ, ಪಾನಕ ಸಿರಪ್, ಕೋಸುಂಬರಿ ಅರೀ ಟೊಮಾಟೋನೆ ನನಗೀಗ. ಆದರೆ, ದಿನ ಬೆಳಗಾದರೆ ನೆಗಡಿ ಕೆಮ್ಮಲು ನೂರೆಂಟು ವ್ಯಾಧಿ ಇದ್ದೇ ಇದೆ...

ಮನೆಯನ್ನ ಕ್ವಿನೀನಿನಲ್ಲಿ ಕಟ್ಟಿ ಫಿನೈಲ್‌ನಲ್ಲಿ ಸಾರಿಸಿ ಬೋರಿಕ್ ಪೌಡರ್ ರಂಗೋಲಿ ಹಾಕಿ ಮಕ್ಲೀನ್ ಮಾಡಿಸಿ ಮಿಲ್ಕ್ ಅಪ್ ಮಗ್ನೀಸಿಯಾ ಕುಡಿದು ನಾನು ವಿಟಮಿನ್ ತಿನ್ನುತ್ತಾ ಒಳ್ಳೇ ಪೊಟಾಸಿಯಂ ಪೆರ್ಮಾಂಗನೇಟ್ ಬೊಟ್ಟು ಇಟ್ಟುಕೊಂಡು ಸರ್ಜಿಕಲ್ ಕಾಟನ್ ಸೀರೆ ಉಟ್ಟು ...... ಬರೋ ಕೋಪದಲ್ಲಿ ಪೆನ್ನು ನಿಂತುಹೋಗುತ್ತೆ.

ಇನ್ನೊಂದು ಧರ್ಮಸಂಕಟ, ಲೀಲಾ! ಇವರ ಹತ್ತಿರ ಔಷಧಿ ಇದೇಂತ ಸಾವಿರಾರು ಜನ ಬರ್‍ತಾರೆ. ಹೆಂಡತಿ ಅಂತ ಅಂದಮೇಲೆ ಗಂಡನ ಗುಣ ಚೆನ್ನಾಗಿ ಅರಿತಿರಬೇಕು, ಸರಿ. ಅರಿತಿದೇನೆ. ಶ್ರೀರಾಮಚಂದ್ರನೇ ಹೌದು, ಹೆಸರಿಗೆ ತಕ್ಕಹಾಗೆ... ಆದರೂ, ನನ್ನ ಹುಚ್ಚುಬುದ್ಧಿ ಒಂದೊಂದು ಸಲ ತಲ್ಲಣಿಸುತ್ತದೆ. ತಲ್ಲಣಿಸಕೂಡದು! ನ್ಯಾಯ ಆದರೂ, ಹೆಣ್ಣಿನ? ಹೆಣ್ಣಿನವೇನು? ನಾವು ಡಾಕ್ಟರಾಗಿ ನೂರಾರು ಗಂಡಸರಿಗೆ ಔಷಧಿ ಉಪಚಾರಮಾಡುತ್ತಿದ್ದರೆ, ಗಂಡಸರಿಗೂ ಈರೀತಿ ಅನುಮಾನ, ಭಯ, ಭೀತಿ, ಸಂದೇಹ, ಉಂಟಾಗುವುದಿಲ್ಲವೇನು?

ಅಂತು, ನೀನು ನಿಜವಾಗಿಯೂ ಪುಣ್ಯವಂತೆ, ಲೀಲಾ! ಮದುವೆಗೆ ಸಾಧ್ಯವಾದರೆ ಬರ್‍ತೇನೆ.... ತೋರುತ್ತದೆ. ತೋರುತ್ತದೆ, ಏನು? ಹೇಗೆ ಬರುವುದು, ನಾನು?

ಆಗೋದಿಲ್ಲ, ಲೀಲಾ! ಹುಂ. ಈಗ, ಹೋಗು, ಒಲೆ ಹತ್ರಕ್ಕೆ- ನಡಿ.

ನಳಿನ ಗೆಳತಿ,

ಪ್ರೀತಿಯ "ವೇಣಿ"



ರಿಕ್ರೂಟಿಂಗ್ ಆಫೀಸಿಗೆ ಹೋಗಬೇಕು-- ನಿಲ್ಲಿಸಿರಿ ಬಸ್ಸು ;

ಇನ್ನೊಂದು ಬಸ್ಸು ಬರುವ ಹೊತ್ತಿಗೆ--ಯುದ್ಧ ಮುಗಿದುಹೋಗುತ್ತೆ

ಮದುವೆ ಮನೆ ಡಿನ್ನರ್

—o—

(ಎಸ್. ವಿ. ವಿ. ಕೃತಂ)

ಮದುವೆ ಮನೆಯಲ್ಲಿ ಯಾರಿಗೆ ಯಾವುದು ಮುಖ್ಯವಾಗಿದ್ದರೂ ನಮ್ಮಂಥ ವರಿಗೆ ಡಿನ್ನರ್ ತಾನೆ ಬೇಕಾದ್ದು? ರಂಗಸಾಮಿ ಡಿನ್ನರಿಗೆ ಕರೆದಿದ್ದ. ಡಿನ್ನರಿಲ್ಲದೆ ಯಾವುದೂ ನಡಿಯುವ ಹಾಗಿಲ್ಲ, ಅನ್ನಿ. ಒಬ್ಬನಿಗೆ ರಾವ್‌ಸಾಹೇಬ್ ಬಂತು! ಡಿನ್ನರ್! ಗಂಡುಮಗು ಆಯಿತು! ಡಿನ್ನರ್! ಅದಕ್ಕೆ ಪಾಸಾಯಿತು, ಡಿನ್ನರ್, ಖಾಯಿಲೆ ವಾಸಿ ಆಯಿತು, ಡಿನ್ನರ್! ಕಾಶಿಗೆ ಹೋಗಿ ಗಂಗಾಸ್ನಾನ ಮುಗಿಸಿ ಬಂದರು, ಡಿನ್ನರ್! ಹೊಟ್ಟೆ ತೃಪ್ತಿ ಹೊಂದಿದಮೇಲಲ್ಲವೆ ಇತರ ಖುಷಿ ಎಲ್ಲವೂ?

ಎಲ್ಲಾದರೂ ಒಳ್ಳೇ ಡಿನ್ನರ್ ದಕ್ಕುತ್ತೆ ಅಂದರೆ ನಾನು ಬಿಡುವುದಿಲ್ಲ. "ಏನಪ್ಪ ಮಾಡುವುದು? ಅವನು ಡಿನ್ನರಿಗೆ ಕರೆದುಬಿಟ್ಟಿದಾನಲ್ಲಾ! ಶುದ್ಧ ನ್ಯೂಸನ್ಸ್, ಕಣೊ! ಚಕ್ಕರ್ ಕೊಟ್ಟರೆ ಬೈತಾನಲ್ಲೊ!" ಎಂದು ಗೊಣಗುತ್ತಾರಲ್ಲಾ, ಅವರಿಗೆ ಇರುವುದು ತಲೆಯೊಳಗೆ ಮೆದುಳಲ್ಲ, ಹೊಟ್ಟೆಯೊಳಗೆ ಹುಣ್ಣು!

"ಹನ್ನೆರಡು ಗಂಟೆಗೆ ಸರಿಯಾಗಿ ಎಬ್ಬಿಸಿ ಬಿಡುತ್ತೇನೆ ಲೇಟ್‌ಮಾಡಬೇಡ, ಬಂದೇ ಬರಬೇಕು, ಬೇಗ ಬರಬೇಕು" ಎಂದು ರಂಗಸಾಮಿ ಖುದ್ದಾಗಿ ಹೇಳಿದ್ದ. ನಾನು ಗೋಪು ರಾಜು ಇಬ್ಬರಿಗೂ ಕ್ಲಬ್ಬಲ್ಲಿ, "ಲ್ರೋ! ನಮ್ಮ ಮನೆಮೇಲೇ ಬನ್ನಿರೋ! ಒಟ್ಟಿಗೆ ಹೋಗೋಣ" ಎಂದು ಕೇಳಿಕೊಂಡಿದ್ದೆ. ಡಿನ್ನರಿಗೆ ಯಾವಾಗಲೂ ಒಂಟಿಯಾಗಿ ಹೋಗಕೂಡದು. ಎಡಬಲಕ್ಕೆ ಇಬ್ಬರಿರಲೇ ಬೇಕು. ಹತ್ತೂಮುಕ್ಕಾಲಿಗೆ ಸರಿಯಾಗಿ ಅವರಿಬ್ಬರೂ 'ಆಗಯ' ನನ್ನ ಸ್ನಾನಗೀನ ಎಲ್ಲ ಮುಗಿದಿತ್ತು. ಹರಟೆಹೊಡೆಯುತ್ತ ಕೂತಿದ್ದೆವು.

ಬಾಗಿಲು ಸಂದಿನಲ್ಲಿ ಸರಸು ನಿಂತುಕೊಂಡು ಬನ್ನಿ ಒಳಕ್ಕೆ ಎಂದು ಸನ್ನೆ ಮಾಡುತ್ತಿದ್ದಳು. ನನಗದು ಗೋಚರವಾಗಲಿಲ್ಲ, ನನ್ನ ಹರಟೆಯ ಭರಾಟೆಯಲ್ಲಿ. ಗೋಪು ಪತ್ತೆ ಹಚ್ಚಿದ. ಸ್ನೇಹಿತರಿಗೆ ಇಂಥದ್ದರಮೇಲೆಲ್ಲ ಬಲು ಸೂಕ್ಷ್ಮದೃಷ್ಟಿ. "ಒಳಗೆ ಕರೆಯುತ್ತಿರುವಹಾಗಿದೆ, ಕಣೊ!" ಎಂದ. "ಕರೆಯೋದಿಲ್ಲ! ಯಾಕೆ ಕರೆಯುತ್ತಾರೆ," ಎಂದೆ, ಪೆದ್ದು ಪೆದ್ದಾಗಿ, ಹೊರಡುವುದಕ್ಕೆ ಸಿದ್ಧವಾಗಿಯೇ ಇದ್ದೆನಲ್ಲಾ, ಎಂಬ ಧೈರ್ಯದಮೇಲೆ.

"ನಿಮ್ಮನ್ನೇ, ಕೊಂಚ, ಇಲ್ಲಿ ಬಂದುಹೋಗಿ!" ಎಂಬ ಮೆಲುದನಿ ಕೇಳಿಸಿತು. "ಇಕೊ ಬಂದೆ........ಸ್ವಲ್ಪ ಕೂತಿರಿ, ಒಳಗೆ ಹೋಗಿಬರುತ್ತೇನೆ" ಎಂದು

ಎದ್ದೆ, ' ನಿಧಾನವಾಗಿ ಬಾ ! ಅವಸರ ಏನೂ ಇಲ್ಲ. ಡಿನ್ನರ್ ಅಂದರೆ ಒಂದು ಒಂದೂವರೆ ಆಗಿಯೇ ಆಗುತ್ತೆ '' ಎಂದ ಗೋಪು. " ಇಲ್ಲ, ಕಣೋ ! ಹನ್ನೆರಡಕ್ಕೆ ಠಾಕೂಠಾಕ್ ಈಗಿನ ಹನ್ನೆರಡಕ್ಕೇನೆ ಎಲೆಹಾಕಿ ಬಿಡುತ್ತೇನೆ ಅಂತ ಅವನೇ ಹೇಳಿಲ್ಲ ವೇನೋ, ರಾಜು ? '' ಎಂದೆ. ' ಊಟಕ್ಕೆ ಮುಂಚು, ಪಾಠಕ್ಕೆ ಹಿಂಚು, ಅಂತ ಗಾದೆ ಕೇಳಿಲ್ಲವೇನೋ ? " ಎಂದೆ, " ಹೇಳೋದೇನೋ ಹಾಗೇನೆ ! ಮದುವೆ ಮನೆಯಲ್ಲಿ ಹನ್ನೆರಡು ಎಂದರೆ ಹನ್ನೆರಡು ಅಂತ ಯಾವನೋ ಹೇಳಿದ್ದ ? '' ಎಂದು ಗೋಪು ಹಟ ಹಿಡಿದ.

ಒಳಕ್ಕೆ ಹೋಗುತ್ತಲೂ ಸರಸು " ಉಪ್ಪಿಟ್ಟುಮಾಡಿದೇನೆ. ಒಂದಿಷ್ಟು ಬಾಯಿಗೆ ಹಾಕಿಕೊಂಡು ಒಂದು ಕಪ್ ಕಾಫೀನೂ ಬಸ್ಕೊಳ್ಳಿ ! " ಅಂದಳು, ಗಂಭೀರ ವಾಗಿ. " ಥತ್ ! ಆಗಲೇ ಹನ್ನೊಂದು ! ೧೨ಕ್ಕೆ ಊಟ. ಉಪ್ಪಿಟ್ಟು ಕಾಫಿ ಯಾರಿಗೆಬೇಕು ? " ಎಂದೆ, ರೇಗಿ. " ನನ್ನ ಮಾತು ಕೇಳಿ. ಒಂದು ತುತ್ತು ಹಾಕಿ ಕೊಂಡು ಹೋಗಿ, ಡಿನ್ನರ್ ಅಂದ್ರೆ ಎರಡು ಗಂಟೆ ಮೂರು ಗಂಟೆ ಮಾಡಿಬಿಡುತ್ತಾರೆ. ತಾಳ ಹಾಕುತ್ತಾ ಕೂತುಕೊಳ್ಳಬೇಡಿ" ಅಂದಳು. ''ಏನೇ ಇದು ? ಡಿನ್ನರ್ ಅಂತ ಪುಟ್ಟಾಗಿ ಕೂತು ಚೆನ್ನಾಗಿ ಕಲಸಿಕೊಂಡು ಭರ್ತಿ ಹೊಡೆಯೋದು ಬಿಟ್ಟು, ಸುಮ್ನೆ ಎಂಜಲುಮಾಡಿ ಬಾ ಅಂತೀಯಾ ? ಉಪ್ಪಿಟ್ಟು ತುಂಬಿಕೊಂಡರೆ ಹಸಿವೇ ಇಂಗಿ ಹೋಗುತ್ತೆ. ಕಾಫಿ ಕುಡಿದರೆ ರುಚೀನೇ ಗೊತ್ತಾಗುವುದಿಲ್ಲ" ಎಂದೆ '' ಹೊತ್ತಾ ಗುತ್ತೆ, ಬನ್ನಿ ಇಲ್ಲಿ ! '' ಅಂತ ಕೈ ಹಿಡಿದು ಎಳದೇಬಿಟ್ಟಳು, ಗಂಡುಬೀರಿ ! " ಬಿಡೆ ! ಅವರನ್ನ ಅಲ್ಲಿ ಕೂರಿಸಿಬಿಟ್ಟು ನಾನಿಲ್ಲಿ ತುರುಕಬಹುದೇನೆ ನಿನ್ನ ತಿಂಡೀನ '' ಅಂದೆ. '' ಒಂದು ತುತ್ತಿಗೆ ಎಷ್ಟುಹೊತ್ತು, ಮಹಾ ! ಅವರು ಜಾಣರೇನೆ, ಭರ್ತಿ ಮಾಡಿ ಕೊಂಡೇ ಬಂದಿರುತ್ತಾರೆ '', ಅಂದಳು, ಅಡಿಗೆ ಮನೆಕಡೆ ಓಡಿದಳು.

ನಾನು ಹಿಂದೆಯೇ ಓಡಿದೆ, '' ಲೇ ! ಅವರನ್ನ ಜಾಣರು ಅಂತ ಅಂದು, ನನ್ನನ್ನ ದಡ್ಡ ಅಂದುಬಿಟ್ಟೆಯಲ್ಲೇ '' ಎಂದು ಅಂಗಲಾಚಿದೆ. '' ಬೇಡ, ಸರಸು ! ಸೊಗಸಾದ ಡಿನ್ನರ್‌ನ ಹಾಳುಮಾಡುತ್ತಿಯಲ್ಲೇ " ಎಂದು ಬೇಡಿಕೊಂಡೆ. '' ಸರಿ ! ಎತ್ತಲಾಗಾದರೂ ಹೋಗಿ, ನನಗೇನು ? ಅಯ್ಯೋ ಪಾಪ ಅಂತ ಸಂಕಟವಾಯಿತು, ಹೇಳಿದೆ, ಒಲ್ಲೆ ಅಂದರೆ ಹೊಡೆದು ತಿನ್ನಿಸುವುದಕ್ಕಾಗುತ್ತದೆಯೇ ? '' ಅಂದಳು. ''ಬೇಡ, ಸರಸು !" ಎಂದು ನಗುತ್ತಾ ಅವಳ ಗಲ್ಲಕ್ಕೆ ಒಂದು ಪೆಟ್ಟುಕೊಟ್ಟು ಬದುಕಿದೆ ಅಂತ ಹಿಂದಕ್ಕೆ ಓಡಿಬಂದೆ.

ಮೂರು ಜನರೂ ಹೊರಟೆವು, " ಏನಯ್ಯ ! ಎಕ್ಕಡ ಬೇಕೆ ? '' ಎಂದೆ, "ನಾವೇನೋ ತಗುಲಿಸಿಕೊಂಡಿದೇವೆ ತಂದುಬಿಡು, ಅಲ್ಲೆಲ್ಲಾದರೂ ಮರೆಯಾಗಿಟ್ಟಿ ರೋಣ" ಅಂದ ರಾಜು, " ಇಲ್ಲ, ಇಲ್ಲ ! ವೆಂಕಟರಂಗಂ ಮನೆ ಮುಂಜಿ ಡಿನ್ನರ್‌ನಲ್ಲಿ ನನ್ನದು ಪಠಾಣ್ ಸ್ಲಿಪ್ಪರ್‌ನ ಯಾವನೋ ಹೊಡೆದೇಬಿಟ್ಟ ... . ಇದು ಹೊಸಾ ಹೊಸದು ! ... ಇದನ್ನೂ ಕಳೆದರೆ ಗತಿಏನು ? '' ಎಂದು ಗೋಳಾಡಿದೆ. ನಾನಂತೂ

ಹೋದರೆ ಹೋಗಲಿ ಇದ್ದರೆ ಇರಲಿ ಅಂತ ಧೈರ್ಯಮಾಡಿದೇನೆ'' ಅಂದ ರಾಜು— ಅವನಿಗಿನ್ನೂ ಮದುವೆ ಇಲ್ಲ ; ಗೋಪು ಹೆಂಡತಿ ತವರುಮನೆಗೆ ಹೋಗಿದ್ದಳು. ನನ್ನ ಪಾಡೇ ಕಷ್ಟ--''ಲ್ಲೋ! ಉಳಿಯುತ್ತೋ ಕಳೆಯುತ್ತೋ ಎಂಬ ಅನುಮಾನ ಯಾಕೆ? ಇಲ್ಲೇ ಇರಿಸಿ ಹೋಗಿ.......ಬರುತ್ತಾ ಹೀಗೆ ಬನ್ನಿ'' ಎಂದೆ. ''ಅದೂ ಒಂದು ಐಡಿಯಾನೇ'' ಎಂದು, ಗೋಪು ಹಿಂತಿರುಗಿದ. ''ಛೆ! ಯಾಕೊ! ಯಾರೋ ಕದಿಯುವವರು ಇದನ್ನ ? ಬನ್ರೋ ಹಾಗೇನೆ'' ಎಂದು ರಾಜು ತಡೆದ.

ಅಂತು ನಾನೂ ಚಪ್ಪಲಿ ಹಾಕಿಕೊಂಡು, ರಸ್ತೆಗಿಳಿದು, '' ಬಾಗಿಲು ಹಾಕಿಕೊ! ಹೋಗಿಬರುತ್ತೇವೆ'' ಎಂದು ಕೂಗಿದೆ. ಸರಸು ಹೊಸ್ತಿಲಮೇಲೆ ಕಾಣಿಸಿಕೊಂಡಳು, ಬನ್ನಿ ಇಲ್ಲಿ, ಎಂದು ಕೈ ಬೀಸಿದಳು. ಹೋದೆ, '' ಬರೀ ಕಾಲಲ್ಲೇ ಹೋಗಿ! ಇದನ್ನೂ ಯಾರಿಗಾದರೂ ದಾನಮಾಡಿ ಬರುತ್ತೀರಾ!'' ಅಂದಳು. ''ಗೋಪು! ಚಪ್ಪಲಿ ಬೇಡ, ಕಣೋ! ಇಲ್ಲೇ ಇಟ್ಟು ಬರುತ್ತೇನೆ'' ಎಂದೆ. '' ಯಾಕೊ! ಒಳಗಿಂದ ಆರೀತಿ ಹುಕುಂ ಬಂತು ಅಂತ ಕಾಣುತ್ತೆ'' ಎಂದು ಹೇಳಿ ನಕ್ಕ ...ನಾನೂ ನಕ್ಕೆ.

ಹೆಂಡತಿ ಹಾಕಿದ ಗೆರೆ ದಾಟುವುದಿಲ್ಲ ಈ ಗಂಡ, ಎಂಬ ಬಿರುದು ನಿಜವಾಗಿಯೂ ಹೆಮ್ಮೆಯ ವಿಷಯ, ಎಷ್ಟೋ ತೃಪ್ತಿಕೊಡುತ್ತದೆ ಅದು, ಅಕ್ಕಪಕ್ಕದವರೆಲ್ಲ, '' ನೋಡೆ! ಎಷ್ಟು ಅನ್ಯೋನ್ಯವಾಗಿದಾರೆ ಅವರಿಬ್ಬರೂ'' ಎಂದು ಅಂದುಕೊಳ್ಳುತ್ತಾರೆ....ಅಲ್ಲವೆ ?

ರಂಗಸಾಮಿ ಮನೆ ಸೇರುತ್ತಲೂ, ಹನ್ನೆರಡು ಹೊಡೆದು ಹತ್ತಿಪ್ಪತ್ತು ನಿಮಿಷ ದಾಟಿಬಿಟ್ಟಿತ್ತು. '' ಗೋಪು! ನಿನ್ನಿಂದ ಇಷ್ಟು ಲೇಟು! ಹಾಳು ಮಿಕ್ಕವರದೆಲ್ಲ ಅರ್ಧ ಊಟ ಮುಗಿದಿರುತ್ತೆ'' ಎಂದು ಮೂಗೆಳೆದೆ. '' ಹೆದರಬೇಡವೋ, ಪ್ರಾಣಿ! ಎರಡುಗಂಟೆ ತನಕ ಏನೂ ಬೀಳುವಹಾಗಿಲ್ಲ, ನಿನ್ನ ಹೊಟ್ಟೆಗೆ'' ಎಂದು ಗೋಪು ನನ್ನ ಹೊಟ್ಟೆಮೇಲೆ ಒಂದು ಬಿಟ್ಟ!

ಚಪ್ಪರದಲ್ಲಿ ಹಾಸಿದ್ದ ಬಾಡಿಗೆ ಜಮಖಾನೆಗಳ ಮೇಲೆ ಆಗಲೇ ಬಂದಿದ್ದ ಅತಿಥಿಗಳು ಏಳೆಂಟು ಗುಂಪಾಗಿ ಗಿರ್ಕಾಯಿಸಿ ಹರಟೆ ಹೊಡೆಯುತ್ತಿದ್ದರು. ಒಳಗೊಂದು ರೂಮಿಂದ ಬೀಗರ, ನೆಂಟರ, ಇಸ್ಪೀಟ್ ಕಛೇರಿಯ ಕಚ-್ಟವು ಕೇಳಿ ಬರುತ್ತಿತ್ತು. ನಮ್ಮದೂ ಒಂದು ಗುಂಪು ಅಂತ ನಾವೂ ಕೂತೆವು, ನನ್ನ ಬೆನ್ನಿಗೆ ಒಂದು ಕಂಬ ಸಿಕ್ಕಿತು.

ಒಂದು ಗಂಟೆ ಹೊಡೆಯಿತು, ಎಬ್ಬಿಸುವ ಯೋಚನೆಯೇ ಯಾರಿಗೂ ಇದ್ದಂತೆ ತೋರಲಿಲ್ಲ. ರಂಗಸಾಮಿ ಮುಖವೇ ಇಲ್ಲ. ಏನೋ ಬಹಳ ತುರ್ತಿನ ಕೆಲಸ ಇದ್ದವನಹಾಗೆ ಆಗೊಂದುಸಲ ಈಗೊಂದುಸಲ ಎಲ್ಲಾದರೂ ಒಂದುಕಡೆ ಮಿಂಚುತ್ತಿದ್ದ.

ಪಾಪ ಅವನದೂ ತಾಪತ್ರಯ, ಅನ್ನಿ! ಡಿನ್ನರ್ ಅನ್ನೋದು, ಸಮಯಕ್ಕೆ ಸರಿಯಾಗಿ ಸಿದ್ಧವಾಗಬೇಕಾದರೆ, ಅಡಿಗೆಯವರ ಕೈ ಚಳಕತಾನೆ ಹೊಣೆ? ಅಲ್ಲಿಗೆ

ಹೋಗಿ, ರಂಗಸಾಮಿ ಒಂದೇಸಮ ರೇಗಾಡಿದ, ಕೂಗಾಡಿದ "ಆಗ್ಹೋಯ್ತು, ಸ್ವಾಮಿ! ಆದಹಾಗೇನೆ! ಎಲೆ ಹಾಕ್ಕಾಯ್ತು ಅಂತ ತಿಳಿದುಕೊಳ್ಳಿ! ಅಂಬೊಡೆ ಕರಿದು ಬಿಟ್ಟರಾಯಿತು.... ಆ ಉಪ್ಪೇರಿಗೆ ಆಲುಗಡ್ಡೆ ಹೆಚ್ಚಲು ಬೇಗ ಒಂದು ಚಾಕು ಕೊಡಿಸಿಬಿಡಿ.... ನಾಲ್ಕು ಸೌದೆ ಸೀಳಿಸಿ ಕೊಡಿಸಿಬಿಡಿ; ಇನ್ನೂ.... ಅಂಗಡಿಯಿಂದ ಶಾವಿಗೆ ಬಂದುಬಿಟ್ಟರೆ, ಕೀರಿನ ಕೆಲಸ ಪೂರ್ತಿಯಾಯಿತು....!" ಎಂದು ಹೇಳುತ್ತಾ, ಸುಬ್ಬಯ್ಯನವರು ಹೊಗೆ ಕೆರಳಿಸಿದರು, 'ಆಗ್ಹೋಯ್ತು! ಆಗ್ಹೋಯ್ತು!.... ಆಗೋದುಮಾತ್ರ ಯಾವಾಗಲೋ!" ಎಂದು ಗರ್ಜಿಸಿ, ರಂಗಸಾಮಿ ಕಣ್ಣುಜ್ಜಿ ಕೊಳ್ಳುತ್ತ ಹೊರಗೆ ಬಂದ.

ಮನೆ ಒಳಗೆ ಗಂಡು ಹೆಣ್ಣು ಕೂರಿಸಿಕೊಂಡು ಪುರೋಹಿತರು ಯಾವುದೋ ಮಾಮೂಲು ಶಾಸ್ತ್ರ ನಡೆಸುತ್ತಿದ್ದರು. ಅವರನ್ನು ಬಳಸಿಕೊಂಡಿದ್ದ ಹೆಂಗಸರು ನಿಮಿಷಕ್ಕೊಂದುಸಾರಿ ಕೈ ಚಪ್ಪಾಳೆ ತಟ್ಟಿಕೊಂಡು ಕಿಲಕಿಲ ನಗುತ್ತಿದ್ದರು. ರಂಗ ಸಾಮಿಗೆ ರೇಗಿತು, ಅಲ್ಲಿಗೆ ನುಗ್ಗಿದ "ಸಾಕು! ಸಾಕು! ಪುರೋಹಿತರೇ! ಏನಿದು? ಆರತಿ ಎತ್ತಿಸಿ ಬೇಗ! ಇಲ್ಲೆಲ್ಲ ಎಲೆ ಹಾಕಬೇಕು. ಖಾಲಿಮಾಡಿ" ಎಂದು ಆರ್ಭಟಿ ಸಿದ. "ಆಗ್ಹೋಯ್ತು, ಭಾವ! ಹತ್ತೆ ಹತ್ತುನಿಮಿಷ!" ಎಂದು ಒಬ್ಬಳು ದಿಟ್ಟೆ ಹುಡುಗಿ ಅಡ್ಡಬಂತು. "ಹತ್ತು ನಿಮಿಷ? ಅಯ್ಯೋ! ಅಯ್ಯ ಆಗೋದಿಲ್ಲ... ಎಲ್ಲರೂ ಕಾದಿದ್ದಾರೆ. ಅಡಿಗೆ ಆಗ್ಹೋಯ್ತು ಹುಂ, ಏಳಿ!" ಎಂದು ಶಪಿಸುತ್ತಾ, ರಂಗಸಾಮಿ ಜಮಖಾನೆ ಮೂಲೆ ಹಿಡಿದೆಳೆದ, ಆಗ ಅವನ ಹೆಂಡತಿ ಕಾಣಿಸಿಕೊಂ ಡಳು. "ಏನಿದು? ಬುದ್ಧಿಗಿದ್ಧಿ ಇದೆಯೋ ಇಲ್ಲವೋ? ಈವಾಗಲ್ಲದೆ ಇನ್ನು ಯಾವಾಗ ಗೇಲಿ ಮಾಡುತ್ತೀವೆ, ಪಾಪ! ಆಗಲಿ ಒಂದು ಗಳಿಗೆ ಹೆಚ್ಚುಕಡಿಮೆ!" ಎಂದಳು. "ಬಂದವರೇನು? ಆಯಾಸ ಪರಿಹಾರ, ಕೂತಿರಲಿ ಕೊಂಚಹೊತ್ತು!" ಎಂದು ಗದರಿಸಿದಳು. "ಕೂತಿರಲಿ! ಚೆನ್ನಾಗಿ ಹೇಳಿದೆ! ಗಂಟೆ ಎಷ್ಟು ಅಂತ ಗೊತ್ತೇನೆ ನಿನಗೆ?" ಎಂದ ರಂಗಸಾಮಿ, "ಎಷ್ಟಾದರೂ ಆಗಲಿ! ಅವರಿಗೂ ಗೊತ್ತು, ಮದುವೆ ಮನೆ ಅಂದರೆ ಯಾರ ಹಿಡಿತಕ್ಕೂ ಸಿಕ್ಕೋದಿಲ್ಲ ಅನ್ನೋದು!" ಎಂದು ಉತ್ತರ ಹೇಳಿದಳು. "ಥತ್! ಸಂಜೆ ಆರುಗಂಟೆಗೆ ಊಟಾನ! ನೀನೋ, ನೀನು ಮದುವೆ ಮಾಡೋ ವರಿಸೇನೋ?" ಎಂದು ಪಿಸುಗುಟ್ಟುತ್ತಾ ರಂಗಸಾಮಿ ಇನ್ನೆಲ್ಲಿಗೋ ಹೊರಟ.

ಒಂದುಸಲ ಅವನು ಅಕಸ್ಮಾತ್ ಚಪ್ರಕ್ಕೆ ಬಂದ! ಬಂದದ್ದೆತಡ ಎಲ್ಲರೂ ಅವನಕಡೆ ತಿರುಗಿ, "ಏನೋ, ಹೊಟ್ಟೆಗೆ ಇಷ್ಟುಅನ್ನ ಕಾಣಿಸುತ್ತಿಯೇನೋ, ಮಹರಾಯ!" ಎಂದು ಕೈ ನೀಡಿದರು. ಅವನು ಅಳುವುದೊಂದುಬಾಕಿ, ತುಟಿ ಕಚ್ಚಿಕೊಂಡು "ಓಹೊ! ಆಯಿತಲ್ಲ! ಎಲೆ ಹಾಕ್ತಾಇದ್ದಾರೆ!" ಎಂದು ಹೇಳಿ, ಒಳಕ್ಕೆ ಧಾವಿಸಿದ.

ಕೊಂಚ ಹೊತ್ತಾದಮೇಲೆ, ಗೋಪು ಮೆಲ್ಲಗೆ ಎದ್ದ, ಉಪಾಯವಾಗಿ ಅಡಿಗೆ ಮಾಡುವಕಡೆ ನುಸುಳಿ ಬಂದ, "ಇನ್ನೂ ಮುಕ್ಕಾಲು ಗಂಟೆಗೇನೂ ಮೋಸವಿಲ್ಲ"

ಎಂದು ಸಿಡಿಲು ಬಡಿದ. “ ಆಂಬೊಡೆ ಬಾಣಲಿ ಈಗತಾನೆ ಒಲೆ ಹತ್ತಿತ್ತು ! ಸ್ಟೋರ್ಸಿಂದ ಇನ್ನೂ ಶ್ಯಾವಿಗೆ ಬಂದಿಲ್ಲವಂತೆ ! ” ಎಂದ. ಚಪ್ಪರ ಚಪ್ಪರವೇ ನಿರಾಶೆಯ ನಿಟ್ಟುಸಿರು ಬಿಟ್ಟಿತು. ನನಗೋ, “ ಉಪ್ಪಿಟ್ಟನ್ನಂತೂಬಿಟ್ಟೆ, ಕಾಫೀನಾದರೂ ಬಸಿದುಕೊಳ್ಳಬಾರದಾಗಿತ್ತೆ” ಎನಿಸಿತು, ಹೆಂಗಸರು ನಿಜವಾಗಿಯೂ ಬುದ್ಧಿವಂತರು, ಎನಿಸಿತು.

ಮೂರೂಕಾಲಕ್ಕೆ ಬಂತು, ಅಡಿಗೆ ಮನೆಯಲ್ಲಿ ರಂಗಸಾಮಿಯ ಉಪನ್ಯಾಸ ಬಹಳ ಬಿರುಸಾಯಿತು. ಹೇಳಬಾರದ ಕೇಳಬಾರದ ಮಾತುಗಳೆಲ್ಲ ಬಂದವು. ಅವನ ತಮ್ಮ ಓಡಿಬಂದು, ಅವನನ್ನ ಬೇರೆಕಡೆ ಎಳೆದುಕೊಂಡು ಹೋಗಿ “ ಸುಮ್ಮನಿರಣ್ಣ ! ಸದ್ಯ ನಿನ್ನ ಬೈಗಳು ಕೇಳಿ ಅವರು ಸೌಟು ಬಿಸಾಕಿ ಹೊರಟೇ ಹೋದರೆ ಗತಿ ಏನು ? ನೀನು ಹೊರಡು, ಇಲ್ಲಿಂದ ನಾನು ಅವರನ್ನ ಹದಕ್ಕೆ ತರುತ್ತೇನೆ ” ಎಂದು ಬುದ್ಧಿ ಹೇಳಿದ.

ಮೂರೂವರೆಗೆ ರಂಗಸಾಮಿ ಧೈರ್ಯವಾಗಿ ಚಪ್ಪರಕ್ಕೆ ಬಂದ, “ ಏಳಿ ! ಏಳಿ ! ” ಎಂದು ಅವಸರ ಪಡಿಸಿದ, ನಾಲ್ಕು ಇಪ್ಪತ್ತಕ್ಕೆ ಕೈ ತೊಳೆದು ಎಲೆ ಅಡಿಕೆ ಹಾಕಿಕೊಂಡೆವು. ಮನೆಗೆ ಬರುತ್ತಾ ಗೋಪು, “ ತುಂಬಾ ಹೊತ್ತಾಯಿತು ” ಎಂದ. ಆದರೆ, ರಾಜು, “ ಆದರೂ, ಅಡಿಗೆ ಮಾತ್ರ........ ” ಎಂದ, ನಾನು “ ಫಸ್ಟ್‌ಕ್ಲಾಸ್ ” ಎಂದು ಸೇರಿಸಿದೆ. ಮನೆಗೆ ಬರುತ್ತಲೂ, ಸರಸು, “ ಅಯ್ಯೋ ! ಪಾಪವೇ ! ” ಅಂದಳು.

—ನಾ. ಕ

——o——

ಹಲವು ಪತ್ರಿಕೆಗಳನ್ನು ಕಾರಾಗೃಹದೊಳಕ್ಕೆ ಬಿಡುವುದೇ ಇಲ್ಲವಂತೆ ...... ಆದರೂ, ಒಳಗೆ ಹೋಗೋದಕ್ಕೆ ಯಾಕೊ ಮನಸ್ಸು ಬರುವುದಿಲ್ಲ.

✤ ✤ ✤

ಶ್ರೀಮತಿ ಎಂಬುದಕ್ಕೆ ಮಿಸಿಸ್ ಎಂಬುದರ ಅರ್ಥವಿಲ್ಲ. ಆದ್ದರಿಂದ, ಈ ಸಂಘದವರ ಅಭಿಪ್ರಾಯದಂತೆ ಹಾಲಿ ಜಾರಿಯಲ್ಲಿರುವ “ಎಗ್ಗಮ-ಕೋಂ-ಎ.ಬಿ.ಸಿ.? ಎಂಬ ಪದ್ಧತಿಯನ್ನೇ ಭೇದವಿಲ್ಲದೆ ಎಲ್ಲರಿಗೂ ಅನ್ವಯಿಸುವುದು ಉತ್ತಮವೆಂದು ತೋರುತ್ತದೆ.

✤ ✤ ✤

ಸಾನ್‌ಪ್ರಾನ್‌ಸಿಸ್ಕೋ ಸಮ್ಮೇಳನದಲ್ಲಿ ಆ ಅವಕಾಶವನ್ನೇ ಉಪಯೋಗಿಸಿಕೊಂಡು “ ಬ್ರಿಟಿಷ್ ಸಾಮ್ರಾಜ್ಯ ಪ್ರಜಾ ಪ್ರದರ್ಶನ ” ವೊಂದು ನಡೆಯುವುದಂತೆ. ಇದಕ್ಕಾಗಿ ಇಂಡಿಯಾದಿಂದ ಇನ್ನೂ ಹಲವು ಪ್ರತಿನಿಧಿಗಳನ್ನು ಕಳುಹಿಸುವರೋ ಏನೋ ತಿಳಿಯದು.



ನೋಡೋದಕ್ಕೆ ನರಪೇತಲ—ಹೊರೋದುನೋಡು ಹೆಣಭಾರ.

ಇಂದ್ರನ ಸೋಲು

ಅ ಥ ವಾ

ಪುರಂದರ ಪರಾಜಯು

ದೇವತೆಗಳ ಅರಸು ಅಮರಾವತಿಯ ರಾಣ, ಶಚೀದೇವಿಯ ಪ್ರಾಣಪದಕ, ವೈವಸ್ವತು ಮನ್ವಂತರದ ಏಳನೇ ಇಂದ್ರ ಪುರಂದರನು ಚಿಂತೆಯ ಮಡುವಿನಲ್ಲಿ ಮುಳುಗಿದ್ದಾನೆ. ಚಿಂತೆಯ ಕಾರಣವೇನೂ ಸಾಮಾನ್ಯವಲ್ಲ. ಅಮರಾವತಿಯ ಅಪ್ಸರೆಯರು ಒಬ್ಬೊಬ್ಬರಾಗಿ ತಮ್ಮ ಪ್ರಿಯಕರರನ್ನು ಹುಡುಕಿಕೊಂಡು ಹೋದದ್ದರಿಂದ ದೇವಸಭೆ ಶೋಭರಹಿತವಾಗಿದೆ. ಸಂಗೀತಶಾಲೆಯ ತಾಳಮದ್ದಲೆಗಳು ಶಬ್ದಮಾಡುತ್ತಿಲ್ಲ. ವೀಣೆ ಮುರಿದು ಬಿದ್ದಿದೆ. ವೇಣು ವನವನ್ನು ಸೇರಿದೆ.

ಅದೃಶ್ಯರಾದ ಅಪ್ಸರೆಯರ ನೆಲೆಯನ್ನು ಪತ್ತೆಮಾಡಲು ದೇವೇಂದ್ರನು ಕಳುಹಿಸಿದ್ದ ಸಪ್ತದಿಕ್ಪಾಲಕರು ಬಂದು ವರದಿಮಾಡುತ್ತಿದ್ದಾರೆ. "ರಂಭೆ ನಳಕೂಬರನ ಬೆನ್ನು ಹಿಡಿದಳು. ಊರ್ವಶಿ ಪುರೂರವನೊಡನೆ ಸಂಸಾರ ಹೂಡಿದ್ದಾಳೆ. ಮೇನಕೆ ವಿಶ್ವಾಮಿತ್ರನ ಪಾರ್ಶ್ವದಲ್ಲಿ ತಪಸ್ಸುಮಾಡುತ್ತಿರುವಳು. ತಿಲೋತ್ತಮೆ ಸುಂದೋಪಸುಂದರೊಡನೆ ಚಕ್ಕಂದವಾಡುತ್ತಿದ್ದಾಳೆ. ಈ ನಾಲ್ವರ ಸಮೀಪಕ್ಕೆ ಹೋಗಲು ನಮಗೆ ಸಾಧ್ಯವಾಗಲಿಲ್ಲ."

ಇಂದ್ರನಿಗೆ ಬೇಸರವಾಯಿತು. "ನನ್ನ ಕಷ್ಟಗಳಿಗೆಲ್ಲ ಈ ನಾಲ್ವರೇ ಮೂಲ. ಇವರನ್ನು ಬಿಟ್ಟರೆ ಬೇರೆ ಅಪ್ಸರೆಯರೇ ಇಲ್ಲವೇ ?" ಎಂದು ಗದರಿದ.

ಅಗ್ನಿ ಉರಿದೆದ್ದು ಸುಮ್ಮನಾದ. ವಾಯು ಬೀಸಿ ತಲೆಯಾಡಿಸಿದ. ಕುಬೇರ ಯಮ ಈಶಾನರು ಮೌನವಾಗಿದ್ದರು. ವರುಣನು ಮಳೆಗರೆದು ಮರುಗಿದ. ಕೊನೆಗೆ ನಯಶೀಲನಾದ ನಿಋತಿ ಹೇಳಿದ : "ಮಹಾಪ್ರಭು, ಉಳಿದ ಅಪ್ಸರೆಯರು ಚಲನ ಚಿತ್ರಗಳಲ್ಲಿ ಅಭಿನಯಿಸಲು ಭೂಲೋಕಕ್ಕೆ ಹೋಗಿದ್ದಾರೆ. ಒಪ್ಪಂದದ ಗಡುವು ಮುಗಿಯುವ ಮೊದಲು ಅವರನ್ನು ಬಿಡಿಸಿಕೊಂಡು ಬರುವುದು ಕುಬೇರನಿಗೂ ಸಾಧ್ಯವಿಲ್ಲ"—ಎಂದು

ಇಂದ್ರನು ನಿರುಪಾಯನಾಗಿ ಬೃಹಸ್ಪತಿಯ ಕಡೆ ನೋಡಿದ. ಕುಶಲಮತಿಯಾದ ಬೃಹಸ್ಪತಿ ಕೂಡಲೆ ಸಲಹೆಯಿತ್ತ—"ನೀವೇ ಭೂಲೋಕಕ್ಕೆ ಹೋಗಿ ಚಲನ ಚಿತ್ರ ನಿರ್ಮಾಣಕಾರ್ಯದಲ್ಲಿ ಏಕೆ ತೊಡಗಬಾರದು ?" ಎಂದು

ಸಪ್ತದಿಕ್ಪಾಲಕರು ಸಂತೋಷಸಾಗರದಲ್ಲಿ ತಲೆಮೇಲಾಗಿ ಬಿದ್ದರು. ಬಿಡುಗಣ್ಣುಗಳನ್ನು ತಿರುಗಿಸಿ ಏಕಕಂಠದಿಂದ ಹೇಳಿದರು ! "ದೇವಗುರುಗಳ ಮಾತು

ಸತ್ಯ ಮಹಾಪ್ರಭು. ನಾವು ನೋಡಿ ಬಂದ ಚಲನ ಚಿತ್ರರಂಗಗಳು ದೇವಸಭೆ ಯಂತೆಯೇ ಇವೆ. ಅಲ್ಲಿ ನಿಮ್ಮ ಮನೋವಿನೋದ ನಿರಾತಂಕವಾಗಿ ನಡೆಯುವುದು" ಎಂದು.

✦ ✦ ✦

ತ್ಯಾಗರಾಜನಗರದ ಭವ್ಯಭವನವೊಂದರಲ್ಲಿ "ಇಂದ್ರಾ ಪಿಕ್ಚರ್ಸ್" ಎಂಬ ಹೆಸರಿನ ಚಲನ ಚಿತ್ರ ನಿರ್ಮಾಣಸಂಸ್ಥೆಯೊಂದು ಪ್ರಾರಂಭವಾಯಿತು. ಇಂದ್ರನೇ ಆ ಸಂಸ್ಥೆಯ ಒಡೆಯನೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಚಂಡ ಚಂಡ ಮಾರುತವೆದ್ದು ಮದ್ರಾಸಲ್ಲಿ ಜಲಪ್ರಳಯವಾದ ಮರುದಿನ ಅಡಿಯಾರ್ ತೀರದಲ್ಲಿ ಕಿರೀಟ - ಕೇಯೂರ-ಭುಜಕೀರ್ತಿ - ಕಂಕಣಾಲಂಕೃತರಾದ ಎಂಟುಮಂದಿ ಅಪರಿಚಿತರು ದಾರಿ ತಪ್ಪಿ ಅಲೆಯುತ್ತಿದ್ದದ್ದು, ಅವರನ್ನು ಕಂಡು ಮಾತಾಡಿ ಅವರಿಚ್ಛೆಯಂತೆ ಮಾರ್ವಾಡಿಯೊಬ್ಬನ ಹತ್ತಿರ ಒಡವೆಗಳನ್ನು ಅಡ ಹಾಕಿ ಎರಡು ಲಕ್ಷ ರೂಪಾಯಿ ಸಾಲಕೊಡಿಸಿದ್ದು, ಇಂದ್ರಾ ಪಿಕ್ಚರ್ಸ್ ಸ್ಥಾಪನೆ, ನಟೀನಟರ ಅನ್ವೇಷಣ, ಸ್ಟುಡಿಯೋ ಗುತ್ತಿಗೆ ಹಿಡಿದಿದ್ದು, ಕಾಳಸಂತೆಯಲ್ಲಿ ಚಿತ್ರ ತೆಗೆಯುವ ಲೈಸೆನ್ಸ್ ಕೊಡಿಸಿದ್ದು ಇತ್ಯಾದಿ ಚಲಚ್ಚಿತ್ರನಿರ್ಮಾಣದ ಪೂರ್ವೇತಿಹಾಸವನ್ನು "ತಾರೆಯಿನೌತೂದು" ಎಂಬ ತಮಿಳು ಪತ್ರಿಕೆಯ ವಿಶೇಷ ಬಾತ್ಮೀದಾರರು ತಮ್ಮ ಪತ್ರಿಕೆಯಲ್ಲಿ ಸಾಲಂಕಾರವಾಗಿ ವಿವರಿಸಿದ್ದಾರೆ. ಈ ಅಲ್ಪಕಾರ್ಯಕ್ಕಾಗಿ ಅವರಿಗೆ ಶೇಕಡಾ ೨೫ರಷ್ಟು ದಳ್ಳಾಳಿ ಸಿಕ್ಕಿತೆಂಬುದನ್ನು ಮಾತ್ರ ಅವರು ಹೇಳಿಲ್ಲ.

ಇಂದ್ರಾ ಪಿಕ್ಚರ್ಸಿನ ಮುಂದಿನ ಇತಿಹಾಸ ಆ ಪತ್ರಿಕೆಯಲ್ಲೂ ಸಿಕ್ಕುವುದಿಲ್ಲ. ಮೇಲ್ಕಂಡ ಬಾತ್ಮೀದಾರರು ಒಂದೇ ಗಂಟೆನಲ್ಲಿ ೫೦ ಸಾವಿರ ರೂಪಾಯಿ ದಳ್ಳಾಳಿ ಸಂಪಾದಿಸಿದ್ದುದರಿಂದ ಧನದ ಅಜೀರ್ಣವಾಗಿ ಪತ್ರಿಕಾವೃತ್ತಿಯನ್ನು ಬಿಟ್ಟದ್ದೇ ಅದರ ಮೌನಕ್ಕೆ ಕಾರಣವೆಂದು ಕೆಲವರು ಹೇಳುವುದನ್ನು ನಾವು ನಂಬುವುದಿಲ್ಲ. ಆ ಬಾತ್ಮೀ ದಾರರ ಅನುಭವದಿಂದ ಎಚ್ಚೆತ್ತ ದೇವೇಂದ್ರನು ಇಂದ್ರಾ ಪಿಕ್ಚರ್ಸಿನ ಕಾರ್ಯಕಲಾಪ ಗಳಮೇಲೆ ಪತ್ರಿಕೆಗಳ ಕುದೃಷ್ಟಿ ಬೀಳದಂತೆ ಮಾಯದ ಜವನಿಕೆಯೊಂದನ್ನು ಹಾಕಿರಬೇಕೆಂದು ನಮ್ಮ ಊಹೆ. ಚಾಣಾಕ್ಷ ಚಲನಚಿತ್ರಪತ್ರಿಕೆಗಳ ಮೌನವನ್ನು ಮತ್ತಾವಕಾರಣದಿಂದಲೂ ವಿವರಿಸುವುದು ಸಾಧ್ಯವಲ್ಲ.

ಇಂದ್ರ ಪಿಕ್ಚರ್ಸಿನ ನಟನಟಿಯರು, ಸ್ಟುಡಿಯೋ ಕೆಲಸಗಾರರು, ಅಡಿಗೆ ಯವರು, ನೀರಿನವರು ಮುಂತಾದವರಿಂದ ಆ ಸಂಸ್ಥೆಯ ಕತೆಯನ್ನು ಓದುಗರಿಗಾಗಿ ನಾವು ಮುಂದೆ ಸಂಗ್ರಹಿಸಿದ್ದೇವೆ.

✦ ✦ ✦

ಶುಭಮುಹೂರ್ತದಲ್ಲಿ ಚಿತ್ರದ ಪ್ರಾರಂಭವಾಯಿತು. ಇಂದ್ರನು ನಿರ್ಮಾತೃ ವಾದ ಕುಬೇರನು ಖಜಾಂಚಿಯಾದ. ನಿಋತಿ ಕತೆಯನ್ನು ಬರೆಯಬೇಕಾಯಿತು. ಈಶಾನನು ನಾಟ್ಯಶಿಕ್ಷಣದೊಂದಿಗೆ ಡೈರಕ್ಟರ್ ಕೆಲಸವನ್ನು ನಿರ್ವಹಿಸಲು ಸಮ್ಮತಿಸಿದ.

ಅಡಿಗೆ ಸ್ನಾನದ ಮನೆಗಳಲ್ಲಿ ಕೆಲಸವಿಲ್ಲದಿದ್ದಾಗ ಅಗ್ನಿವರುಣರು ಗೀತಗಳನ್ನು ರಚಿಸುತ್ತಿದ್ದರು. ಯಮಧರ್ಮರಾಯ ವಾದ್ಯಗೋಷ್ಠಿಯ ಮೇಲ್ವಿಚಾರಕನಾಗಿದ್ದ. ಒಂದೆರಡು ದಿನಗಳು ರಿಹರ್ಸಲ್ ನಡೆದು ಕಥಾನಾಯಕನ ಪಾತ್ರಕ್ಕೆ ಯಾರೂ ಸಿಕ್ಕದೆ ಹೋದ್ದರಿಂದ ಸ್ವಯಂ ಇಂದ್ರನೇ ನಾಯಕನಾದ.

ಮೊಟ್ಟಮೊದಲು "ಅಹಲ್ಯಾ" ಚಿತ್ರ ತೆಗೆಯಬೇಕೆಂದು ನಿರ್ಧಾರವಾಯಿತು. ಆದರೆ ಅಹಲ್ಯಾ ಪಾತ್ರಧಾರಿಯಾದ ವಿಖ್ಯಾತನಟಿ ಅಲಕನಂದಾ ಗೌತಮನ ಶಾಪದಿಂದ ಕಲ್ಲಾಗಲು ಸಮ್ಮತಿಸಲಿಲ್ಲ. "ನಾನು ಕಲ್ಲಾದರೆ ಹಾಡುವವರಾರು?" ಎಂದು ವಾದಿಸಿದಳು. ರಾಮನ ಪಾದಗಳಿಂದ ಅಹಲ್ಯೆಯ ಉದ್ಧಾರ ನಡೆಯುವುದು ಇಂದ್ರನಿಗೂ ಸರಿಯಾಗಿ ಕಾಣಲಿಲ್ಲ. "ಯಾವ ಮಹಾಪಾಪಕ್ಕಾಗಿ ಇಂತಹ ಶಿಕ್ಷೆ?" ಎಂದು ತನ್ನನ್ನು ತಾನೆ ಪ್ರಶ್ನಿಸಿಕೊಂಡ. ಕೊನೆಗೆ ಒಂದೆರಡು ದೃಶ್ಯಗಳನ್ನು ಹಿಡಿದಮೇಲೆ ಅಹಲ್ಯೆ ಕೈಬಿಟ್ಟಳು.

ಅನಂತರ ಪಂಚಮಹಾಸತಿಯರಲ್ಲಿ ಉಳಿದ ನಾಲ್ವರ ಚರಿತ್ರೆಯನ್ನು ತೆಗೆಯಲು ಅಗ್ನಿ ಸೂಚಿಸಿದ. ಫಿಲಂ ಚೇಂಬರಿನವರು ಅಡ್ಡಬಂದರು. ಯಾವದೋ ಕಂಪೆನಿಯವರು ಆ ಚಿತ್ರಗಳನ್ನು ತೆಗೆಯುತ್ತಿರುವುದಾಗಿ ಹೇಳಿ ಲೈಸೆನ್ಸಿಂಗ್ ಬೋರ್ಡಿಗೆ ಬರೆಯುವುದಾಗಿ ಬೆದರಿಸಿದರು. ಇಂದ್ರನು ನಿರಾಶನಾದ. ನಾಟ್ಯಕ್ಕಾಗಿ ಮಣಿಪುರದಿಂದ ಮದ್ರಾಸಿಗೆ ಬಂದಿದ್ದ ರೂಪಸುಂದರಿ ನಡುವನ್ನು ಬಳುಕಿಸುತ್ತಾ, ಮುಖವನ್ನು ಓರೆಮಾಡಿ, ಮುಂಗುರುಳನ್ನು ಹಿಂದಕ್ಕೆಳೆದು, ಇಂದ್ರನ ಕೆನ್ನೆಯನ್ನು ಸವರುತ್ತಾ, "ಚಿಂತೆಯೇಕೆ ದೇವಾ, "ಚಿತ್ರಾಂಗದಾ" ತೆಗೆಯಿರಿ. ನಾನೇ ಚಿತ್ರಾ, ನೀವೇ ಅರ್ಜುನ" ಎಂದಳು.

ಇಂದ್ರನ ಕೆನ್ನೆಗಳಿಗೆ ರೂಪಸುಂದರಿಯ ಬೆರಳುಗಳು ಮೃದುವಾಗಿ ಕಂಡುವು. ತನ್ನ ಪಾರ್ಶ್ವದ ಕೊಟಡಿಯಲ್ಲಿದ್ದ ಅಲಕನಂದೆಯನ್ನು ಮನೆಗೆ ಕಳುಹಿಸಿ ಆ ಸ್ಥಾನದಲ್ಲಿ ರೂಪಸುಂದರಿಯನ್ನು ಪ್ರತಿಷ್ಠಿಸಿದ.... ಚಿತ್ರಾರ್ಜುನರ ನಾಟ್ಯಾಭ್ಯಾಸದೊಡನೆ ಪ್ರೇಮಾಭ್ಯಾಸವೂ ನಡೆಯತೊಡಗಿತು. ಒಂದೆರಡು ದೃಶ್ಯಗಳೂ ಚಿತ್ರಸ್ತವಾದವು. ಅಷ್ಟರಲ್ಲಿ ಸೈನಿಕರಿಗೆ ನೃತ್ಯಶಿಕ್ಷಣ ಕೊಡಲು ರೂಪಸುಂದರಿ ಮಣಿಪುರಕ್ಕೆ ಹಿಂದಿರುಗಿದ್ದರಿಂದ "ಚಿತ್ರಾಂಗದಾ" ಅರ್ಧದಲ್ಲೇ ನಿಂತಿತು.

"ನಾಯಕಿಯರದು ದೊಡ್ಡರಗಳೇ, ಅವರಿಲ್ಲದೆ ಚಿತ್ರ ತೆಗೆಯಲಾಗುವುದಿಲ್ಲವೇ" ಎಂದು ಆಗಲೆ ಲಕ್ಷಾಂತರ ರೂಪಾಯಿಕಳೆದು ಕೊಂಡಿದ್ದ ಕುಬೇರಹೇಳಿದ. ಮೊದಲು ಒಪ್ಪದಿದ್ದ ಇಂದ್ರ, ಕೊನೆಗೆ ನಾಲ್ಕಾರು ಮಂದಿ ಉಪನಾಯಕಿಯರಿರಬಹುದೆಂದು ಹೇಳಿದ ಮೇಲೆ ಸಮ್ಮತಿಸಿದ. ಪ್ರತಿ ದೃಶ್ಯದಲ್ಲಿಯೂ ಗೀತ ನಾಟ್ಯಗಳಿರುವುದಾದರೆ ಮಾತ್ರ ಚಿತ್ರವನ್ನು ನಿರ್ದೇಶಿಸುವುದಾಗಿ ಈಶಾನ ಹಠಹಿಡಿದ. ಹೋದ ಹಣ ಹಿಂದಕ್ಕೆ ಬರಲಿ ಎಂಬ ಆಶೆಯಿಂದ ಯುತ್ನವಿಲ್ಲದೆ ಕುಬೇರ ಎಲ್ಲಕ್ಕೂ ಒಪ್ಪಿದ.

ವೇಶ್ಯಾ ಪ್ರೇಮ ಅಥವಾ ಮಹಾನಂದಾ ಚಿತ್ರದ ಕತೆ ರಚಿತವಾಗಿ ಯಥಾಕಾಲದಲ್ಲಿ ಷೂಟಿಂಗ್ ಆರಂಭವಾಯಿತು-

ಇಷ್ಟೆಲ್ಲ ನಡೆಯುವಷ್ಟರಲ್ಲಿ ಭಾರತದ ಮೂಲೆ ಮೂಲೆಗಳಲ್ಲಿಯೂ ಇಂದ್ರಾ ಪಿಕ್ಚರ್ಸಿನಖ್ಯಾತಿ ಹರಡಿತು. ಇದುವರೆಗೆ ಯಾರು ಎಲ್ಲಿಯೂ ತೆಗೆಯದಂತಹ ಅಪೂರ್ವ ಚಿತ್ರವೊಂದು ಮದ್ರಾಸಿನ ವಿಚಿತ್ರ ಸ್ಟೂಡಿಯೋದಲ್ಲಿ ತೆಗೆಯಲ್ಪಡುತ್ತಿರುವುದಾಗಿ ದಿನ ವಾರ ಪತ್ರಿಕೆಗಳಲ್ಲಿ ಬಣ್ಣ ಬಣ್ಣದ ಜಾಹಿರಾತುಗಳು ಬಂದವು. ಬೊಂಬಾಯ್, ಲಾಹೋರ್, ದೆಹಲಿ, ಕಲ್ಕತ್ತಾ ಮುಂತಾದ ಸ್ಥಳಗಳಿಂದ ಹಂಚಿಗೆಗಾರರು ಮದ್ರಾಸಿಗೆ ತಂಡತಂಡವಾಗಿ ಯಾತ್ರೆ ಬಂದರು. ತುಂಡು ತುಂಡಾಗಿ ಪ್ರದೇಶಗಳನ್ನು ಕೊಂಡು ಕೊಂಡು ಬೇಡ ಬೇಡವೆಂದರೂ, ಬೇಕು ಬೇಕಾದಷ್ಟು ಮುಂಗಡ ಕೊಟ್ಟು ಹಿಂದಿರುಗಿದರು-

ಹಂಚಿಕೆಕಾರರು ಹೋದಮೇಲೆ ಕುಬೇರನು ಸಂತುಷ್ಟನಾಗಿ ವಿಶ್ರಾಂತಿ ಪಡೆಯುತ್ತಿದ್ದಾಗ ಬಿರುಗಾಳಿಯ ತರುವಾಯದ ಶಾಂತಿ—ಸ್ತಬ್ಧತೆಗಳಂತೆ ಎರಡು ಕಾಗದಗಳು ಇಂದ್ರಾ ಪಿಕ್ಚರ್ಸ್‌ಗೆ ಬಂದವು. ಒಂದು "ಸ್ಟೂಡಿಯೋದಿಂದ ಮೂರು ತಿಂಗಳ ಗುತ್ತಿಗೆ ಅವಧಿ ಹನ್ನೆರಡು ತಿಂಗಳಿಗೇರಿದರಿಂದ ಸ್ಟೂಡಿಯೋ ಬಾಡಿಗೆ ಎರಡು ಲಕ್ಷ ರೂಪಾಯಿ ಕೊಡಬೇಕೆಂದು" ಇನ್ನೊಂದು ಕಾಗದ ಫಿಲಂ ಲೈಸೆನ್ಸಿಂಗ್ ಅಧಿಕಾರಿಯಿಂದ—"ಇದುವರೆಗೆ ಕೊಂಡ ಕಚ್ಚ ಫಿಲ್ಮ್ ಲೆಕ್ಕ ಕೊಡದೆಹೋದರೆ ಮುಂದೆ ಫಿಲ್ಮ್ ಕೊಡುವುದಿಲ್ಲ" ಎಂದು-

ಅದಾದ ಮರು ದಿನದಿಂದ ಪ್ರತಿದಿನ ನಾಲ್ಕಾರು ನೋಟೀಸುಗಳು ಬರುತ್ತಿದ್ದವು- ನಟಿಯರಿಂದ, ಅಂಗಡಿಗಳವರಿಂದ, ಮನೆ ಮಾಲೀಕನಿಂದ, ಆದಾಯದತೆರಿಗೆ ಕಛೇರಿಯಿಂದ, ಜಾಹಿರಾತು ಏಜಂಟರಿಂದ. ಎರಡು ವಾರಗಳ ಇಂತಹ ಪತ್ರಗಳು ಎರಡಡಿ ಕಂತೆಯಾದಾಗ ಕುಬೇರನ ಎದೆಯೊಡೆಯಿತು. ಅಗ್ನಿ ವರುಣರನ್ನು ಬಿಟ್ಟ ಹಿಡಿದು ಲೆಕ್ಕಮಾಡಿಸಿದ. ಹಂಚಿಕೆದಾರರಿಂದ ಬಂದ ಎರಡು ಲಕ್ಷ ಮುಂಗಡದ ಹಣವನ್ನೆಲ್ಲಾ ಕೊಟ್ಟಮೇಲೂ ಎರಡು ಲಕ್ಷ ಬಾಕಿ ಉಳಿಯುವುದು. ಆರು ಲಕ್ಷ ಖರ್ಚಾದರೂ ಚಿತ್ರ ಕೂಡ ಪೂರ್ತಿಯಾಗಿಲ್ಲ!

ಮಾರನೆಯ ದಿನ ಪೂರ್ವ ಸಮುದ್ರ ತೀರದಲ್ಲಿ ವಾಯುಸೇವನೆಗಾಗಿ ಹೋಗುತ್ತಿದ್ದವರು ನೋಡುತ್ತಿದ್ದಂತೆ ಬೃಹದಾಕಾರದ ನಕ್ಷತ್ರವೊಂದು ಭೂಮಿಗಿಳಿಯಿತು. ಉಲ್ಕಾಪಾತವೆಂದು ಕೆಲವರು ಭ್ರಮಿಸಿದರು- ರಾಜನೊಬ್ಬನು ಸತ್ತಿರಬೇಕೆಂದು ಕೆಲವರು ಹೇಳಿದರು. ಇದೊಂದು ರಹಸ್ಯಾಸ್ತ್ರ—(ವಿ. 3) ಎಂದು ಇನ್ನೂ ಕೆಲವರು ಬೆಚ್ಚಿ ಕಿವಿಮುಚ್ಚಿದರು. ಪಾಪ! ಅವರಿಗೇನು ಗೊತ್ತು ಇಂದ್ರಾದಿಗಳ ಆರ್ತಸ್ವರವನ್ನು ಕೇಳಿ ಬೃಹಸ್ಪತಿ ಭೂಮಿಗಿಳಿದನೆಂದು.

ಆ ದಿನ ರಾತ್ರಿಯಲ್ಲಿ ಇಂದ್ರಾಪಿಕ್ಚರ್ಸಿನಲ್ಲಿ ಚರ್ಚೆಯೋ ಚರ್ಚೆ. ಚಲನ ಚಿತ್ರೋದ್ಯಮಕ್ಕೆ ಕೈಹಾಕಲು ಯಾರುಕಾರಣವೆಂಬುದು ಕೊನೆಗೂ ನಿರ್ಧರವಾಗ

ಲಿಲ್ಲ. ಇಂದ್ರಾದಿಗಳು ಬೃಹಸ್ಪತಿಯ ಮೇಲೆ ಬೃಹಸ್ಪತಿ ಇಂದ್ರನ ಮೇಲೆ, ಇಂದ್ರ ಅಗ್ನಿಯ ಮೇಲೆ ಈ ರೀತಿ ಸುಳುವಿನಲ್ಲಿಸಿಕ್ಕ ಚಂಡಿನಂತೆ ತಿರುಗುತ್ತಿತ್ತು ಆಪಾದನೆ. ಎಲ್ಲರೂ ಕೂಗಿ ಕೂಗಿ ದಣಿದು ಸುಮ್ಮನಾದ ಮೇಲೆ ಕುಬೇರನು ಹೇಳಿದ "ಈ ವಿಚಾರದಲ್ಲಿ ಆಚಾರ್ಯರಿಗಿಂತ ನಮ್ಮ ತಪ್ಪು ಹೆಚ್ಚಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಮ್ಮ ಮುಂದಿರುವ ಪ್ರಶ್ನೆ ಯಾರು ತಪ್ಪಿತಸ್ಥರೆಂದಲ್ಲ. ಈ ತಪ್ಪಿನ ಪರಿಣಾಮದಿಂದ ಉದ್ಧಾರವಾಗಿ, ಸಿವಿಲ್ ಜೈಲನುಭವಿಸದೆ ಮಾನವುಳಿಸಿಕೊಂಡು ನಾವು ಪುನಃ ದೇವಲೋಕಕ್ಕೆ ಹಿಂದಿರುಗುವುದು ಹೇಗೆ ಎಂದು, ಅದನ್ನು ಯೋಚಿಸಿರಿ "ಎಂದು.

ಕುಬೇರನ ಮಾತುಗಳಿಂದ ದಿಕ್ಪಾಲಕರಿಗೆ ಜ್ಞಾನೋದಯವಾಯಿತು. " ದೇವಲೋಕದ ಅಪ್ಸರೆಯರು, ಭೂಲೋಕದ ನಟಿಯರು ಇಲ್ಲದ ಸಿವಿಲ್ ಕಾರಾಗೃಹದಲ್ಲಿ ನರಕವಾಸ ನಮಗೆ ಸಾಧ್ಯವೇ ? " ಎಂದು ; ಯೋಚಿಸಿದರು.

ಯಾರಿಗೂ ಏನೂ ತೋರಲಿಲ್ಲ. ಕಟ್ಟಕಡೆಗೆ ಬೃಹಸ್ಪತಿಯೂ ಡೈರೆಕ್ಟರ್ ಈಶಾನನೂ ರಹಸ್ಯವಾಗಿ ಆಲೋಚನೆ ಮಾಡಿದರು. ಅಲ್ಲಿನವರೆಗೆ ಚಿತ್ರಸ್ಥವಾಗಿದ್ದ ದೃಶ್ಯದ ತುಂಡುಗಳಿಂದ "ವೇಶ್ಯ ದರ್ಪಣ", ಮತ್ತು " ಪ್ರೇಮ ತರ್ಪಣ" ಎಂಬೆರಡು ಚಿತ್ರಗಳನ್ನು ಜೋಡಿಸಿ ಕೊಡಲು ಈಶಾನನೊಪ್ಪಿದ. ಆ ಚಿತ್ರಗಳ ಮಾರಾಟದಿಂದ ಸಾಲ ತೀರಬಹುದೆಂದು ಕುಬೇರನಿಗೂ ತೋರಿತು.

ಅದರಂತೆ ಚಿತ್ರಗಳು ತಯಾರಾದವು. ವ್ಯಾಪಾರೀ ಪ್ರದರ್ಶನಕ್ಕೆ ಬಂದಿದ್ದ ಪ್ರದರ್ಶಕರು, ಹಂಚಿಕೆಗಾರರು, ಪತ್ರಿಕೋದ್ಯಮಿಗಳು ನರ್ತಕಿಯರ ಕೈಕಾಲುಗಳನ್ನು ಮೆಚ್ಚುವುದರಲ್ಲಿ ಚಿತ್ರದಲ್ಲಿ ಕತೆಯ ಅಭಾವವನ್ನೇ ಗಮನಿಸಲಿಲ್ಲ. ಪ್ರದೇಶ ಪ್ರದೇಶವಾಗಿ ಪುನರ್ವಿಕ್ರಯ ಮಾಡಿದಾಗ ನಿರೀಕ್ಷಣೆಗಿಂತ ಹೆಚ್ಚು ಹಣ ಬಂತು. ಸಾಲ ತೀರಿಸಿ ಉಳಿದ ಎರಡುವರೆ ಲಕ್ಷವನ್ನು ಮಾರವಾಡಿಗೆ ತೆತ್ತು ಒಡವೆಗಳನ್ನು ಬಿಡಿಸಿಕೊಂಡು ಬೃಹಸ್ಪತಿಯ ಬಾಲಹಿಡಿದು ಅಷ್ಟದಿಕ್ಪಾಲಕರು ಅಮರಾವತಿಗೆ ಅಭಿಮುಖರಾಗಿ ಗಗನಕ್ಕೆ ಹಾರಿದರು. ಅವರ ಬಾಯಿಂದ ಪಲ್ಲವಿಯೊಂದು ಕೇಳಿಬರುತಿತ್ತು.

ದೇವಲೋಕವನಾಳಿದವರಿಗೂ
ಚಲನ ಚಿತ್ರದಿ ಸೋಲುಸಿದ್ಧ—ಎಂದು

✤ ✤ ✤

ಅಮರಾವತಿಯ ವೈಜಯಂತ ಪ್ರಾಸಾದದ ಬಿಸಿಲು ಮಚ್ಚಿನಲ್ಲಿ ಕೈಪಿಡಿಯನ್ನು ಹಿಡಿದು ನಿಂತು ಶಚೀದೇವಿ ಕೆಳಗೆ ನೋಡುತ್ತಿದ್ದಳು—ಒಂದು ವರುಷವಾದರೂ ಪುರಂದರನೇಕೆ ಹಿಂದಿರುಗಲಿಲ್ಲ ಅಥವಾ ಭೂಲೋಕವಾಸದಿಂದ ಅವನ ಅಧಿಕಾರಾವಧಿ ಮುಗಿದಿರಬಹುದೇ. ಮುಂದೆ ಇಂದ್ರ ಪಟ್ಟಕ್ಕೆ ಬರುವವನು ಬಲಿ. ಹೊಸ ಗಂಡನೊಡನೆ ಹೇಗೆ ಸಂಸಾರ ಸಾಗುವುದೂ ? ಎಂದವಳು ಯೋಚಿಸುತ್ತಿದ್ದಂತೆ ಒಂಭತ್ತು ಜ್ಯೋತಿರ್ಮಯ ದೇಹಗಳು ಮೇಲೇರುತ್ತಿರುವುದು ಗೋಚರವಾಯಿತು.

ಶಚೀದೇವಿ ದೀರ್ಘವಾಗಿ ನಿಟ್ಟುಸಿರುಬಿಟ್ಟು ಅಂತಃಪುರವನ್ನು ಪ್ರವೇಶಿಸಿದಳು.

— ಅ ವು



“ ಆತನ ಜಂಭ ! ನೋಡಿ ಸಾರ್; ಹಿಂದೆ ನಿಂತಿರುವರ ಜ್ಞಾನವೇ ಇಲ್ದೆ
ಕೋಲಿಂದ ನನ್ನ ಎದೆ ತಿವಿದ್ಬಿಟ್ಟು ಹೋಗ್ತಾ ಇರೋದು........”

ಸಹಾನುಭೂತಿ

ಹಲ್ಲೋ, ಗೋಪು— ನೋಡಿ ವರ್ಷವಾಯ್ತಲ್ಲ— ನೀನು ಬಿಡಪ್ಪ— ನಮ್ಮನ್ನೆಲ್ಲಿ ಮಾತಾಡ್ತೀಯ— ನೀನಾಯ್ತು ನಿನ್ರಾಣಿಯಾಯ್ತು— ಆ ಹಾಗೇನು ?— ಅಯ್ಯೋ— ಕ್ಷಮ್ಸು, congra— I mean— regrets— ನೋಡು ಗೋಪು—ಹೋದ್ಸಲವೇ ನಾವೆಲ್ಲಾ ಕೇಳ್ಕೊಂಡಿದ್ವು— ಹೋಗ್ಲಿ ಈ ಸಲವಾದರೂ ನಿನ್ನ ಸ್ನೇಹಿತರಿಗೆಲ್ಲಾ— ಅಂದ್ರೆ ನನ್ಗೂ ಸೇರ್ಸಿ— ಪಾರ್ಟೀ—

✦ ✦ ✦

—ಎಲ್ಲಾ ಗೊತ್ತಾಯ್ತು ಗೋಪು— ಏನ್ಮಾಡೋದು ನೀನೇ ಹೇಳು— ಈ ಹಾಳು ಭೂಮಿಮೇಲೆ ಹುಟ್ದೋರೆಲ್ಲಾ ಹಾಗೇ ಒಂದಿಲ್ಲ ಒಂದಿನ್ನ— ನಾವಿದೆಲ್ಲಾ ಹಚ್ಕೋಬಾರ್ದಪ್ಪ— ನನಗೆ ಜಾತಕ ನೋಡಿದಾಗಲೇ ತಿಳೀತು— ಹುಡುಗಿ ಅಲ್ಪಾಯ್ಸೀಂತ— ಆದ್ರೆ ಅವರು ನಿಮ್ತಂದೇಗೆ ಬಳಗ— ಅವರ ಮನಸ್ಯಾಕೆ ನೋಯಿಸ್ಬೇಕೂಂತ ಹೇಳ್ಲಿಲ್ಲ— ಎಲ್ಲಾ ದೈವೇಚ್ಛೆ— ಇನ್ನೂ— — ಎಷ್ಟು— ದಿನಕ್ಕೆ— — ಗೋಪು ?— ಜ್ಯೇಷ್ಠ ಮಾಸ ಓಡಿ ಬರುತ್ತೆ— ನಿಮ್ಮ ತಂದೇಗೆ ಹೇಳಪ್ಪ— ಹಳೇ ಪುರೋಹಿತರನ್ನ ಮರೆಯಬೇಡಾಂತ— —

✦ ✦ ✦

ಓಹೋ, ಏನು ಗೋಪು— ಎಲ್ಲಾ ನಿನ್ನೇನೆ ಆಗೋಯ್ತಂತೆ— ದುಃಖ ಆಗುತ್ತೆ— ಆದ್ರೂ ಹೋದೋರು ಮತ್ತೆ ಬರ್ತಾರೇನೋ ?— ಏನು ನಿಮ್ತಂದೆ ಹೆಣ್ಣು ಹುಡುಕ್ತಿದಾರೆಯೇ— ಆ ಏನೋ ಈ ಹುಚ್ಚು !— ಮತ್ತೆ ಮದುವೆಯಾಗೋಲ್ವೆ ?— ಆಯ್ಯೋ ನಿಂಗೇನೋಗುಲ್ಲ— ಇನ್ನೂ ಆಯುಸ್ಸಿನ ಮೂರನೇ ಒಂದು ಭಾಗ ಕೂಡ ಕಳೆದಿಲ್ಲ— ನನ್ನೋಡು— ಇಂಥಾ ಮುಪ್ಪಿನ ವಯಸ್ನಲ್ಲಿ— ಐವತ್ಮೂರಾಗಿ ಅಬಲನಾಗಿರೋವಾಗ— ನನ್ನ ಮೂರನೇ ಕುಟುಂಬ—ಹುಃ, ನನ್ನ ಕೈಬಿಟ್ಳು— ಆದ್ರೂ—ಒಂಟಿಯಾಗಿರೋದು ಕಷ್ಟ ಗೋಪು— ನರೆಗೂದಲು ನಾಶಕ ಕೊಂಡುಕೊಂಡಿದೇನೆ—— ಆಗಲೇ ಅರ್ಧರ್ಧ ಫಲ ಕಂಡು ಬರ್ತಿದೆ— ನೆರೆಹಳ್ಳಿ ಶಾನುಭೋಗರ ಮಗಳು ವಯಸ್ಸಿಗೆ ಬಂದಿದಾಳೆ— ಆಗಲೇ ಹದಿನಾಲ್ಕು— ನಮ್ಮ ಜನ— ಮೂವ್ವತ್ತೂಂತ ಜಾತ್ಕ ಬರ್ಸಿ— ಮುಂದಿನ ಜ್ಯೇಷ್ಠದಲ್ಲಿ— ಏಕೆ ಹೇಳ ಹೊರಟೇಂದ್ರೆ— ನಾನೇ ಹೀಗ್ಮಾಡೋವಾಗ— ನಿನಗೇನೂಂತ — —

✦ ✦ ✦

ಓ! ಏನ್ರೀ ಗೋಪಾಲಸ್ವಾಮಿ— ಏನು ನನಗೆ ಸಮಾಚಾರವೇ ಗೊತ್ತಿರಲಿಲ್ವಲ್ಲ— ನಿನ್ನೆ ಸಾಯಂಕಾಲವ್ರೋ— ಏನಾಗಿತ್ತು ?— ಟೈಫಾಯ್ಡೇ ?— ನಾನು ಮೊನ್ನೆ ತಾನೆ ಇಬ್ಬರಿಗೆ ಡಿಸ್ಚಾರ್ಜು ಮಾಡಿ ಕಳಿಸ್ದೆ— ಡಾಕ್ಟರ್ಯ್ಯಾರೋ— ಓ ಅವನೆ ? ತಲೇಲಿ ಎಮ್ಮೆ ಸಗಣಿ ಬಿಟ್ರೆ ಬೇರೆಯಿಲ್ಲ— ಮೊನ್ನೆ ಯಾವನಿಗೋ ಹೊಟ್ಟೇ ನೋವಿಗೆ ಟಿಂಕ್ಚರ್ ಐಯಡಿನ್ ಕೊಟ್ಟಿಟ್ಟಿದ್ದ— ನಾನು ಕಷ್ಟಪಟ್ಟು ಬದುಕಿಸ್ದೇ ಅನ್ನಿ— ಅಂತೂ ನೀವು ದುಡುಕಿ ಕೆಟ್ಟಿರಿ— ಇನ್ನು ಮೇಲಾದ್ರೂ — — ಊ— — ಪೇಶಂಟೊಬ್ಬನನ್ನ ನೋಡ್ಬೇಕು— ಹೊರ್ಟೆ— ಮರೀಬೇಡಿ— — ಗುಡೀವ್ನಿಂಗ್—

—ಗೋಡಂಬಿ.

—0—



ಸಾಹೇಬರ ಮನೆ ಬಾಗಿಲನ್ನ ಜೋರಾಗಿ ತಟ್ಟಿದರೆ ಹೇಗೋ—
ಮೆಲ್ಲಗೆ ತಟ್ಟಿದರೆ ಅವರಿಗೆ ಕೇಳಿಸುಲ್ಲ -

ಯಾಲಕ್ಕಿ

— ಆ.... ಏನಂದೇ? ಯಾಲಕ್ಕೀನೆ? ತರಬೇಕೂಂದ್ಯ? ಅಲ್ವೇ ಈಚೆ ಬಾರೆ ಇಲ್ಲಿ. ಎಷ್ಟುಸಾರಿ ಹೇಳ್ಳೀ ನಿಂಗೆ, ಮೂವತ್ತು ವರ್ಷ ಸಂಸಾರ ಮಾಡಿ ೩ ಗಂಡು ೩ ಹೆಣ್ಣೆತ್ತು ಇನ್ನೂ ನಿಂಗೆ ಬುದ್ಧಿ ಬರ್ಲಿಲ್ಲವಲ್ಲಾಂತ ನನಗೆ ವ್ಯಸನಕಣೇ. ಮೂರುಕಾಸಿಗೆ ಯಾಲಕ್ಕಿ ತಗಂಬನ್ನಿ ಹೋಗೀಂತ ಕೊಸಗಿಬಿಟ್ಟೆಯಲ್ಲಾ ನೀನು ನನಗಂತೂ ಗೌರವಕೊಡದಿದ್ದರೆ ಹೋಗ್ಲಿ.... ಬೇಡಾ .. ನಿನಗಾದರೂ ಆತ್ಮಗೌರ್ವ ಬೇಡವೇ ಹೇಳು ಗೌರಿ. ಎಲಾ, ನಾನಿಷ್ಟು ದೊಡ್ಡಹೆಂಗ್ಸೇ, ನನಗಿವ್ರು ಯಜಮಾನ್ರು, ಇಂಥಾವರು ಕೇವಲ ಯಾಲಕ್ಕೀಗಾಗಿ, ಅದೂ ಮೂರು ಕಾಸು ಯಾಲಕ್ಕೀಗೆ........... ಅದು ನಿನಗೇನು ಗೊತ್ತಾಗುತ್ತೆ ಗೌರಿ, ಯೋಚ್ನೆಮಾಡು, ... ಸುಮಾರು 6, 6½ ಅಡಿ ಎತ್ತರದ ಆಳಾದ ಈ ಹಾಳು ನಾನು, ಕೈಯಲ್ಲಿ ಆ ಅರೆ ಗುಲಗಂಜೀ ತೂಕದ ಒಡಕು ಬಿಡಕಾಸನ್ನ ಎತ್ಕೊಂಡು........ಅಲ್ಲಿ ಹೋದ್ರೆ, ಆ ಹಾಳು ದೊಡ್ಡಶೆಟ್ಟಿಯಾದ್ರು ಇದ್ರೆ ಹೋಗ್ಲೀನ್ನಬಹುದು,...... ಅದು ಇಲ್ಲ, ಅವನ್ಮಗ ಆ ತರ್ಲೆ, ಕೂತಿರ್ತಾನೆ. ಅವನ ಮುಂದೆ ಜಿರಾಫೆಯಂತೆ ನಾನು, ಕೂರ್ಮನಂತೆ ಕೂತಿರುವ ಅವನ ಮುಂದೆ ನಾನು ನಿಂತು ಮೂರುಕಾಸ್ಗೆ ಯಾಲಕ್ಕಿ ಕೊಡಪ್ಪ ಅನ್ನಬೇಕಾದ್ರೆ............ ನನ್ನ ಪ್ರಾಣ ಹಿಡಿಯೊಳರ್ಧವಾಗಿರುತ್ತೆ. ಒಂದುವೇಳೆ ಹಾಗೂ ಕೇಳ್ದೆ ಅನ್ನು........ಇದ್ದರೆ ಸರಿಹೋಯ್ತು ಏನೋ ತಂದು ಬಿಡಬಹುದು.... .... ಒಂದುವೇಳೆ ಇಲ್ಲದೇ ಹೋದ್ರೆ "ಸಂಭವಾಮಿ ಯುಗೇ ಯುಗೇ' ಅಂದಹಾಗೆ ಅಂಗಡಂಗಡಿಗೊ ... ... ಅರ್ಧವಾದ ಜೀವ ಸಹಿತ ಅರೆಯಾಗಿ.... ಕೊನೆಗೆ ಯಾರಿಗೆ ಗೊತ್ತು ಗೌರಿ, ನನಗೆ ಹಾಗೇ ಜೀವನದಲ್ಲಿ ಬೇಸರ ಹುಟ್ಟಿತ್ತೋ ಏನೋ, ನಾನು ಬುದ್ಧನಂತೆ ಕಾಡಿಗೆ ಹೊರಟು ಹೊಗ್ತೀನೋ ಏನೋ, ... ಉ, ಅದೆಲ್ಲಾ ಏಕೆ, ಈಗ. ಆ, ನಿನಗೆ ದೇವ್ರು, ದಯ ಮಾಡಿ ಇತ್ತಿದ್ದಾನಲ್ಲಾ ಆರುಜನ, ಮಕ್ಕಳೂ ಅನಿಸಿಕೊಳ್ಳೋರು, ಅವರಲ್ಯಾರನ್ನಾದರೂ ಒಬ್ಬರನ್ನ ಈ ಸಣ್ಣ 3 ನಿಮಿಷದ ಕೆಲಸಕ್ಕೆ ಕಳುಹಿಸಬಾರ್ದೆ ಗೌರ........ ಅಲ್ಲಾ ಕಣೇ ಇಲ್ಲಿ ಹತ್ತಿರ ಬಾರೆ. . ನಿನಗೆ ಹೇಳ್ಲಿಲ್ಲವೇನೆ ನಿನ್ನೆ, ಕಛೇರೀಲಿ ಮಾತಾಮಾತು ಬಂದು ಅಮಲ್ದಾರ್ರು ಬಂದು .. "ರಿಜಿಸ್ಟರ್ ಇಲ್ಲಿ ಕೊಟ್ಟಿಡ್ರಿ ನನ್ನ ವಶಕ್ಕೆ ವೆಂಕೋಬ್ರಾವ್" ಅಂತ ಕೇಳಿದ್ದಕ್ಕೆ ನಾನು "ಅದೆಲ್ಲಾ ನಿಲ್ಲಿಸ್ಬಿಡಿ ಸಾರ್, ಜುಲುಂಗೆ ಜಗ್ಗೋ ಗಂಡಲ್ಲ ಸಾರ್ ಇದು, ರಂಗರಾವೇರಿ ಪಿಂಡ ಇದು''—ಅಂತ ಅನ್ನೋ ಸಾಮರ್ಥ್ಯಮಾಡಿದ ಭೂಪ ನಾನು ಅಂತ.... ..ಏನೇ ಕಣೆ, ಅದಕ್ಕೇ ನಿನಗೆ, ಅಂತರ, ಅಂತರ್ಯ ದೃಷ್ಟಿ ಇಲ್ಲ ಅನ್ನೋದು ನೋಡು.

ಏನು, ಎಲ್ಲಾ ಸ್ಕೂಲಿಗೆ ಹೋಗಿದ್ದಾರೇಂದ್ಯ... .... ಹೋಗ್ಲೀ ಈಚ್ಗೆ ಬಂದು ಮಾತಾಡೆ, ಹೋಗೇಗೆ ಸಾಯ್ತಾ ಇದ್ಬೀ ....ಊ ಹೋಗ್ಲಿ ಕೊಡು ಇಲ್ಲಿ ಕಾಸು ......ಏನು 3 ನಿಮಿಷದ ಕೆಲ್ಸ .... . ಎಲೇ ಹಾಕಿ ಬಡ್ಸು ಬಂದುಬಿಟ್ಟೆ.

ಯಾಕೋ ಕತ್ತೆ, ಹಿಡಿಕ್ಕೊಂಡು ತದಕಿಬಿಟ್ಟೇನು ಭದ್ರ ನನ್ನ ಮೈಮೇಲಿದ್ದೇನೋ ಟಾರ್ರಸ್ತೆ. ಕಣ್ಣುಗಳು ಒಳ್ಳೆ ರೂಪಾಯಿ ರೂಪಾಯಗ್ಲ ಇದ್ದೈಲ್ಲೋ, ಒಳ್ಳೆ ಗೂಳಿಗಿದ್ದ ಹಾಗೆ, ... ಸೈಕಲ್ ನನ್ನಮೇಲೆ ಏರಿಸಿದ್ದೀ....ಯ್ಯಾ, ತಿರುಗಿ ಮಾತಾಡ್ತಿಯ... ....ಬಿಟ್ಟುಬಿಟ್ಟೇನು, ಬೆಲ್ಲಿಲ್ಲದ ಸೈಕಲ್ ಬಿಟ್ಟು ನನ್ನೇ ಕತ್ತೆ, ಕಿವಿ ಇಲ್ಲವೇ ಅಂತ ಕೇಳ್ತೀಯಾ, ಅದು ನಿಮ್ಮಪ್ಪನ ಟೆಲಿಗ್ರಾಂ ಅಡ್ರಸ್ ಇರ್‍ಬಹುದು ತಿಳಿತಾ? ಹಲ್ಲುದಿರ್‍ಸಿನಿನ್ಹೆಂಡ್ತೀಗೆ ಪಗಡೆ ಆಡೋಕೆ ದಾಳಾಮಾಡಿ ಕೊಟ್ಟೇನು ಭದ್ರ.... ನಡಿಯೋ ಪೋಲೀಸ್ ಸ್ಟೇರ್ಷಗೆ... . ಓಹೋ ಏನೋ ಕಿಟ್ಟಣ್ಣ ಬಾ, ಅಲ್ಲಾ ಈ ದಾಂಡಿಗಾ ಸೈಕಲ್ ನನ್ನಮೇಲೆ ಏರಿಸಿದ್ದೂ ಅಲ್ದೇ ನನ್ನ ಮೇಲೇ ರೇಗೋಕೆ ನೋಡ್ತಾನೆ ಮತ್ತೆ... ಸರೀ ನೀನು ಸರಿಯೆ... ಬಿಟ್ಟುಬಿಡೂಂತೀಯ... ಏ! ಏನ್ರಯ್ಯ ಇಲ್ಲಿ ಕೋತಿ ಕುಣಿಯುತ್ತೈ ? ಹೋಗ್ರಯ್ಯ ಏನೋ ಗುಂಪ ಕಟ್ಕೊಂಡ್ರು... ಇಲ್ಲಾ ಕಿಟ್ಟಣ್ಣಾ ಇವನ್ನ ಪೋಲೀಸ್ ಸ್ಟೇರ್ಷ ಮೆಟ್ಲು ಹತ್ತಿಸಿ ಕಳುಹಿಸೋಣಾಂತಿದ್ದೆ.... . ..ಲೇ, ಹೋಗ್ಲಿ ಹೋಗು ಇವತ್ತು ನಿನ್ನ ಅದೃಷ್ಟ ಚೆನ್ನಾಗಿತ್ತು, ಇವರ್ಗೆ ನಮಸ್ಕಾರ ಹಾಕಿ ಹೋಗು, ನಿನ್ನ ಪಾಲಿಗೆ ದೇವ್ರು ಬಂದಹಾಗೆ ಬಂದ್ರು........ ಊ ಹೋಗು....ಭದ್ರ........

✤ ✤ ✤

ನೋಡು ಕಿಟ್ಟು ನ್ಯಾಯ, ದೇವ್ರು, ದಿಂಡ್ರು, ಸತ್ಯ, ಧರ್ಮ ಅನ್ನೋದು ಎಲ್ಲಿದೆ ನೋಡು. ತಪ್ಪೇನೋ ನಂದೆ ಕಿಟ್ಟು ಫುಟ್ಪಾತು ಮೇಲೆ ಬರ್ದೇದ್ದದ್ದು ನಂದೇ ತಪ್ಪು. ಯಾವುದಕ್ಕೂ ಖ್ಯಾತಿ ಬೇಕು ನೋಡು ಕಿಟ್ಟು ...ಊ ಹೋಗ್ಲಿ, ಕಂಗ್ರಾಜಿಲೇರ್ಷಮ್ಮ.. ಮಗ I ಕ್ಲಾಸು ಬಂದ್ರೂ ಕಾಫಿ ಮಾತು ಎತ್ತದೇನೇ ಇದ್ದೀಯಲ್ಲೋ ಕಿಲಾಡಿ ನೀನು... . . .. ಏನು ಫೇಲು ಅಂದೆಯಾ..... .. ಹೋಗೊ ಹೋಗೋ, ರಾಮು ಹೋಗಿ ನೋಡಿಕ್ಕೊಂಡು ಬಂದಿದ್ದಾನೆ, ನಿನ್ನ ಮಗಂದು 1263 ತಾನೇನೋ... .... ರಿಜಿಷ್ಟರ್ ನಂಬ್ರು. . ... ಸರಿ ಹಾಗಾದರೆ ಪಾಸುಕಣೋ.. . .... ಇನ್ನೂ ಅಪನಂಬಿಕೇನೇ........ ನಿನ್ನ ಮಗಾನೇ ಹೇಳಿದ್ನೇ ಫೇಲೂಂತ ? .. . ಆಶ್ಚರ್ಯಾನಪ್ಪಾ ನಂಗೇನೋ....... ಅಷ್ಟೇಕಪ್ಪಾ ಹೋಗಿ ನೋಡಿಕ್ಕೊಂಡೇ ಬಂದ್ಬಿಡೋಣಾ ನಡಿ, ಅಂದ್ರೆ ಒಂದು ಮಾತು ಕಿಟ್ಟು........ ಕಾಫೀ ಜೊತೆಗೆ ಸಿನಿಮಾನಮ್ಮಾ—ಒಪ್ಪಿಕೊಳ್ತೀಯ. ಲೇ ಕಿಟ್ಟು! ಅಲ್ನೋಡು ಅಲ್ಯಾರು ಹೋಗ್ತಿರೋದು ಸೈಕಲ್,ಮೇಲೆ, ಹನ್ಮು ಇದ್ದಹಾಗೇ ಇದೆಯಲ್ಲೋ ಅಲ್ಲಾ ?— ಚಪ್ಪಾಳೆ ಹೊಡಿ........ ಏ ಹನ್ಮು.... ಹನ್ಮು ಹನ್‌ಮೂ........ನಿಂತ್ಕೊಳ್ಳೋ....

ಏನೋ ಕಣ್ಣು ಕಪಾಳ ಇಲ್ಲದೆ ತುಳೀತಾ ಇದ್ದಿ. ಈ ಉರಿ ಬಿಸಲಿನಲ್ಲಿ .... ಡಾಕ್ಟರ್‍ನ ನೋಡೋಕೆ ? ! ನಿಮ್ಮ ತಾಯಿಗೆ ? ! ಶ್ಯಾನೆ ಸೀರಿಯಸ್ಸೂ ?.... .... ರಾಮು ನೀನ್ನಡಿ ನಾನು ಇವನ್ಜತೇಲಿ ಹೋಗಿಬರ್‍ತೀನೆ. ಹನ್ಮು! ನೀನೂ ಮನೆಗೆ ನಡಿ ನಾನು ಕರೆಕ್ಕೊಂಡು ಬಂದ್ಬಿಡ್ತೀನೆ ... . ಏನು ಯೋಚನೇ ಮಾಡ್ತಿ ಪರಾವಾಇಲ್ಲ ದೇವ್ರಿದ್ದಾನೆ ನಡಿಯೋ... ....

✤ ✤

ಏನೂ ಇಲ್ಲಾ ಸಾರ್. ಸ್ವಲ್ಪ ವೈ ಅಲಿಸಿದೆ.... ಸ್ವಲ್ಪ ಜ್ವರಾನೂ ಬಂದಂತೆ ಕಾಣುತ್ತೆ. ಅದರ ಮೇಲೆ ಮುದ್ಕೀ.... .... . ಏ ಜಟ್ಕಾ, ಜಟ್ಕಾ.... ಊ ಹತ್ತಿ ಸಾರ್.... ಎಡಗಡೇ ತಿರಿಗ್ಸೋ.. . .... ಅಲ್ಲಿಕಾಣೋದೇ ಆ ಲಾಂದ್ರಾಕಂಬ ಹೈ, ದೇಕೋ ಜೀ ... ..., ಇಳೀರಿ ಸಾರ್ ಇದೇ ಸಾರ್ ಮನೆ ... . . ನಡೀರಿ ಸಾರ್. ಏ ಕ್ಯಾರೇ ... ನಾಲ್ಕಾಣೆಗಿಂತ ಇವನ್ಮಾಡಿದ ಕೆಲಸಕ್ಕೆ ... ನಡಿಯೊ ನಡಿಯೊ, ಜಾಸ್ತಿ ಮಾತಾಡಿದರೆ ಅದೂ ಕೊಡೋದಿಲ್ಲಾ ಬೇಕೂಫ್.... .... .

ಏನೋ ಹನ್ಮ ಆಗಿಹೋಯ್ತೋ !.... ಹು ಎಲ್ಲಾ ದೇವ್ರ ಪ್ರೀತಿ ಹನ್ಮ.... ಯೋಚನೆ ಮಾಡಬೇಡ ಹನ್ಮ— ವೆರಿ ಸಾರಿ ಸಾರ್— ಉ ಹೋಗ್ತೀರಾ ಸಾರ್.... ಸುಮ್ನೆ ತೊಂದ್ರೆ ಕೊಟ್ಟ ಹಾಗಾಯ್ತು ಸಾರ್.... ಏ ಹೋಗಿ ನಿನ್ನ ತಮ್ಮನ್ನ ತಂಗೀನ್ನ ಸುಧಾರಿಸು ಹೋಗೋ ಏನೋ ಹೆಣ್ಣಂಗೆ ಅಳೋದೆ ನೀನೇ ಹೀಗೆ ಮಾಡಿದ್ರೆ ಹ್ಯಾಗೋ ಹನ್ಮ. .ಯಾರಿಗಾದ್ರು ಟೆಲಿಗ್ರಾಂ ಕೊಡಬೇಕೇನೋ ?—ಸರಿ ಹಾಗಾದ್ರೆ ತಂಟೆ ಇಲ್ಲ ಬಿಡು—ನೀನ್ನಡಿ ನಾನು ಎಲ್ಲಾ ಸರಿ ಮಾಡಿಕ್ಕೊಂಡು ಬರ್ತೀನೆ.

♣ ♣

ಈ ಕುಂಟೇಲಿ ಮುಣುಗ್ಹಾಕಪ್ಪ.... ತಗೊ ಈ ಚೌಕ ಹನ್ಮ ಸ್ವಲ್ಪಯೋಚ್ನೆ ಮಾಡು.... ನಾನು ನೀನು ಒಂದು ದಿನ ಇಲ್ಲಿಗೆ ಬರಲೇ ಬೇಕಲ್ವೇ . . .. ಈ ಕುರುಕ್ಷೇತ್ರಕ್ಕೆ. ಉ ನಡಿಯಪ್ಪ ನಡಿ— ಎಲ್ಲಾ ಅವನ ಮಾಯೇ... ....

♣ ♣ ♣

ಹನ್ಮ ! ಈ ಹೊತ್ತಿನ ಕೆಲ್ಸ ಇನ್ನೇನು ಮುಗಿದ ಹಾಗೇನೇ. ನಾಳೆ ಬೆಳಗ್ಗೆ ಬೇಕಾದ್ರೆ ರಜಾಹಾಕಿ ಬರುತ್ತೇನೆ. ಭಯಬೇಡ . ಏನು ಈಗ ಹತ್ತಿರ್ದತ್ತಿರ $5\frac{1}{2}$ ಆಗ್ತಾ ಬಂತು.... ನಾಬರ್ತೀನೆ ಹನ್ಮ .... ನಿನ್ನ ತಂಗೀಗೆ ಸಮಾಧಾನ ಹೇಳಪ್ಪಾ.

♣ ♣ ♣

ಅಯ್ಯೋ ಪೆದ್ದೇ, ಕೂಗಿದ್ರೆ ಆಗ್ತಿರಲಿಲ್ಲವೇನೋ. ಇಷ್ಟು ಧಾವಂತ ಬಿದ್ದಿದ್ದೀ ಮನೇಗೆ ಹೋಗಿದ್ಯಾ ?.... ಊ ಏನವ್ನ ರಿಸಲ್ಟು ಪಾಸುತಾನೆ ನಾಹೇಳಿಲ್ವೆ— ಕೊಡ್ಸು ನಡಿ ಕಾಫೀ.... ಆಮೇಲಾಗ್ಲಿ ಸಿನಿಮಾ, ಇನ್ನೂ ಈಗ ಆರು. 6-45ಕ್ಕೆ ತಾನೇ ಷುರು.

♣ ♣ ♣

ನೀನೇನಾದ್ರು ಹೆಳ್ರಾಮು ಈನಡ್ವೆ ಈ ಹೋಟೆಲ್‌ನವನು ಕಲ್ತುಬಿಟ್ಟ. ಇಲ್ಲಿ ನೋಡು ಇತ್ಕಡೆ.... ಇವರ್ಗೆ ಓದಿದ್ದ ಹುಡುಗ್ರು ಅಂತ ಹೆಸರು. ಅವನು ಹೊಸ ರೆಕಾರ್ಡು ಹಾಕ್ತಾ ಇದ್ದಾನೆ. ಎಂಜಲೆಲೆಗೇ ಕಾದಿರುತ್ವಲ್ಲಾ ನಾಯಿಗ್ಳು

ಹಾಗೇ ಇವರು, ಈ ಸರ್ಕಲ್ಲ್ ಹತ್ತಿರ ಗಂಭೀರವಾಗಿ ನಿಂತಿದ್ದಾರೆ ನೋಡು. ಇವೆಲ್ಲಾ ಸಂಸ್ಕಾರವಾದವರ ಲಕ್ಷಣ. ಕಲಾರಾಧಕರೂ ರಾಮು. ನಮ್ಮ ಕಾಲದಲ್ಲಿ ...

♣ ♣ ♣

ಯಾಕೋ, 12 ಆಣೆ ಟಿಕೇಟೇ ಇರ್ಲಪ್ಪ ಸುಮ್ಮನೇ ದುಬಾರಿ ಬೇಡ ರಾಮು.

♣ ♣ ♣

ಏನೋ ಅಲ್ಲಿ ಷುರು ಆಗೋದಹಾಗೆ ಇದೇ. ಇಲ್ಲಿದ್ದೇನೊ ಇಲ್ಲಿ. ಭದ್ರ ಅಲ್ಲಿ ಮೆಟ್ಲಿದೆ.... .... ಇಲ್ಲೇ ಕೂತ್ಕೊ ಸೀಟಿದೆ.... .... ಭದ್ರ ಅದಕ್ಕೆ ಕೈಯಿಲ್ಲ ಆ ಕುರ್ಚಿಗೆ.... ....

♣ ♣ ♣

ನೀನ್ಹೇಳಿದಹಾಗೆ ಪ್ರಯೋಜನವಿಲ್ಲಾ ರಾಮು. ಸುಮ್ಮನೆ ಈ ಪಿಕ್ಚರ್‌ಗಳ್ನ ಕಾಸುಕಿತ್ಕೊಳ್ಳೋಕೆ ಮಾಡಿರೋವೇ....ಕತೆಯೇ ಇಲ್ಲನೋಡು... ಉ ಹೊಗ್ತೀಯ — ಇನ್ನ 10-45 ಆಯ್ತು ರಾಮು ಗುಡ್ ನೈಟ್

♣ ♣ ♣

ಲೇ........ ಏನೇ .. ... ಗೌರ........ ಗೌರ... ... ಗಣಪತೀ, ಗಣಪತೀ .. . ಅಮ್ಮಣ್ಣಾ, ಅಮ್ಮಣ್ಣಾ ಮಾಲೀ, ಪಾಚು ಬಾಗ್ಲುತೆಗೀಮ್ಮ. ....

ಅದೇನು ನಿದ್ದೇನೆ ನಿನಗೆ ... . ಪಕ್ಕದಮನೇವ್ರೋರು ಏಳೋವರ್ಗೂಸರಿ.. . .. ಭೇಷ್ ಒಳ್ಳೆ ಹೆಂಗ್ಸು.

♣ ♣ ♣

... .. .ಆ ಯಾಲಕ್ಕೀನೇ ಓಹೋ ಅದು ತರೋಕಲ್ವೇ ನಾನ್ಹೊರಟಿದ್ದು........ ಹಾಗಾದ್ರೆ ಕೇರು ಹಾಗೆ ಒಡಿಸಿದ್ಯಾ ಮಕ್ಕಳಿಗೆ.... ಹೋಗ್ಲಿಬಿಡು ನಾಳೆ ತಂದ್ರಾಯ್ತು.

—'ಶನಿ'

ಬಟ್ಟೆ ತಲೆಯ ಆಸಾಮಿ ಗೊಣಗಿದನಂತೆ: "ಬೆಳೆಗೇನೂ ಕಡಮೆ ಇಲ್ಲ! ಹಂಚಿರುವುದರಲ್ಲೇ ಪಕ್ಷಪಾತ!"

♣ ♣ ♣

ಕೀರ್ತನಕಾರರ ಸಮ್ಮೇಳನದಲ್ಲಿ ಪಾಸಾದ ಠರಾವು:- "ಹತ್ತಿಯ ಬೆಲೆಯನ್ನು ಇಳಿಸಿ ಈ ಪುರಾತನ ಕಲೆಯನ್ನು ಪ್ರೋತ್ಸಾಹಿಸಬೇಕೆಂದು ಕಾಟನ್ ಕಂಟ್ರೋಲ್ ಆಫೀಸರನ್ನು ಕೇಳಿಕೊಳ್ಳತಕ್ಕದ್ದು,

ಉದ್ಯಾನಸ್ಥಾನದಲ್ಲಿ ಬೆಂಗಳೂರಿನ
ಹಿರಿಮೆಗೂ ಸೌಂದರ್ಯವು ಆಡುಮಾತಾಗಿದೆ.

ನಮ್ಮ ಚಿತ್ರಾಲಯಗಳು ಈ ಸೌಂದರ್ಯಕ್ಕೆ
ಮೆರಗು ಕೊಟ್ಟಿಂತಿವೆ

"ಸ್ಟೇಟ್ಸ್"

[illegible]


STATES

ಸಮ್ರಾಟ್ ಚಂದ್ರಗುಪ್ತ

ಪ್ರಥಮ ಪ್ರದರ್ಶನದ ತಾರೀಖನ್ನು ಗಮನಿಸಿರಿ

[illegible] ತಂಪಾದ ವಾತಾವರಣದ ರಜತ ಪರದೆಯಮೇಲಿ
ಉತ್ತಮೋತ್ತಮ ಚಿತ್ರಗಳನ್ನು ನೋಡಿಯಾನಂದಿಸಿರಿ

ಬೆಂಗಳೂರು ಸಿಟಿಯ ಕೆಂಪೇಗೌಡ ರಸ್ತೆಯ ಸ್ಟೇಟ್ಸ್ ನ್ನು
ಭೇಟಿ ಮಾಡಿ.



" ನಿನ್ನದೃಷ್ಟ ನಾನೇನ್ಮಾಡ್ಲಿ. ಯಾಕೋ ಈವತ್ತು ಮುಚ್ಚಿದಾರಂತೆ........."

ರಂಗಪ್ಪ ಮತ್ತು ರಾವಣಭಾತ್

ಬ್ರಹ್ಮೇಂದ್ರ ಭವನದ ಮೂರನೆಯ ಮಹಡಿಯಲ್ಲಿ ಮಾತಿನ ಶಬ್ದವು ನಿಂತು ಹೋಗಿತ್ತು. . ಆಗಾಗ್ಯೆ "ಭೇಷಾಗಿದೆ!", "ಶಾಭಾಸ್!" "ವಹವ್ವಾ!" ಎಂಬವು ಮಾತ್ರ ಕೇಳಿ ಬರುತ್ತಿದ್ದವು- ಗವಾಯಿ ಸಂಗೀತವೆ? ಎಂದು ಕೇಳಬಹುದು. ಗವಾಯಿ ಸಂಗೀತಕ್ಕಿಂತ ಸ್ವಾರಸ್ಯವಾದ ವಿಷಯ; ಒಳ್ಳೆ ಸೊಗಸಾದ ರಾವಣಭಾತ್!

ರಾವಣಭಾತೆಂದರೆ ಈಗಿನ ಅನೇಕರಿಗೆ ಅರ್ಥವಾಗುವುದೇ ಇಲ್ಲ. ಖಾಂದಾ ಬಾತ್, ಖೇಲಾಬಾತ್, ಬಟಾಣೀಭಾತ್ ಎಂದು ಹಿಂದೂಸ್ಥಾನೀ ಹೆಸರಿರುವುದನ್ನು ಹೇಳಿದರೆ ಎಲ್ಲರೂ ಒಡನೆ ತಲೆ ತೂಗುತ್ತಾರೆ, ಅಥವಾ ನಳಿನೀಭಾತ್, ಕನ್ನನ್ ಭಾತ್ ಇವೇ ಮೊದಲಾದ ಸಿನಿಮಾ ತಾರೆಯರ ಹೆಸರಿರುವುದು ಹೇಳಿದರೂ ಒಡನೆ ಅರ್ಥವಾಗುತ್ತೆ. ಆದರೆ ಅನಾದಿಯಿಂದ ರಾಮಾಯಣ ಕಾಲದಿಂದಲೂ ಬಂದ ರಾವಣಭಾತೆಂದ್ರರೆ ಶೇಕಡ ತೊಂಭತ್ತೊಂಭತ್ತು ಜನ ಏನದು ಎಂದು ಕಣ್ಣು ಕಣ್ಣು ಬಿಡುತ್ತಾರೆ. ಯಾರಾದರೂ ಒಬ್ಬರಿಬ್ಬರು ಮಾತ್ರ "ಅದೇನು, ಮಹಾ! ಹುಳಿ ಯನ್ನ, ಅಷ್ಟೆ!" ಎನ್ನಬಹುದು, ಆದರೆ ಹುಳಿಯನ್ನಕ್ಕೂ ರಾವಣಭಾತಿಗೂ ಅಜಗಜಾಂತರ. ಅನ್ನದಲ್ಲಿ ಕಲಸಿದ ಬದನೇಕಾಯಿ ಪಲ್ಯಕ್ಕೂ ವಾಂಗೀಭಾತಿಗೂ ಇದ್ದಹಾಗೆ. ಅಥವಾ ಮಜ್ಜಿಗೆ ಅನ್ನಕ್ಕೂ ಬಕ್ಕಾಳಾ ಭಾತಿಗೂ ಇದ್ದ ಹಾಗೆ!

ರಾವಣಭಾತು ಮೊದಲು ರಾಕ್ಷಸೇಶ್ವರನಾದ ರಾವಣನ ಮನೆಯಲ್ಲಿ ಮಾಡಲ್ಪಡುತ್ತಿದ್ದು ರಾಮನ ದಂಡಯಾತ್ರೆಯಾದಮೇಲೆ ಭರತಖಂಡಕ್ಕೆ ಹಬ್ಬಿತು. ಹನುಮಂತನು ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಿದ್ದಾಗ ರಾವಣನ ಅಡಿಗೆ ಮನೆಯಲ್ಲಿಟ್ಟಿದ್ದ ರಾಶಿರಾಶಿ ರಾವಣಭಾತನ್ನು ಕಂಡು ಇದೇನಿರಬಹುದೆಂದು ತಿಂದು ನೋಡಿ ಅಚ್ಚರಿಗೊಂಡು ಅಲ್ಲಿದ್ದುದನ್ನೆಲ್ಲಾ ತನ್ನ ಬೃಹದ್ರೂಪದಲ್ಲಿ ಒಂದೇಬಾರಿ ಗಬಕ್ಕನೆ ನುಂಗಿ ಮತ್ತೆ ಸೂಕ್ಷ್ಮರೂಪವನ್ನು ಧರಿಸುವುದೇ ಕಷ್ಟವಾಗಿ, ಅರ್ಧ ಘಂಟೆಯ ಹೊತ್ತು ಅಡಿಗೆಮನೆಯನ್ನೇ ಬಿಟ್ಟು ಬರದೆ, ಕಥೆಯನ್ನು ಮುಂದುವರಿಸುವುದಕ್ಕಾಗಿ ಕಾದಿದ್ದ ಆದಿಕವಿ ವಾಲ್ಮೀಕಿಗೆ ತಲೇನೋವು ಬರುವಂತೆ ಮಾಡಿಬಿಟ್ಟ ವಿಚಾರ ಶಂಖ ಪುರಾಣದಲ್ಲಿ ವಿಸ್ತರಿಸಲ್ಪಟ್ಟಿದೆ. ರಾಮನು ಅಯೋಧ್ಯೆಗೆ ಹಿಂತಿರುಗುವಾಗ ರಾವಣ ಭಾತಿನ ಬುತ್ತಿಯನ್ನು ಪುಷ್ಪಕದಲ್ಲಿಟ್ಟು ತಂದದ್ದು, ದಾರಿಯಲ್ಲಿ ಅಗಸ್ತ್ಯರಿಗೆ ಕೊಟ್ಟು ಅವರು ಅದನ್ನು ತಿಂದು ಅದರಮೇಲೆ ಬಾಯಾರಿಕೆಯಿಂದ ಸಮುದ್ರವನ್ನೆಲ್ಲಾ ಕುಡಿದುಬಿಟ್ಟದ್ದು, ನಂದೀಗ್ರಾಮದಲ್ಲಿ ಭರತನು ಅದರ ರುಚಿ ನೋಡಿ ಪರವಶನಾಗಿ ಮನುಷ್ಯನು ಜೀವದೊಂದಿಗೆ ಮಾತ್ರ ಇದ್ದದ್ದೇ ಆದರೆ ನೂರುವರ್ಷಗಳ ಮೇಲಾದರೂ ಇಂತಹ ಆನಂದವನ್ನು ಕಂಡೇಕಾಣುವನು ಎಂದು ಹೊಗಳಿದ್ದು ಎಲ್ಲರಿಗೂ ತಿಳಿದ ವಿಷಯ. ಈ ರಾವಣಭಾತಿನ ಪೂರ್ವ ಚರಿತ್ರೆ ನನಗೆ ಅಷ್ಟಾಗಿ ಗೊತ್ತಿರ

ಲಿಲ್ಲ. ಮೊನ್ನೆ ನಮ್ಮ ಭೀಮಣ್ಣನು ಹೇಳಿದಮೇಲೆ ತಿಳಿಯಿತು. ಆ ದಿವಸ ಬ್ರಹ್ಮೇಂದ್ರ ಭವನದಲ್ಲಿ "ಸ್ಪೆಷಲ್ಲಾಗಿ" ಅದರ ತಯಾರಿಕೆಯು ಭೀಮಣ್ಣನ ಸಲಹೆಯ ಮೇರೆಯೇ. ಅದೂ ರೇಷನ್‌ಕಾಲವಾದ್ದರಿಂದ ನಮ್ಮ ಮೂರನೆಯ ಮಹಡಿಯವರಿಗೆ ಮಾತ್ರ.

ಒಬ್ಬೊಬ್ಬರೂ ಎರಡು, ಮೂರು ತಟ್ಟೆಗಳ ತುಂಬ ತಿಂದದ್ದಾಯಿತು. ಕುಳ್ಳಪ್ಪನು ಭಾತಿನೊಡನೆ ಖಾರಾಬೂಂದಿಯನ್ನು ಸೇರಿಸಿ ಹೊಡೆದದ್ದೊ ಹೊಡೆದದ್ದೆ! ಚಾಮುಂದಿ ಚಾಡಾಮಿಹಾಲಿನ ಗೋವಿಂದಸಾಮಿಯು ಕಣ್ಣುಮೂಗುಗಳಲ್ಲಿ ನೀರು ಸುರಿಸುತ್ತಾ "ಭೇಷ್, ಭೇಷ್," ಎಂದು ಐದು ತಟ್ಟೆಗಳನ್ನು ಮುಗಿಸಿದನು. ಆರನೆ ತಟ್ಟೆಯಲ್ಲಿ ಅರ್ಧ ತಿನ್ನುವವೇಳೆಗೆ ಅವನಿಗೂ ಸಾಕಾಗಿ ಹೋಗಿ ತಟ್ಟೆಯನ್ನು ಮೇಜಿನ ಮಧ್ಯಕ್ಕೆ ತಳ್ಳಿಬಿಟ್ಟು "ಉಸ್ಸಪ್ಪಾ" ಎಂದು ಹಿಂದಕ್ಕೆ ಒರಗಿ ಬಿಟ್ಟನು.

ಎಲ್ಲರೂ "ಉಂಟೇ, ಉಂಟೇ, ಪೂರೈಸಿಬಿಡಬೇಕು" ಎಂದರು.

ಅವನು "ಹಾಳು ಅನ್ನದ್ದು - ಹೆಚ್ಚು ತಿನ್ನುವುದಕ್ಕೇ ಆಗುವುದಿಲ್ಲ" ಎಂದನು. ಕುಳ್ಳಪ್ಪನು "ಬಯ್ಯಬಾರದು, ಅನ್ನದೇವತೆ ನೊಂದುಕೊಂಡಾಳು. ತಪ್ಪಾಯಿತೆಂದು ಕೆನ್ನೆಗೆ ಹೊಡೆದುಕೊ" ಎಂದನು.

ಕಪ್ಪಣ್ಣನು "ಈ ರೇಷನ್‌ಕಾಲದಲ್ಲಿ ಸಿಕ್ಕುವುದೇ ಕಷ್ಟ ಬಿಡುವುದುಂಟೆ? ಅಲ್ಲದೆ ರಾವಣನೇನಂದುಕೊಂಡಾನು? ತಿಂದುಬಿಡು" ಎಂದನು.

ಭೀಮಣ್ಣನು ತಾನು ಖಾಲಿಮಾಡಿದ್ದ ಎಂಟು ತಟ್ಟೆಗಳನ್ನು ಚಿತ್ತಾರವಾಗಿ ಜೋಡಿಸುತ್ತಾ ಗಂಭೀರವಾದ ಧ್ವನಿಯಲ್ಲಿ "ಅನ್ನಂ ನ ನಿಂದ್ಯಾತ್!" ಎಂದನು. ರಾವಣಭಾತಿನಲ್ಲಿ ಮಗ್ನನಾಗಿದ್ದ ಭೀಮಣ್ಣನು ಈಗಲೇ ಬಾಯಿಬಿಟ್ಟದ್ದು. ಒಡನೆ ಉದುರಿತು ಆಣಿಮುತ್ತಿನಂಥಾ ವಾಕ್ಯ :

"ವೇದದಲ್ಲಿ ಹೇಳಿದೆ -- ಅನ್ನವನ್ನು ದೂಷಿಸಬಾರದು ಎಂದು. ಅನ್ನದ ಮಹತ್ವ ಯಾವುದಕ್ಕೂ ಇಲ್ಲ, ಶ್ರೀ ಕೃಷ್ಣನು ಕೂಡ ಗೀತೆಯಲ್ಲಿ ಅನ್ನಾದ್ಭವಂತಿ ಭೂತಾನಿ ಎಂದು ಹೇಳಿದ್ದಾನೆ"... ನಾವುಗಳೆಲ್ಲಾ ನಮ್ಮ ನಮ್ಮ ಜಾಗಗಳಲ್ಲಿ ಸರಿ ಮಾಡಿಕೊಂಡು ಕೂತೆವು. "ನನ್ನ ಸೋದರಳಿಯ ರಂಗಪ್ಪನಂತೂ ಈ ವಿಚಾರದಲ್ಲಿ ಬಹಳ ಖಂಡಿತ-- ಒಂದು ಅಗುಳು ಅನ್ನ ಚೆಲ್ಲುವುದನ್ನೂ ಸಹಿಸುವುದಿಲ್ಲ ಅದರಿಂದಲೇ ಅವನು ತನ್ನ ಒಲವಿನ ಲಲಿತೆಯನ್ನು ಮದುವೆಯಾದದ್ದು ಮತ್ತು 'ವೀರ ಬಹದ್ದೂರ್' ಎಂಬ ಬಿರುದು ಗಳಿಸಿದ್ದು..."

ಗೋವಿಂದಸಾಮಿಯು "ಆದರೆ ಆರು ತಟ್ಟೆ ರಾವಣಭಾತನ್ನು ತಿನ್ನು ..."

"ನಮ್ಮ ರಂಗಪ್ಪನು ತಂದೆ ತಾಯಿಗಳಿಗೆ ಒಬ್ಬನೇ ಮಗ - (ಗಣಪಾ, ಇನ್ನೊಂದುಲೋಟ ನೀರು!)" ಎಂದು ಮುಂದುವರೆಸಿದನು ಭೀಮಣ್ಣ. "ಲಕ್ಷಾಂತರ ರೂಪಾಯಿ ಆಸ್ತಿ. ದೊಡ್ಡ ಮನೆ, ಮಠ, ಆಳುಕಾಳು ಎಲ್ಲಾ. ಹನ್ನೆರಡನೇ

ವಯಸ್ಸಿನಲ್ಲಿಯೇ ಅಪ್ಪ ಅಮ್ಮ ಇಬ್ಬರೂ ಪರಂಧಾಮ ಸೇರಿದರು. ಆ ಚಿಕ್ಕ ವಯಸ್ಸಿನಿಂದಲೂ ರಂಗಪ್ಪನದೇ ಆಧಿಪತ್ಯ. ವಿಧವೆ ಸೋದರತ್ತೆಯೊಬ್ಬಳು ಮನೆ ಮೇಲ್ವಿಚಾರಣೆಗಾಗಿ ನಿಂತಳು. ಇವನಿಗೆ ಹದಿನಾರು ವಯಸ್ಸಾಯಿತೋ ಇಲ್ಲವೋ, ಒಳ್ಳೇ ತೊಳೆದ ಕೆಂಡದಂತಿದ್ದ ಕುರೂಪಿಯಾದ ತನ್ನ ಮಗಳನ್ನು ಇವನಿಗೆ ಮದುವೆಮಾಡಿ ಅವಳನ್ನು ಇವನ ಆಸ್ತಿಗೆಲ್ಲಾ ಉತ್ತರಾಧಿಕಾರಿಣಿಯನ್ನಾಗಿ ಮಾಡಬೇಕೆಂದು ತಂತ್ರ ಮಾಡಲು ಆರಂಭಿಸಿದಳು. ರಂಗಪ್ಪನು ಏನೇನೋ ಮಾಡಿ ಐದಾರು ವರ್ಷಗಳ ಕಾಲ ತಪ್ಪಿಸಿಕೊಂಡು ತಳ್ಳಿದನು. ಕೊನೆಗೆ ಸಿಕ್ಕಿಬಿದ್ದು ಬಿಡುವ ಪ್ರಸಂಗ ಬಂದದ್ದನ್ನು ನೋಡಿ ಮರುತಂತ್ರವೊಂದನ್ನು ಹೂಡಿದನು. ಅವಳನ್ನು ಕಾಶಿಯಾತ್ರೆಗೆಂದು ಕಳುಹಿಸಿಕೊಟ್ಟು, ಅವಳು ಬರುವುದರೊಳಗಾಗಿ ತಾನು ಬೊಂಬಾಯಿನಿಂದ ಯಾವುದೋ ಪಾರ್ಶಿ ಹುಡುಗಿಯನ್ನು ಕರೆದುಕೊಂಡು ಬಂದು ಮದುವೆ ಮಾಡಿಕೊಂಡಿರುವುದಾಗಿ ಸುದ್ದಿ ಹುಟ್ಟಿಸಿದನು. ಆಕೆಯು ಇದನ್ನು ಕೇಳಿ ಕೋಪದಿಂದ ತಿರುಗಿ ನಿನ್ನ ಮುಖ ನೋಡುವುದಿಲ್ಲವೆಂದು ಬೇರೆ ಹೊರಟುಹೋದಳು. ರಂಗಪ್ಪನು " ದಮ್ಮಯ್ಯ, ಬಿಡುಗಡೆಯಾಯಿತಲ್ಲಾ " ಎಂದು ತನ್ನನ್ನು ತಾನೇ ಬೆನ್ನು ತಟ್ಟಿಕೊಂಡನು.

ಅವನೇನೋ ಗಂಡ ತಪ್ಪಿತಲ್ಲಾ ಎಂದಿದ್ದರೂ ಅವನ ವಿಧಿಯು ಬೆನ್ನಹಿಂದೆ ದೊಣ್ಣೆ ಹಿಡಿದು ಕಾದೇ ಇತ್ತು. ಆ ವಿಧಿಯು ಲಲಿತೆಯ ರೂಪದಲ್ಲಿ ಅವತಾರ ಹೊಂದಿತ್ತು! ಲಲಿತೆಯು ಆಧುನಿಕ ಯುವತಿ. ಬಿ. ಎ. ಪ್ಯಾಸು ಮಾಡಿದ್ದಳು. ಜಾರ್ಜೆಟ್ ಸೀರೆ, ಓರೆ ಬೈತಲೆ, ಎತ್ತರವಾದ ಹಿಮ್ಮಡಿಯ ಜೋಡುಗಳು, ಕೈಗಡಿಯಾರ, ಮುಖಕ್ಕೆ ಪೌಡರ್, ಕೈಯಲ್ಲಿ " ವ್ಯಾನಿಟಿ ಬ್ಯಾಗ್ " ಎಲ್ಲಾ ಸಾಂಗೋಪಾಂಗ....

ರಂಗಪ್ಪನು ಲಲಿತೆಯನ್ನು ಮೊದಲು ಕಂಡದ್ದು ಸಿನಿಮಾದಲ್ಲಿ, ತನ್ನ ಅಣ್ಣತಮ್ಮಂದಿರೊಡನೆ ಹಿಂದಿನ ಸಾಲಿನ ಕುರ್ಚಿಯಲ್ಲಿ ಕುಳಿತಿದ್ದಳು. ರಂಗಪ್ಪನು ಮುಂದಿನ ಸಾಲಿನ ಕುರ್ಚಿಯಲ್ಲಿ. ಹಿಂದಿನಸಾಲು ಮುಂದಿನ ಸಾಲಿಗಿಂತ ಎತ್ತರದ ಮಟ್ಟ. ಸಾಧಾರಣವಾಗಿ ಹಿಂದಿನ ಸಾಲಿನವರ ಕಾಲುಗಳು ಮುಂದಿನ ಸಾಲಿನ ಕುರ್ಚಿಗಳ ಬೆನ್ನಿನಮೇಲೆ ತಾನೆ! ಲಲಿತೆಯೂ ಆಧುನಿಕ ರೀತಿಯನ್ನನುಸರಿಸಿ ತನ್ನ ಕಾಲನ್ನು ಮುಂದಿದ್ದ ರಂಗಪ್ಪನ ಕುರ್ಚಿಯ ಮೇಲಿಟ್ಟಿದ್ದಳು. ಸಿನಿಮಾದ ಕಥೆಯು ಸ್ವಾರಸ್ಯವಾದಾಗಲೆಲ್ಲ ಲಲಿತೆಯ ಕಾಲಿನ ತುದಿಯು ರಂಗಪ್ಪನ ಬೆನ್ನಿನಲ್ಲಿಯೋ, ಕುತ್ತಿಗೆಯಲ್ಲಿಯೋ ತಿವಿಯುವುದು. ರಂಗಪ್ಪನು ಹಿಂತಿರುಗಿ ನೋಡುವನು. ಅವಳು " ಐಯಾಮ್ ಸಾರಿ (I am sorry)-- ಕ್ಷಮಿಸಬೇಕು " ಎಂದು ಕಾಲು ಹಿಂದಕ್ಕೆಳೆದುಕೊಳ್ಳುವಳು. ರಂಗಪ್ಪನು " ಪ್ಲೀಸ್ ಡೋಂಟ್ ಮೈಂಡ್ (Please don't mind) ಏನೂ ಪರವಾಗಿಲ್ಲ" ಎನ್ನುವನು. ಕಥೆ ಮತ್ತೆ ಸ್ವಾರಸ್ಯವಾದಾಗ ರಂಗಪ್ಪನಿಗೆ ಮತ್ತೆ ತಿವಿತ, ಲಲಿತೆಯು ಮತ್ತೆ " ಅಯಾಮ್ ಸಾರಿ ",

ಅವನು ಮತ್ತೆ "ಪ್ಲೀಸ್ ಡೋಂಟ್ ಮೈಂಡ್"! ಹೀಗೆ ಹಲವಾರು ಸಲ ನಡೆಯಿತು. ರಂಗಪ್ಪನು ನನಗೆ ಇದನ್ನು ಆಮೇಲೆ ಹೇಳಿದಾಗ "ಮಾವ, ಯಾವ ಕಾವ್ಯದಲ್ಲಿ ತಾನೆ ನಾಯಕನಾಯಕಿಯರ ಪ್ರಥಮಸಮಾಗಮದ ಸನ್ನಿವೇಶವು ಇಷ್ಟು ಸ್ವಾರಸ್ಯವಾಗಿದೆ!" ಎಂದನು, "ಎಲ್ಲಿಯೂ ಇಲ್ಲಪ್ಪ. ಮದುವೆಯಾದಮೇಲಿರಲಿ, ಮದುವೆಗೆ ಮುಂಚೆಯೇ ನಾಯಕಿಯ ಪಾದಸ್ಪರ್ಶ - ಅಲ್ಲ, ಪಾದರಕ್ಷೆಯ ತುದಿಯ ಸ್ಪರ್ಶ! ಯಾರಿಗಾಗಿತ್ತು? ಅಮೋಘವಾಗಿದೆ!" ಎಂದೆ. "ನೀನು ಶೃಂಗಾರವನ್ನರಿಯದ ಗೊಡ್ಡು" ಎಂದು ಬಿಟ್ಟನು. ಅದು ಹಾಗಿರಲಿ....

ಸಿನಿಮಾ ಮುಗಿಯುವವೇಳೆಗೆ ದೊಡ್ಡಮಳೆ. ಲಲಿತೆಯ ಮನೆಯವರ ಗುಂಪೆಲ್ಲ ಬಾಗಿಲ ಬಳಿ ನಿಂತಿದ್ದರು. ಲಲಿತೆಯ ಅಣ್ಣನು "ಮಳೆ ನಿಲ್ಲುವವರೆಗೂ ಕಾಯಬೇಕು. ಗಾಡಿಯಾವುದೂ ಸಿಕ್ಕುವಹಾಗಿಲ್ಲ" ಎಂದನು. ಲಲಿತೆಯು "ನನಗೇನೋ ಛತ್ರಿಯಿದೆ" ಎಂದು ತನ್ನ ಕೈಲಿದ್ದ ಬಣ್ಣದ ಛತ್ರಿಯನ್ನು ಎತ್ತಿ ತಿರುಗಿಸಿದಳು. ಅಷ್ಟುಹೊತ್ತಿಗೆ ಸರಿಯಾಗಿ ಹಿಂದೆ ಪ್ರಾಪ್ತನಾಗಿದ್ದ--ರಂಗಪ್ಪ! ಛತ್ರಿಯ ತುದಿಯು ಮೂಗಿಗೆ ತಿವಿಯಿತು. ಲಲಿತೆಯು ಹಿಂತಿರುಗಿ ನೋಡಿ "ಓ, ಐಯಾಮ್ ಸಾರಿ...."

ರಂಗಪ್ಪನು "ಪ್ಲೀಸ್ ಡೋಂಟ್ ಮೈಂಡ್!"

ಲಲಿತೆಯ ಅಣ್ಣನು "ಪೆಟ್ಟಾಯಿತೆ! ರಕ್ತಸುರಿಯುತ್ತಿದೆಯಲ್ಲ -- ನೀರು ತರಲೆ?" ಎಂದನು.

ರಂಗಪ್ಪನು ಮೂಗನ್ನು ಅಮುಕಿಕೊಳ್ಳುತ್ತಾ ಏನೂ ಪರವಾಯಿಲ್ಲಾಂದ್ರೆ, ಏನಾಗಿಲ್ಲ" ಎಂದನು.

ಲಲಿತೆಯು "ಈ ಮಳೆನೀರನ್ನೇ ಸ್ವಲ್ಪ ಉಪಯೋಗಿಸಿ, ತಣ್ಣಗಿದೆ" ಎಂದಳು. ರಂಗಪ್ಪನು "ಏನೂ ಬೇಡೀಂದ್ರೆ. ಈಗ ನಿಂತು ಹೋಗುತ್ತೇ" ಎನ್ನುತ್ತಾ ಧಾರಾಕಾರವಾಗಿ ಹರಿಯುತ್ತಿದ್ದ ರಕ್ತವನ್ನು ಬೇರೆ ಬೇರೆ ಜೇಬುಗಳಿಂದ ಕರವಸ್ತ್ರಗಳನ್ನು ಒಂದಾದಮೇಲೊಂದು ತೆಗೆದು ಒತ್ತಿಕೊಳ್ಳಲಾರಂಭಿಸಿದನು.

ಇಷ್ಟರಲ್ಲಿ ಲಲಿತೆಯ ತಂಗಿಯು "ಅಣ್ಣ, ಮನೆಗೆ ಕರೆದುಕೊಂಡು ಹೋಗು ಹಸಿವಾಗುತ್ತೆ" ಎಂದು ಪೀಡಿಸತೊಡಗಿದಳು. ರಂಗಪ್ಪನು "ನನ್ನಲ್ಲಿ ಮೋಟಾರಿದೆ ಕರೆದುಕೊಂಡು ಹೋಗಿ ನಿಮ್ಮ ಮನೆಯಲ್ಲಿ ಬಿಟ್ಟು ಬರುತ್ತೇನೆ" ಎಂದನು.

ಲಲಿತೆಯು "ನಿಮಗೆ ಕಷ್ಟವಾಗುತ್ತದೇನೋ!"

"ಇಲ್ಲ, ಏನೂ ಕಷ್ಟವಿಲ್ಲ. ನಿಮ್ಮ ಮನೆ ಎಲ್ಲಿ?"

"ಕೊಂಕಣಪೇಟೆಯಲ್ಲಿ. ನಿಮ್ಮ ಮನೆಯೆಲ್ಲಿ?"

" ಮೈಲಾರಸೇಟೆಯಲ್ಲಿ "

" ಹಾಗಾದರೆ ನಿಮ್ಮದೊಂದು ದಿಕ್ಕು, ನಮ್ಮದೊಂದು ದಿಕ್ಕು ಆಯಿತಲ್ಲಾ ! "

" ಇಲ್ಲ, ಇಲ್ಲ. ನಾನು ಯಾವಾಗಲೂ ಹಾಗೆ ಸುತ್ತಿಕೊಂಡೇ ಮನೆಗೆ ಹೋಗುವುದು."

" ಹಾಗಾದರೆ ಸರಿ."

ರಂಗಪ್ಪನು ಎಲ್ಲರನ್ನೂ ಮೋಟಾರಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟನು. ಲಲಿತೆಯ ತಂದೆತಾಯಿಗಳ ಪರಿಚಯವೂ ಆಯಿತು. ಅವರು " ತುಂಬಾ ಉಪಕಾರವಾಯಿತು, ಈಗ ಕಾಫೀಗೆ ಕೂಡ ವೇಳೆಯಾಗಿ ಹೋಗಿದೆ—ಮತ್ತೆ ಹೀಗೆ ಬಂದಾಗ ಯಾವಾಗಲಾದರೂ ದಯಮಾಡಿಸಬೇಕು " ಎಂದರು. ರಂಗಪ್ಪನು " ಅಗಲಿ " ಎಂದು ಮೈಲಾರಪೇಟಗೆ ಹಿಂತಿರುಗಿದನು. ದಾರಿಯಲ್ಲಿ ಪೆಟ್ರೋಲ್ ಸಾಲದೆ ಮೋಟಾರು ನಿಂತುಹೋಗಿ ಮಳೆಯಲ್ಲಿ ಸ್ವಲ್ಪದೂರ ತಳ್ಳಿಕೊಂಡು ಹೋಗಬೇಕಾಯಿತು. ತಳ್ಳುವ ಭರದಲ್ಲಿ ಮೂಗಿನಿಂದ ಮತ್ತೆ ರಕ್ತ ಸುರಿಯಿತು. ರಕ್ತ, ಕೆಸರು ಎರಡೂ ಸೇರಿ ಹಾಕಿದ್ದ ಬಟ್ಟೆಗಳೆಲ್ಲಾ ಹಾಳಾಗಿ ಹೋದವು. ಆದರೂ ಇವೆಲ್ಲಾ ಸಾರ್ಥಕವೆಂದೇ ಭಾವಿಸಿದನು....

ಮಾರನೆಯ ದಿನ ಕೊಂಕಣಪೇಟೆಯಲ್ಲಿ ಕೆಲಸ ಹಾಕಿಕೊಂಡು ಟೀ ಹೊತ್ತಿಗೆ ಲಲಿತೆಯ ಮನೆಯಲ್ಲಿ ರಂಗಪ್ಪನು ಸಿದ್ಧ! ನಿನ್ನೆ ನಿಮಗೇನೂ ತೊಂದರೆಯಾಗಲಿಲ್ಲವೇ ಎಂದು ಕೇಳಿಕೊಂಡು ಹೋಗೋಣ ಎಂದು ಬಂದೆ" ಎಂದು ಪೀಠಿಕೆ. ಸರಿ, ಟೀ, ಉಪಹಾರ ಮುಂತಾದುವುಗಳಿಂದ " ಪಾರ್ಕಿ " ಗೆ " ಡ್ರೈವು " ,--ಮಾರನೇ ದಿನ ಮತ್ತೆ ಸಿನೀಮಾ, ಮತ್ತೊಂದು ದಿವಸ ಒಂದು ಊಟ ಇತ್ಯಾದಿ ಹಂತಗಳಿಂದ ಕುಲ ಗೋತ್ರಗಳ ವಿಚಾರಣೆ! ಹದಿನೈದು ದಿವಸಗಳೊಳಗಾಗಿ ಲಲಿತೆಯನ್ನು ರಂಗಪ್ಪನಿಗೆ ಕೊಟ್ಟು ವಿವಾಹವೆಂದು ನಿಷ್ಕರ್ಷೆಯಾಗಿಯೇ ಹೋಯಿತು! ಲಲಿತೆಯ ತಂದೆ ನಿವೃತ್ತ ಪೋಲೀಸ್ ಅಧಿಕಾರಿ. ಇಲಾಖೆಯ " ಅದಬ್ ", ಜಬರ್ದಸ್ತಿ ಎಲ್ಲಾ ತುಂಬಿತ್ತು. ಎತ್ತರವಾದ ಆಳು, ಅಜಾನುಬಾಹು, ಒಳ್ಳೆ ಗಿರಲುಮೀಸೆ, ನೋಡುವುದಕ್ಕೇನೊ ಶಾಂತಮೂರ್ತಿಯೇ. ಮಿಸುಕಿದರೆ ಮಾತ್ರ ಮೂಗಿನಮೇಲೆಯೇ ಕೋಪ! ಲಲಿತೆಯ ತಾಯಿಯು " ಹುಡುಗಿಯು ಒಪ್ಪಿದ್ದಾಳೋ ಇಲ್ಲವೋ ಕೇಳಬೇಡವೆ?" ಎಂದಳು. ಆತನು ಸೂರಿನವರೆಗೂ ಹಾರಿ ಕೆಳಕ್ಕೆ ಧುಮುಕಿ ಅವಳದೇನಿದೆ? ಬಿ. ಎ. ಪ್ಯಾಸು ಮಾಡಿದ ಮಾತ್ರಕ್ಕೆ ಅದರಲ್ಲಿ ಅವಳಿಗೇನು ಸ್ವಾತಂತ್ರ್ಯ ? " ಎಂದು ಘರ್ಜಿಸಿದನು. ಈ ಘರ್ಜನೆಗೆ ಪ್ರಮೇಯವೂ ಇರಲಿಲ್ಲ, ಲಲಿತೆಯ ತಾಯಿಯ ಸಂದೇಹಕ್ಕೆ ಕಾರಣವೂ ಇರಲಿಲ್ಲ. ರಂಗಪ್ಪನ ಆಸ್ತಿಪಾಸ್ತಿಗಳ ವಿಚಾರವನ್ನೆಲ್ಲಾ ತಿಳಿದಿಟ್ಟುಕೊಂಡಿದ್ದ ಲಲಿತೆಗೆ ಈ ಸಂಬಂಧಕ್ಕೆ ಅಸಮ್ಮತಿಯೇನೂ ಇರಲೇ ಇಲ್ಲ....

ಆದರೆ ಒಂದನ್ನು ಮಾತ್ರ ಎಲ್ಲರೂ ಮರೆತರು—ಪೈಲ್ವಾನ್ ಭುಜಂಗನ ವಿಚಾರ! ಭುಜಂಗರಾಯನು ಲಲಿತೆಯ ತಾಯಿಗೆ ದೂರದ ಸಂಬಂಧ. ಮಲೆನಾಡಿನಕಡೆ

ಬೇಕಾದಷ್ಟು ಆಸ್ತಿ. ಚಿಕ್ಕಂದಿನಿಂದಲೂ ಲಲಿತೆಯನ್ನು ಅವನಿಗೇ ಕೊಟ್ಟು ಮದುವೆ ಮಾಡಬೇಕೆಂದು ಮಾತು ನಡೆದಿತ್ತು. ಭುಜಂಗರಾಯನಿಗೆ ಓದು ಕಡಿಮೆ. ಆದರೆ ಕುಸ್ತಿಯಲ್ಲಿ ಪರಿಶ್ರಮ ಹೆಚ್ಚು. ನೋಡುವುದಕ್ಕೆ ಕರ್ರಗೆ ಭೀಮನಂತಿದ್ದನು. ಪೈಲ್ವಾನ್ ವಸ್ತಾದನನ್ನು ಎರಡೇ ನಿಮಿಷದಲ್ಲಿ ಸುಸ್ತು ಹೊಡೆಸಿದ್ದನು. ಅಲ್ಲದೆ ಒಳ್ಳೆ ಷಿಕಾರಿ. ಕಾಡುಗಳಲ್ಲಿ ಒಬ್ಬೊಬ್ಬನೇ ನಿರ್ಭಯವಾಗಿ ತಿರುಗುವನು. ಅವನನ್ನು ಕಂಡರೆ ಕಾಡಿನ ದುಷ್ಟ ಮೃಗಗಳುಕೂಡ ಪೊದೆಗಳಲ್ಲಿ ಅವಿತುಕೊಂಡು ಕಣ್ಣುಮುಚ್ಚಿ ಯೋಗಾಭ್ಯಾಸದಲ್ಲಿ ನಿರತರಾಗುತ್ತಿದ್ದವಂತೆ !

ಅವನಿಗೇನೋ ಲಲಿತೆಯನ್ನೇ ಮದುವೆಯಾಗಬೇಕೆಂದು. ಆದರೆ ಲಲಿತೆಯು "ಮಟ್ಟಿಯನ್ನು ಮೈಗೆ ಹಚ್ಚಿಕೊಂಡು ಹಳದಿಸೇವಂತಿಗೆಯ ದಂಡೆಹಾರ ಹಾಕಿಕೊಂಡು ಯಾರ್‍ಯಾರ ಭುಜಗಳ ಮೇಲೋ ಸವಾರಿಮಾಡುತ್ತಾ ಮೆರವಣಿಗೆ ಮಾಡಿಸಿಕೊಳ್ಳುವ ಆ ಮಾರೀಚನನ್ನು ನಾನು ಒಲ್ಲೆ" ಎಂದು ಬಿಟ್ಟಿದ್ದಳು.

ರಂಗಪ್ಪನಿಗೆ ಲಗ್ನ ನಿಷ್ಕರ್ಷೆಯಾಗಿ ಲಗ್ನಪತ್ರಿಕೆ ಶಾಸ್ತ್ರವೂ ಆಯಿತು. ಆದಿವಸ ಎಲ್ಲಾ ಮುಗಿಸಿಕೊಂಡು ರಂಗಪ್ಪನು ಇನ್ನೇನು ಹೊರಡಬೇಕು—ಅಷ್ಟು ಹೊತ್ತಿಗೆ ಇದ್ದಕ್ಕಿದ್ದಹಾಗೇ ಪ್ರಾಪ್ತನಾದ—ಪೈಲ್ವಾನ್ ಭುಜಂಗ. ಅವನನ್ನು ನೋಡಿ ಎಲ್ಲರೂ ಹೇಗೆಂದರೆ ಹಾಗೆಯೇ ಪರಾರಿ! ಲಲಿತೆಯ ತಾಯಿಯು ಅಡಿಗೆಮನೆಯಲ್ಲಿಯೇ ಅವಿತುಕೊಂಡಳು. ನಿವೃತ್ತ ಪೋಲಿಸ್ ಅಧಿಕಾರಿಯು ಹಿಂಬಾಗಿಲಕಡೆ ಓಟ. ಉಳಿದವರು ಚೆಲ್ಲಾ ಪಿಲ್ಲಿ! ಲಲಿತೆಯ ಅಣ್ಣನೊಬ್ಬನು ಮಾತ್ರ ಸಿಕ್ಕಿಹಾಕಿಕೊಂಡನು.

ಭುಜಂಗನು "ಏನಿದು ವಿಚಾರ ? ಎಂದನು

ಲಲಿತೆಯ ಅಣ್ಣನು ತೊದಲುತ್ತಾ "ನ ...ನ .. ನಮ್ಮ ಲಾ ...ಲ್ ..ಲಲಿತಗೆ ಲ... ಲ....ಲಗ್ನ" ಎಂದ

"ಲಲಿತಗೆ ಲಗ್ನವೇ ? ಯಾರಿಗೆ ಕೊಟ್ಟು ?"

"ಇವರಿಗೆ" ಎಂದು ರಂಗಪ್ಪನನ್ನು ತೋರಿಸಿದನು.

ರಂಗಪ್ಪನು "ನಮಸ್ಕಾರ" ಎಂದನು.

ಭುಜಂಗನು "ಏನು ಈ ಕ್ರಿಮಿಗೆ, ಈ ಕೀಟಕ್ಕೆ ಕೊಟ್ಟೆ ? ಸಾಧ್ಯವಿಲ್ಲ !" ಎನ್ನುತ್ತಾ ರಂಗಪ್ಪನನ್ನು ಬೆಕ್ಕಿನ ಮರಿಯನ್ನು ಎತ್ತುವಂತೆ ಕುತ್ತಿಗೆ ಹಿಡಿದು ಎತ್ತಿ, ಬಾಗಿಲವರೆಗೂ ತಿಗೆದುಕೊಂಡು ಹೋಗಿ ಅವನ ಮೋಟಾರಿನ ಬಳಿ ಎಸೆದು, ಕೈ ಕೊಡವಿ, ಬಾಗಿಲು ಹಾಕಿಕೊಂಡನು !

ರಂಗಪ್ಪನು ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡೆದ್ದನು. ವೀರರಸವು ಉಕ್ಕಿಬಂತು. "ಅವನನ್ನು ಈಗಲೇ ಕೊಂದು ಬಿಡಲೆ ?" ಎಂದುಕೊಂಡನು. ಆದರೆ ಕುತ್ತಿಗೆ ಉಳುಕಿ ಮೈಯೆಲ್ಲಾ ಜಜ್ಜಿಹೋಗಿತ್ತು. ಸ್ವಲ್ಪ ಸುಧಾರಿಸಿಕೊಂಡು

ಮಾರನೆಯ ದಿನ ಕೊಲ್ಲುವುದೇ ಉತ್ತಮವೆಂದು ತೋರಿತು. ಮೆಲ್ಲಗೆ ತೆವಳಿ ಕೊಂಡು ಹೋಗಿ ಮೋಟಾರಿನಲ್ಲಿ ಕುಳಿತು ಮನೆ ಸೇರಿದನು.

ಒಳ್ಳೆ ಬೆಳದಿಂಗಳು. ಬಟ್ಟೆ ಬದಲಾಯಿಸಿ ಬಿಸಿಲು ಮಚ್ಚಿನಲ್ಲಿ ಕುಳಿತು ಜಜ್ಜಿ ಹೋದ ಭಾಗಗಳಿಗೆಲ್ಲ ತೈಲ ತಿಕ್ಕಿಕೊಳ್ಳುತ್ತಿದ್ದನು. ಸೇವಕರು ಬಂದು " ಯಾರೋ ಬಂದಿದ್ದಾರೆಂದನು ". ಯಾರೋ ಸ್ನೇಹಿತರಿರಬೇಕೆಂದು ಅಲ್ಲಿಗೇ ಬರಹೇಳಿದನು. ಸೇವಕರು ಹೋದ ಎರಡು ನಿಮಿಷದೊಳಗಾಗಿ ಮಹಡಿಯೆಲ್ಲಾ ಅದುರತೊಡಗಿತು. ಏನಿರಬಹುದೆಂದು ಯೋಚಿಸುವುದರೊಳಗಾಗಿ ರಂಗಪ್ಪನ ಮುಂದೆ ಬಂದು ನಿಂತನು —ಯಮರೂಪಿಯಾದ ಭುಜಂಗರಾಯ!

ರಂಗಪ್ಪನು " ಬ ...ಬ ...ಬನ್ನಿ, ಕುಳಿತುಕೊಳ್ಳಿ " ಎಂದನು-

" ಕುಳಿತು ಸರಸವಾಡುವುದಕ್ಕೆ ಬಂದಿಲ್ಲ. ನೀನು ಲಲಿತೆಯನ್ನು ಮದುವೆ ಯಾಗುವುದು ನಿಶ್ಚಯವೊ ? "

" ಹೌದು "

" ಆ ಯೋಚನೆಯನ್ನು ಬಿಟ್ಟುಬಿಡುವುದು ಮೇಲು. ಇಲ್ಲದಿದ್ದರೆ ನಿನ್ನನ್ನು ಹೀಗೇ ಹಾಕಿ ತೀಡಿಬಿಡುತ್ತೇನೆ " ಎಂದು ಉಂಗುಷ್ಟದಿಂದ ಸಿಮೆಂಟ್ ನೆಲವನ್ನು ತೀಡಿದನು. ಬಿಸಿಲು ಮಚ್ಚಿನ ನೆಲದ ಒಂದು ದೊಡ್ಡ ಹೆಪ್ಪು ಚಿಮ್ಮಿಬಂದು ರಂಗಪ್ಪನ ಎದೆಗೆ ಹೊಡೆಯಿತು. ರಂಗಪ್ಪನಿಗೆ ಮೈಯೆಲ್ಲ ನಡುಕಬಂತು.

ಭುಜಂಗನು " ಲಲಿತೆಯನ್ನು ಅಷ್ಟುದಿವಸಗಳಿಂದ ನಾನೇ ಮದುವೆ ಮಾಡಿ ಕೊಳ್ಳಬೇಕೆಂದಿದ್ದೇನೆ. ಅವಳನ್ನು ಇಷ್ಟು ಎತ್ತರದವಳಿಂದಲೂ ಬಲ್ಲೆ " ಎಂದು ಕೈ ತೋರಿಸಿದನು.

" ಎ. ..ಎ.... ಎಷ್ಟು ಎತ್ತರದವಳಿಂದ ? "

" ಇಷ್ಟು ಎತ್ತರದವಳಿಂದ " ಮತ್ತೆ ಕೈ ತೋರಿಸಿದನು. ಅದನ್ನು ನೋಡಿ ಲಲಿತೆಯು ಏಳೇ ತಿಂಗಳಿಗೆ ಹುಟ್ಟಿರಬೇಕೆಂದು ರಂಗಪ್ಪನಿಗೆ ಭಾಸವಾಯಿತು.

" ಓ ! " ಎಂದನು.

" ಪೈಲ್ವಾನ್ ಹಯಾತನನ್ನು ಬಲ್ಲೆಯಾ ? "

" ಇಲ್ಲ, ಯಾರವನು ? "

" ಅವನು ಈಗ ಇಲ್ಲ. ಅವನನ್ನು ನಾನು ಎತ್ತಿ ಅಪ್ಪಳಿಸಿದಾಗ ಆದ ಅವನ ಚೂರುಗಳನ್ನು ಇನ್ನೂ ಹುಡುಕುತ್ತಿದ್ದಾರೆ, ಅವನ ಕಡೆಯವರು........"

" ಓ....? "

" ಕಾಕನಕೋಟೆ ಕಾಡಿನಲ್ಲಿ ನನ್ನ ಮೇಲೆ ಬೀಳಲು ಬಂದ ಹುಲಿಯನ್ನೇನು ಮಾಡಿದೆ ಗೊತ್ತೆ ? "

" ಏನು ಮಾಡಿದಿರಿ ? "

" ಬಲಗೈ ಪೆಟ್ಟಾಗಿತ್ತು. ಎಡಗೈಯಿಂದಲೇ ಕುತ್ತಿಗೆ ಹಿಡಿದು ಅಮುಕಿ ತಲೆಯನ್ನು ನೆಲಕ್ಕೆ ಜಜ್ಜಿ, ಕೆಳಗೆ ಹಾಕಿ ತುಳಿದು ಅಪ್ಪಚ್ಚಿ ಮಾಡಿದೆ. ಅದರ ಚರ್ಮ ಈಗಲೂ ಇದೆ."

"ಓ.... ! "

" ನದಿಯಲ್ಲಿ ನೀರು ಕುಡಿಯಲು ಇಳಿದಾಗ ಬಂದು ಕಾಲು ಹಿಡಿದುಕೊಂಡ ಮೊಸಳೆಗೇನಾಯಿತು ಗೊತ್ತೆ ? "

" ಇಲ್ಲ. . ".

" ಬಾಯಲ್ಲಿ ಕೈ ಹಾಕಿ ಅದನ್ನು ದವಡೆಯಿಂದ ಬಾಲದವರೆಗೂ ಎರಡಾಗಿ ಸೀಳಿದೆ. ಆ ಮೇಲೆ ತೂಕ ಮಾಡಲು, ಎರಡು ಭಾಗಗಳೂ ಸಮನಾಗಿದ್ದುವು.... ಆಗಲೂ ದಿವ್ಯವಾದ (ಮೇಲೆ ನೋಡುತ್ತಾ) ಇಂತಹ ಬೆಳದಿಂಗಳೇ ಇತ್ತು.".

" ಓ.... ! "

" ನಾಳೆ ಬೆಳಿಗ್ಗೆಯೇ ಲಲಿತೆಯ ತಂದೆಗೆ ಬರೆದುಬಿಡು, ಈ ಮದುವೆ ಸಾಧ್ಯವಿಲ್ಲವೆಂದು. ಇಲ್ಲದಿದ್ದರೆ........" ಕಾಲನ್ನು ನೆಲದಮೇಲೆ ಮತ್ತೆ ಅರೆದನು. ರಂಗಪ್ಪನಿಗೆ ಮೈ ಜುಮ್ಮೆಂದು ಕರುಳುಗಳೆಲ್ಲಾ ಹೊರಗೆ ಬರುವಹಾಗಾಯಿತು....

ಫೈಲ್ವಾನ್ ಭುಜಂಗನು ಹೊರಟು ಹೋದ ಸ್ವಲ್ಪ ಹೊತ್ತಿನವರೆಗೂ ರಂಗಪ್ಪನಿಗೆ ದಿಕ್ಕೇ ತೋರಲಿಲ್ಲ. ಒಂದುಕಡೆ ಲಲಿತೆಯ ಮೇಲಿನ ಅನುರಾಗ, ಮತ್ತೊಂದುಕಡೆ--ಫೈಲ್ವಾನ್ ಭುಜಂಗ ! ಇವನಿಗೆ ಹೆದರಿ ಲಲಿತೆಯನ್ನು ಬಿಟ್ಟು ಬಿಡುವುದೆ ? ಅದೂ ಲಗ್ನಪತ್ರಿಕೆ ಶಾಸ್ತ್ರವಾದಮೇಲೆ ? ಜನಗಳು ಏನಂದಾರು ? ಆದರೆ ತನ್ನ ಕುತ್ತಿಗೆಯೇ ಅಪಾಯದಲ್ಲಿರುವಾಗ ಯಾರೇನಂದುಕೊಂಡರೇನು ? " ಜೀವನ್ ಭದ್ರಾಣಿ ಪಶ್ಯತಿ " ರಂಗಪ್ಪನಾದರೊ ನೋಡುವುದಕ್ಕೆ ನರಪೇತಲ ನಾರಾಯಣ. ಅವನಿಗೆ ಇದ್ದ ಪಾಂಡಿತ್ಯವೆಲ್ಲಾ ಪಿಳ್ಳಂಗೋವಿಯ ಮೇಲೆ ಸಿನೀಮಾ ಹಾಡುಗಳನ್ನು ನುಡಿಸುವುದು. ನಿಜ. ಮೂಗಿನ ತುದಿಯಲ್ಲಿ ಕಡ್ಡಿ ನಿಲ್ಲಿಸಿ ಅದರ ಮೇಲೆ ನೆಲ್ಲೀಕಾಯಿಟ್ಟು ಕುಣಿಸಬಲ್ಲನು. ಆದರೆ, ಇವುಗಳಿಂದ ಫೈಲ್ವಾನ್ ಭುಜಂಗನನ್ನು ಎದುರಿಸಲು ಆದೀತೇ !.... ಕೊನೆಗೆ " ಕಷ್ಟಕಾಲೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತ " ಎಂಬುದನ್ನು ನೆನೆಸಿ ಈಗ ಒದಗಿರುವ ಕಷ್ಟಕಾಲದಲ್ಲಿ ಭಾವೀ ಅರ್ಧಾಂಗಿಯನ್ನು ತ್ಯಜಿಸುವುದೇ ಸೂಕ್ತವೆಂದು ನಿರ್ಧರಿಸಿದನು. ಒಡನೇ ಲಲಿತೆಯ ತಂದೆಗೆ, ತಾನು ಕೂಡಲೇ-ದೇಶಾಂತರ ಹೋಗಬೇಕಾಗಿರುವುದರಿಂದ ಮದುವೆಯು ಈಗ ಸಾಧ್ಯವಿಲ್ಲವೆಂದೂ, ಯಾವಾಗ ಹಿಂತಿರುಗುವೆನೋ ಗೊತ್ತಿಲ್ಲವೆಂದೂ, ಲಲಿತೆಗೆ ಬೇರೆ ವರನನ್ನು ನೋಡಬಹುದೆಂದೂ, ದೇವರು ಅವಳಿಗೆ ಒಳ್ಳೆಯದು ಮಾಡಲೆಂದೂ ಬರೆದು, ಕಾಗದವನ್ನು ಬೆಳಿಗ್ಗೆ ಆರು ಘಂಟೆ ವೇಳೆಗೇ ತಲಪಿಸಬೇಕೆಂದು ಸೇವಕನಿಗೆ ಆಜ್ಞಾಪಿಸಿ, ನಿಶ್ಚಿಂತನಾಗಿ ಮಲಗಿದನು.

ಬೆಳಿಗ್ಗೆ ಎಂಟು ಘಂಟೆಗೆ ಹಸುಮಕ್ಕಳಂತೆ ನಿದ್ದೆಯಿಂದ ಎದ್ದನು. ಬಿಸಿಲೇರಿತ್ತು. ಪಕ್ಷಿಗಳ ಚಿಲಿಪಿಲಿ. ಹೊರಗೆ ವಾಹನಗಳ ಓಡಾಟದ ಶಬ್ದ. ಅಡಿಗೆ ಮನೆಯಿಂದ ಫಲಾಹಾರಕ್ಕೆ ತಯಾರಾಗುತ್ತಿದ ಮಸಾಲ್ ದೋಸೆಯ ಘಮ ಘಮ ವಾಸನೆ .... ರಂಗಪ್ಪನಿಗೆ ಪ್ರಪಂಚವು ಬಹಳ ಸುಖಕರವಾಗಿ ಕಾಣಿಸಿತು. ಎದ್ದು ಸಿನಿಮಾ ಮಟ್ಟೊಂದನ್ನು ಸಿಳ್ಳುಹಾಕುತ್ತಾ ಮುಖ ತೊಳೆದುಕೊಂಡು ಬಂದು ಮಸಾಲೆ ದೋಸೆಯ ಮುಂದೆ ಕುಳಿತನು. ಒಂದು ಚೂರು ನುಂಗಿದ್ದನೋ ಇಲ್ಲವೋ' ಯಾರೋ ಬಂದಹಾಗಾಯಿತು. ತಲೆಯೆತ್ತಿನೋಡಲು ಲಲಿತೆಯ ತಂದೆ ! ಹಳೆಯ ಪೋಲೀಸ್ ಉಡುಪು, ಮುಖದಲ್ಲಿ ರೌದ್ರಾಕಾರ, ಬಲಗೈಯಲ್ಲಿ ಒಂದು ಚಡಿ ಬೆತ್ತ !,

ರಂಗಪ್ಪನು " ಬನ್ನಿ ಕುಳಿತುಕೊಳ್ಳಿ ... ದೋಸೆ ತಿನ್ನುತ್ತೀರಾ ? "

" ಇಲ್ಲ, ದೋಸೆ ತಿನ್ನುವುದಿಲ್ಲ. ನಾನು ದೋಸೆ ತಿನ್ನುವುದಕ್ಕೆ ಬರಲಿಲ್ಲ. " ಎಂದು ಘರ್ಜಿಸುತ್ತಾ ಎಡಗೈಲಿದ್ದ ಕಾಗದವನ್ನು ರಂಗಪ್ಪನ ಮುಂದೆಸೆದು " ಇದು ನೀವೇ ಬರೆದದ್ದೋ ? "

" ಹೌದು "

" ನಿನ್ನೆ ಲಗ್ನಪತ್ರಿಕೆ ಶಾಸ್ತ್ರ ಮುಗಿಸಿಕೊಂಡು, ಈವತ್ತು ಮದುವೆ ಒಲ್ಲೆನೆಂದು ಹೇಳುತ್ತೀರಾ ? ನನ್ನನ್ನೂ ನಮ್ಮ ಲಲಿತಳನ್ನೂ ಅವಮಾನಕ್ಕೆ ಗುರಿ ಮಾಡುತ್ತೀರಾ ? ಹುಷಾರ್ ! ನಿಮಗೆ ಸೋರೆಕಾಯಿ ಸೀನಪ್ಪನು ಗೊತ್ತೇ ? "

" ಇಲ್ಲ, ಏನವನ ವಿಚಾರ ? "

" ವಿಚಾರವೇ ? ಸೋರೇಕಾಯಿ ಸೀನಪ್ಪನು ನನ್ನಅಣ್ಣನ ಮಗಳನ್ನು ಮದುವೆಯಾಗುತ್ತೇನೆಂದು ಮಾತು ಕೊಟ್ಟು ಆಮೇಲೆ ತಪ್ಪಿಸಿಕೊಳ್ಳಲು ನೋಡಿದ. ಅವನನ್ನು ಕುತ್ತಿಗೆ ಹಿಡಿದು ಮನೆ ಹೊರಗಡೆ ಮೆಟ್ಟಲುಗಳ ಮೇಲೆಳೆದುಕೊಂಡುಬಂದು ನೀರು ಕೇಳುವವರೆಗೂ ಇದೇ ಬೆತ್ತದಿಂದ ಹೊಡೆದೆ !.... .... ಕಾಮಯ್ಯನವರ ಶಾಮಯ್ಯ ಗೊತ್ತೇ ? "

" ಇಲ್ಲ "

" ಗೊತ್ತಿರಬಹುದೆಂದಂದುಕೊಂಡಿದ್ದೆ. ನಿಮ್ಮ ವಯಸ್ಸಿನವನೇ. ನನ್ನ ತಮ್ಮನ ಮಗಳು ಶಾರದೆಯನ್ನು ಮದುವೆಯಾಗುತ್ತೇನೆಂದು ಮಾತು ಕೊಟ್ಟು ಮರೆಮಾಚಲು ಪ್ರಯತ್ನ ಪಟ್ಟ. ಅವನ ಜುಟ್ಟು ಹಿಡಿದು ಪಡಸಾಲೆ ಮೇಲೆ ರಕ್ತ ಕಾರುಪವರೆಗೂ ಹೊಡೆದೆ. ಊರಿನವರೆಲ್ಲ ಸೇರಿದ್ದರು ...ನಿಮ್ಮ ಮನೆಗೆ ಪಡಸಾಲೆಯಿದೆಯೇ, ಮೆಟ್ಟಲಿದೆಯೇ ? ಸರಿಯಾಗಿ ನೋಡಲಿಲ್ಲ.... ".

ರಂಗಪ್ಪನು ಬೆವರು ಒರಸಿಕೊಳ್ಳುತ್ತಾ ಜ್ಞಾಪಿಸಿಕೊಂಡು " ಮೆ .... ಮೆ .... ಮೆಟ್ಟಲು" ಎಂದನು.

"ಹುಷಾರ್! ಲಗ್ನಪತ್ರಿಕೆಯನ್ನು ಅಜ್ಜಿಗೆ ಈವತ್ತೇ ಕಳುಹಿಸುತ್ತೇನೆ. ಏನಾದರೂ ವಿರುಧ್ಧವಾದರೆ — ಮೆಟ್ಟಲುಗಳನ್ನು ಚೆನ್ನಾಗಿ ತೊಳೆಸಿಟ್ಟಿರಿ ಜೋಕೆ!"

ಲಲಿತೆಯ ತಂದೆಯು ಹೊರಟು ಹೋದದ್ದು ಒಳ್ಳೆ ಸುಂಟರಗಾಳಿಯು ಬಂದು ಹೋದಹಾಗಾಯಿತು. ರಂಗಪ್ಪನು ದೋಸೆಯನ್ನು ಅಲ್ಲಿಗೇ ಬಿಟ್ಟು ಕೊಠಡಿಗೆ ಹೋಗಿ ಒದ್ದೆ ಬಟ್ಟೆಯನ್ನು ತಲೆಗೆ ಕಟ್ಟಿ ಯೋಚಿಸಲಾರಂಭಿಸಿದನು. ಎಷ್ಟು ಯೋಚಿಸಿ ದರೂ ಅಷ್ಟೆ. ಒಂದುಕಡೆ ಪೈಲ್ವಾನ್ ಭುಜಂಗ ಮತ್ತೊಂದುಕಡೆ ಲಲಿತೆ ತಂದೆ-ಛಡಿ ಬೆತ್ತದೊಂದಿಗೆ. ಮದುವೆಯಾದರೆ ತಿಗಣೆಯಹಾಗೆ ತುಳಿಸಿ ಕೊಳ್ಳಬೇಕು. ಆಗದಿ ದ್ದರೆ ರಕ್ತ ಕಾರುವವರೆಗೂ ಛಡಿ ಏಟು! ಒಳ್ಳೆ ಗ್ರಹಚಾರ ಬಂದಹಾಗಾಯಿತು ಲಲಿತೆಯ ರೂಪದಲ್ಲಿ! ಯೋಚಿಸಿ, ಯೋಚಿಸಿ, ಕೊನೆಗೆ ವೇಷ ಮರೆಮಾಚಿಕೊಂಡು ಪಲಾಯನವಾಗುವುದೇ ಒಳ್ಳೆಯ ಉಪಾಯವೆಂದು ನಿರ್ಧರಿಸಿದನು.

ಅಷ್ಟು ಹೊತ್ತಿಗೆ ಒಂದು ಘಂಟೆಯಾಗಿತ್ತು. ಪರಿಚಾರಕನು "ಊಟಕ್ಕೆ ಸಿದ್ಧವಾಗಿದೆ" ಎಂದನು. ರಂಗಪ್ಪನು "ಏನಡಿಗೆ?" ಎಂದು ಕೇಳಿದನು. "ಕಡಲೇ ಬೇಳೆ ಹೆಸರು ಬೇಳೆ ಕೋಸುಂಬರಿ, ಬದನೇಕಾಯಿ, ಆಲುಗೆಡ್ಡೆ ಇವುಗಳ ಪಲ್ಯಗಳು ತೊವ್ವೆ, ಬೂದು ಕುಂಬಳಕಾಯಿ ಮಜ್ಜಿಗೆ ಹುಳಿ, ಸಕ್ಕರೆಪೂರಿ, ರಾವಣಭಾತು, ಪಾಯಸ"

"ರಾವಣಭಾತು, ಪಾಯಿಸಗಳೇಕೆ?"

"ಹೆಣ್ಣಿನ ಕಡೆಯವರು ಯಾರಾದರೂ ಊಟಕ್ಕೆ ಬರಬಹುದೆಂದು ಮಾಡಿದೆ"

"ಯಾರೂ ಬರುವುದಿಲ್ಲ, ನೀವೆಲ್ಲಾ ಊಟ ಮಾಡಿ, ನನಗೆ ಮುಚ್ಚಿಟ್ಟುಬಿಡಿ. ನಾನು ಈರಾತ್ರೆ ಯಾವುದೋ ಊರಿಗೆ ಹೋಗಬೇಕಾಗಿದೆ. ಯಾವಾಗ ಬರುತ್ತೇನೋ ಗೊತ್ತಿಲ್ಲ. ನೀವೆಲ್ಲಾ ಈ ಮಧ್ಯಾನ್ಹವೇ ನಿಮ್ಮ ನಿಮ್ಮ ಊರುಗಳಿಗೆ ಹೊರಟುಬಿಡಿ. ಮೂರು ತಿಂಗಳು ರಜಾ ಕೊಟ್ಟಿದ್ದೇನೆ" ಎಂದು ಹೇಳಿ ಪರಿಚಾರಕ, ಸೇವಕರನ್ನೆಲ್ಲಾ ಬೇಗ ಬೇಗ ಊಟಮಾಡಿಸಿ ಅವರವರ ಊರಿಗೆ ಸಾಗಹಾಕಿದನು.

ತಾನು ಮನಸ್ಸಿನ ಕಳವಳದಲ್ಲಿ ಏನೂ ಬೇಕಾಗದೆ ಊಟಮಾಡಲೇ ಇಲ್ಲ. ಕತ್ತಲಾಗುವವರೆಗೂ ಕಾದು ಮಸಕಾದ ಮೇಲೆ ತಮಾಷೆಗೆಂದು ತಂದು ಎಲ್ಲಿಯೋ ಇಟ್ಟಿದ್ದ ಕೃತಕ ಗಡ್ಡ ಮೀಸೆಗಳನ್ನು ಹೊರಕ್ಕೆ ತೆಗೆದು ಅವುಗಳನ್ನು ಅಂಟಿಸಿಕೊಂಡು ಕರೀ ಗಾಜಿನ ಕನ್ನಡಕಗಳನ್ನು ಹಾಕಿಕೊಂಡು ಹೊರಗೆ ಹೊರಟನು. ತನ್ನ ಪೆಟ್ಟಿಗೆ ಗಳ ಮೇಲೆಲ್ಲಾ ತನ್ನ ಹೆಸರಿದ್ದರಿಂದ ಎರಡು ಹೊಸ ಪೆಟ್ಟಿಗೆಗಳನ್ನು ಕೊಳ್ಳುವುದು ಮೇಲೆಂದು ಅಂಗಡಿಗೆ ಹೋದನು. ಅಂಗಡಿಯವನು ಪರಿಚಿತಸ್ಥನಾದರೂ ಇವನ ಗುರುತು ಹಿಡಿಯಲಿಲ್ಲ. ತನ್ನ ವೇಷ ಪರವಾಗಿಲ್ಲ ಎಂದಂದುಕೊಂಡು ಪೆಟ್ಟಿಗೆಗಳನ್ನು ತೆಗೆದುಕೊಂಡು ಹೊರಡುವಷ್ಟರಲ್ಲಿ ಯಾರೋ ಇಬ್ಬರು ಮಾತನಾಡುವುದು ಕೇಳಿಸಿತು. ಗುರುತಿದ್ದ ಧ್ವನಿಗಳು....

" ಏನು ಭುಜಂಗ, ಅಂಗಡಿಗೆ ಬಂದಿದ್ದೀಯೇ ? ಏನು ಬೇಕು ?''

" ಉಕ್ಕಿನ ಮೊಳೆಗಳು ಹಾಕಿರುವ ಜೋಡಿನ ಜೊತೆಯೊಂದನ್ನು ಕೊಂಡುಕೊಳ್ಳೋಣವೆಂದು ಬಂದೆ".

" ಏಕೆ, ಸೈನ್ಯಕ್ಕೇನಾದರೂ ಸೇರುತ್ತೀಯಾ ? ಕೇಳಿದ್ದರೆ, ನನ್ನ ಪೋಲೀಸ್ ಬೂಟ್ಸುಗಳನ್ನೇ ಕೊಡುತ್ತಿದ್ದೆನಲ್ಲಾ ".

" ಸೈನ್ಯಕ್ಕೆ ಸೇರುವುದಕ್ಕಲ್ಲ. ಒಂದುಕಡೆ ಒಂದು ವಿಷ ಸರ್ಪ ಸೇರಿಕೊಂಡಿದೆ. ಅದನ್ನು ಹಾಕಿ ತುಳಿಯಬೇಕು - ಅದಕ್ಕಾಗಿ. .. ನೀವೇಕೆ ಬಂದಿದ್ದೀರಿ ? ''

" ನಾನೂ ಒಂದು ವಿಷ ಸರ್ಪವನ್ನು ರಕ್ತ ಕಾರುವವರೆಗೂ ಹೊಡೆಯಬೇಕಾಗಿದೆ. ಅದಕ್ಕೆ ಒಂದು ಒಳ್ಳೆ ಬೆತ್ತವನ್ನು ತೆಗೆದುಕೊಳ್ಳೋಣವೆಂದು ಬಂದೆ. ನನ್ನಲ್ಲಿ ಆಗಲೇ ಒಂದು ಬೆತ್ತವಿದೆ. ಆದರೆ ಎರಡಿದ್ದರೆ ಇನ್ನೂ ಮೇಲಷ್ಟೆ....".

" ಹಾಗಾದರೆ ಸರ್ಪಗಳಿಗೆ ಒಳ್ಳೇ ವಿಪತ್ಕಾಲ !....''

ಈ ಸಂಭಾಷಣೆಯನ್ನು ಕೇಳಿದ ರಂಗಪ್ಪನು ಥರ ಥರ ನಡುಗಿದನು. ನಡುಕದಲ್ಲಿ ಕೈಲಿದ್ದ ಪೆಟ್ಟಿಗೆಗಳು ಕೆಳಗೆ ಬಿದ್ದವು. ಇದನ್ನು ಕಂಡು ಒಡನೆ ಭುಜಂಗನೊಂದು ಲಲಿತೆಯ ತಂದೆಯೊಂದು ಪೆಟ್ಟಿಗೆಯನ್ನು ಎತ್ತಿ ಅವನ ಕೈಗೆ ಕೊಡುತ್ತಾ " ಮೈಯಲ್ಲಿ ಸರಿಯಿಲ್ಲವೇನೋ ಪಾಪ. ಪೆಟ್ಟಿಗೆಗಳು ಯಾಕೆ, ಯಾವುದಾದರೂ ಊರಿಗೆ ಹೋಗುತ್ತೀರಾ ? ''

ರಂಗಪ್ಪನು ಧ್ವನಿ ಬದಲಾಯಿಸಿಕೊಂಡು " ಹೌದು " ಎಂದನು.

ಲಲಿತೆಯ ತಂದೆಯು " ಯಾವ ಊರಿಗೆ ? '' " ನಾನು ಉ.... ಬ.... ಬದರಿಕಾಶ್ರಮಕ್ಕೆ ಹೋಗುತ್ತೇನೆ ". " ಓ ಹೋ ಯಾತ್ರೆಯೇ ? ಯಾವ ರೈಲಿನಲ್ಲಿ ? '

" ಮ.... ಮ.... ಮದ್ರಾಸ್ ರೈಲಿನಲ್ಲಿ ''.

" ಬಹಳ ದೂರದ ಪ್ರಯಾಣ. ಸರಿಯಾದ ಜಾಗ ಸಿಕ್ಕುವುದೋ ಇಲ್ಲವೋ. ಮೈಯಲ್ಲಿ ಬೇರೇ ಹುಷಾರಿಲ್ಲವೆಂದು ತೋರುತ್ತೆ. ನನಗೆ ರೈಲಿನವರೆಲ್ಲಾ ಗುರ್ತು. ಸ್ಟೇಷನ್ನಿಗೆ ಬಂದು ಸರಿಯಾಗಿ ಜಾಗಮಾಡಿಸಿ ಕೊಡುತ್ತೇನೆ.... ನಿಮ್ಮ ಹೆಸರೇನು ?"

" ಇಲ್ಲ, ಬೇಡಿ, ಬೇಡಿ ತೊಂದರೆ ತೆಗೆದುಕೊಳ್ಳಬೇಡಿ ''.

" ತೊಂದರೆಯೇನಿಲ್ಲ. ಮನಸ್ಸಿಗೆ ತುಂಬ ಬೇಜಾರಾಗಿದೆ. ಇತರರಿಗೆ ಒಂದು ಉಪಕಾರ ಮಾಡುವುದರಲ್ಲಾದರೂ ಅದನ್ನು ಮರೆಯೋಣವೆಂದು ಅಷ್ಟೆ. ಖಂಡಿತ ಸ್ಟೇಷನಿಗೆ ಬರುತ್ತೇನೆ...."

ರಂಗಪ್ಪನು ಪೆಟ್ಟಿಗೆಗಳನ್ನು ಅಲ್ಲಿಯೇ ಬಿಟ್ಟು ಕೆಟ್ಟೆನಲ್ಲಾ ಎಂದಂದು ಕೊಂಡು ಹೊರಟನು. ತನ್ನ ಛದ್ಮ ವೇಷವು ಅವರಿಗೆ ತಿಳಿದುಹೋಗಿರಬೇಕು, ಇಲ್ಲದಿದ್ದರೆ

ಹಾಗೇಕೆ ಸ್ಟೇಷನಿಗೆ ಬರುತ್ತೇನೆಂದು ಹೇಳಿದರು ? ಆ ದಿವಸ ಹೊರಡುವುದು ಸೂಕ್ತ ವಲ್ಲವೆಂದು ನಿರ್ಧರಿಸಿದನು. ಎಲ್ಲಕ್ಕೂ ವಿಘ್ನಗಳೇ ! ಯೋಚಿಸಿ ಯೋಚಿಸಿ ತಲೆ ನೋವು, ಸುತ್ತಿ ಮೈನೋವು, ಊಟವಿಲ್ಲದ ಸಂಕಟ ಎಲ್ಲಾ ಸೇರಿತು. ಮನೆಯಲ್ಲಿ ಮ್ಹಾಡಿಟ್ಟಿದ್ದ ರಾವಣಭಾತು, ಪಾಯಸಗಳು ಜ್ಞಾಪಕ ಬಂತು. ರಾವಣ ಭಾತೆಂದರೆ ಪ್ರಾಣ. ಬೇಗ ಬೇಗ ಮನೆಕಡೆ ಹೊರಟನು. ಬೀಗ ತೆಗೆದು ಒಳಗೆ ಹೋಗಲು ಮನೆಯೆಲ್ಲ ಕತ್ತಲು ಆದರೆ ಅಡಿಗೇಮನೆ ಊಟದಮನೆಯಲ್ಲಿ ಮಾತ್ರ ದೀಪ. ಕಾರಣ ವೇನಿರಬಹುದೆಂದು ಮೆಲ್ಲಗೆ ಹೆಜ್ಜೆ ಹಾಕುತ್ತಾ ಉಟದ ಮನೆಯೊಳಕ್ಕೆ ಹೋದನು. ಅಡಿಗೆ ಮನೆಯಿಂದ ಯಾರೋ ಬರುವಹಾಗಾಯಿತು. ಬಾಗಿಲಹಿಂದೇ ಅವಿತು ಕೊಂಡನು. ಕಂಡಿಯಲ್ಲಿ ನೋಡಿದರೆ ಇಬ್ಬರು ಕರಾಳಾಕಾರದ ವ್ಯಕ್ತಿಗಳು. ಗಟ್ಟಿ ಮುಟ್ಟಾಗಿ ರಾಕ್ಷಸರಂತಿದ್ದಾರೆ. ಒಳಗಿನಿಂದ ಎಲೆ ಮುಂತಾದ್ದನ್ನು ತಂದು ಅಚ್ಚು ಕಟ್ಟಾಗಿ ಹಾಕಿಕೊಂಡು ಅಡಿಗೆ ಮನೆಯಿಂದ ಅನ್ನ, ಪಲ್ಯ, ತೊವ್ವೆ, ರಾವಣಭಾತ ಪಾಯಸ ಮುಂತಾದವುಗಳನ್ನು ತಂದಿಟ್ಟುಕೊಂಡು ಲಕ್ಷಣವಾಗಿ ಊಟ ಮಾಡಲು ಪಕ್ರಮಿಸಿದಾರೆ ! ಊಟಮಾಡುತ್ತಾ ಒಬ್ಬ—

"ಲೋ ಮಲ್ಲ. ಒಳ್ಳೇ ಅದೃಷ್ಟ ಕಣೋ ನಮ್ಮದು. ಮನೆಯವರೆಲ್ಲಾ ಊರಿಗೆ ಹೋಗೋದ್ನ ನೋಡಿದ್ದು ನಮ್ಮ ಪುಣ್ಯ. ಏನೋ ಸಿಕ್ಕಿದ್ದು ಹೊಡ ಕೊಂಡು ಹೊಗೋಣಾಂತ ಬಂದರೆ, ಒಳ್ಳೇ ಭೇಷಾದ ಊಟಾನು ಸಿಕ್ಕಿತು !"

ಮಲ್ಲ: ರಾವಣ ಭಾತನ್ನು ಬಾಯಿಗೆ ತುರುಕಿ ಕೊಳ್ಳುತ್ತಾ "ಹ್ಞೂ"

"ಅಡಿಗೆ ಒಳ್ಳೇ ಚೆಂದಾಗಿ ಮಾಡಿದಾರೆ"

"ಹ್ಞೂ"

"ನಾವು ಕುಡಿದಿದ್ದ ಸಾರಾಯಿನ ಮಜಕ್ಕೂ ಈ ಊಟಕ್ಕೂ ಸರಿಹೋಯಿತು"

"ಹ್ಞೂ"

"ಏನು ಎಲ್ಲಾದಕ್ಕೂ 'ಹ್ಞೂ" ಅಂತೀಯ. ದೊಡ್ಡ ಮನಿಸ್ಸರಂಗೆ ಮಾತಾಡಿಕೊಂಡು ಉಣ್ಣಬೇಕೊ. ಸುಮ್ಮನೆ ಬಕಾಸುರನ ಹಾಗೆ ನುಂಗಿದರೆ ಆಯಿತೆ ?"

"ಲೋ, ರೇಗಿಸಬೇಡ. ನೀನೇ ಬಕಾಸುರ . ."

"ಯಾಕೋ ತಲೆ ತಿರುಗುತ್ತೇನೋ ? ಯಾರೋ ಬಕಾಸುರ ?"

"ನೀನು . . . ನಿಮ್ಮಪ್ಪ"

"ಅಪ್ಪ ಅಂತೀಯಾ, ಹಾಕ್ತೇನೆ ನೋಡು, ಅಂಗೆ ಮಲಗ್ಬಿಡಬೇಕು"

" ಹಾಕು ನೋಡೋಣ, ಏನ್ಕೈಯೇನು ಪಾಯಸ ತಿಂತದಾ ? "

ಇದನ್ನು ಕೇಳಿ ಮೊದಲನೆಯವನು ಕೈಲಿದ್ದ ರಾವಣಭಾತನ್ನು ಉಂಡೆಮಾಡಿ ಇನ್ನೊಬ್ಬನ ಮುಖಕ್ಕೆ ಹೊಡೆದನು. ಅವನು ಅದನ್ನು ಹಿಂತಿರುಗಿಸಿದನು. ಇಬ್ಬರಿಗೂ ಹತ್ತಿತು ಲಟಾಪಟಿ ಜಗಳ. ರಾವಣ ಭಾತು ಅನ್ಯಾಯವಾಗುವದನ್ನು ಕಂಡು ರಂಗಪ್ಪನು ಕೋಪದಿಂದ ತನ್ನ ಜೇಬಿನಲ್ಲಿದ್ದ ಬೀಗದ ಕೈ ಗೊಂಚಲನ್ನು ತೆಗೆದು ಬಾಗಿಲಿನ ಮರೆಯಿಂದ ಎದುರಿಗಿದ್ದವನ ಮೇಲೆ ಗುರಿಯಿಟ್ಟು ಹೊಡೆದನು. ಅದು ಅವನ ಹಣೆಗೆ ತಗುಲಿ ರಕ್ತ ಸುರಿಯಿತು. ಸರಿ, ರಕ್ತ ಕಂಡಕೂಡಲೇ ಶುರುವಾಯ್ತು ತುಮುಲ ಯುದ್ಧ ಅದುವರೆಗೂ ಅನ್ನ, ಪಾಯಸದಲ್ಲಿ ಹೊಡೆದಾಡುತ್ತಿದ್ದವರು ಪಾತ್ರೇ, ಸೌಟು, ಮಣೆ ಇವುಗಳಿಂದ ಹೊಡೆದಾಡಲು ಆರಂಭಿಸಿದರು. ಯುದ್ಧವು ಐದು ನಿಮಿಷಗಳ ಕಾಲ ಒಂದೇ ಬಿರುಸಿನಿಂದ ನಡೆಯಿತು. ಕೊನೆಗೆ ಒಬ್ಬನ ಕೈಯಲ್ಲಿ ಹಾರೆ ಮತ್ತೊಬ್ಬನ ಕೈಯಲ್ಲಿ ಒನಕೆ ಇವು ಸಿಕ್ಕಿಬಿದ್ದವು. ಇದಾದ ಮೇಲೆ ಬಹು ಬೇಗ ಯುದ್ಧವು ಕೊನೆಗಂಡಿತು. ಅರ್ಧ ನಿಮಿಷದಲ್ಲಿ ಒಬ್ಬರ ತಲೆಯನ್ನೊಬ್ಬರು ಒಡೆದುಹಾಕಿ, ಜ್ಞಾನ ತಪ್ಪಿ ರಕ್ತ ಸುರಿಸುತ್ತಾ ಬಿದ್ದರು. ಎಲ್ಲವೂ ನಿಶ್ಶಬ್ದವಾದ ಮೇಲೆ ರಂಗಪ್ಪನು ಬಾಗಿಲ ಹಿಂದಿನಿಂದೀಚೆಗೆ ಬಂದನು. ಇಬ್ಬರೂ ಅಲುಗಾಡದೆ ಬಿದ್ದಿದ್ದರು. ಸಾಹಸಪಟ್ಟು ಅವರಿಬ್ಬರನ್ನೂ ಹಗ್ಗದಿಂದ ಕಟ್ಟಿಹಾಕಿ ತೊಟ್ಟಿಯವರೆಗೂ ಎಳೆದುಕೊಂಡು ಹೋಗಿ ಮಲಗಿಸಿದನು. ಊಟದ ಮನೆಯ ಬಾಗಿಲನ್ನು ಮುಚ್ಚಿ ತನ್ನ ಗಡ್ಡ ಮೀಸೆಗಳನ್ನು ತೆಗೆದು ಹೊರಗೆ ಬಂದು ಬೀದಿಯಲ್ಲಿ ಹೋಗುತ್ತಿರುವವರ ಹತ್ತಿರ ಪೋಲೀಸ್ ಠಾಣೆಗೆ ಹೇಳಿಕಳುಹಿಸಿದನು.

ಪೋಲೀಸರಿಗೆ ಕಾಯುತ್ತಿದ್ದಾಗ ಒಳಗೆ ಹೋಗಲು ಮನಸ್ಸು ಬರದೇ ಮೆಟ್ಟಲು ಮೇಲೆಯೇ ನಿಂತನು. ತಂಗಾಳಿಯು ಹಿತಕರವಾಗಿ ಬೀಸುತ್ತಿತ್ತು. ಅಷ್ಟರಲ್ಲಿ ಕತ್ತಲಿನಿಂದ ಯಾರೋ ಮುಂದೆ ಬಂದ ಹಾಗಾಯಿತು.

" ರಂಗಪ್ಪನವರು ತಾನೆ ? ನಮಸ್ಕಾರ, ರಂಗಪ್ಪನವರೇ ! ನಿಮ್ಮ ಹತ್ತಿರ ಒಂದು ಮಾತಾಡಬೇಕಾಗಿದೆ - ಒಂದೇ ಒಂದು ಮಾತು ! " ನೋಡಿದರೆ ಪೈಲ್ವಾನ್ ಭುಜಂಗ !

ಆದರೆ ಭುಜಂಗನ ಎರಡರಷ್ಟಿದ್ದ ಕಳ್ಳರ ಮಲ್ಲಯುದ್ಧವನ್ನು ನೋಡಿ, ಆಗತಾನೆ ಹೊರಗೆ ಬಂದಿದ್ದ ರಂಗಪ್ಪನಿಗೆ ಮನಸ್ಸಿನಲ್ಲನ್ನಿಸಿತು " ಈ ಪ್ರಾಣಿಗೇಕೆ ನಾನು ಹೆದರಿದೆ ? ಇಂತಹವರು ನಾಲಕ್ಕು ಜನಗಳನ್ನು ಸೇರಿಸಿದರೂ ಆ ಕಳ್ಳರಲ್ಲಿ ಒಬ್ಬನ ಸಮಾನವಿಲ್ಲವಲ್ಲ ! " ಎಂದು.

ಘಟ್ಟಿಯಾಗಿ " ಯಾರದು ? ಭುಜಂಗರಾಯರೇ ? " ಎಂದನು. ಅಷ್ಟು ಹೊತ್ತಿಗೆ ಎಂಟೊಂಬತ್ತು ಜನ ಪೋಲೀಸಿನವರು ಒಂದು ಪೋಲೀಸ್ ಮೋಟಾರಿನಲ್ಲಿ ಬಂದಿಳಿದರು. ಅವರ ಮುಖ್ಯಸ್ಥನು " ರಂಗಪ್ಪನವರು ಯಾರು ? " ಎಂದನು.

" ನಾನೇ ರಂಗಪ್ಪ. ಒಳಗೆ ಹೋಗಿ, ತೊಟ್ಟಿಯಲ್ಲಿ ಅವರನ್ನು ಕಟ್ಟಿ ಉರುಳಿಸಿದ್ದೇನೆ. ನನ್ನ ಕೋಪದಲ್ಲಿ ಸ್ವಲ್ಪ ಒರಟಾಗಿಯೇ ವರ್ತಿಸಿದೆ. ಏಟು ಬಲವಾಗಿಯೇ ಬಿದ್ದಿರಬೇಕು. ಠಾಣೆಗೆ ಹೋದ ಒಡನೇ ಒಬ್ಬ ವೈದ್ಯನಿಗೆ ಹೇಳಿಕಳ್ಳಿಸಿರಿ ..."

" ಅಷ್ಟರ ಮಟ್ಟಿಗಾಗಿದೆಯೇ ? "

" ಹಾಗೇ ತೋರುತ್ತೆ. ನೀವೇ ನೋಡಿ...."

ಪೋಲೀಸಿನವರು ಒಳಗೆ ಹೋದರು. ಸ್ವಲ್ಪ ಹೊತ್ತಿನಮೇಲೆ ನಾಲ್ಕು ನಾಲ್ಕು ಜನ ಒಬ್ಬೊಬ್ಬ ಕಳ್ಳನನ್ನು ಹೊತ್ತುಕೊಂಡು ಹೊರಗೆ ಬಂದರು. ಮೋಟಾರಿನಲ್ಲಿ ಹಾಕಿಕೊಂಡಮೇಲೆ ಅವರ ಮುಖ್ಯಸ್ಥನು ಬಂದು,

" ಇಬ್ಬರೂ ಭಾರಿ ಕೇಡಿಗಳು. ಎಷ್ಟೋ ಖೂನಿ, ದರೋಡೆಗಳನ್ನು ಮಾಡಿದ್ದಾರೆ. ಅಷ್ಟು ದಿನಗಳಿಂದ ಹುಡುಕುತಿದ್ದೆವು, ಸಿಕ್ಕಲಿಲ್ಲ. ಈವತ್ತು ನಿಮ್ಮ ದಯದಿಂದ ಸಿಕ್ಕಿಬಿದ್ದರು. ಅದು ಹೇಗೆ ಒಬ್ಬೊಂಟಿಗರಾಗಿ ಅವರನ್ನು ಹಿಡಿದು ಕಟ್ಟಿಹಾಕಿದರೋ ದೇವರಿಗೇ ಗೊತ್ತು. ಅಂತು ಚೆನ್ನಾಗಿ ಏಟು ಬಿದ್ದಿದೆ. ಇನ್ನೂ ಜ್ಞಾನ ಬರಲಿಲ್ಲ" ಎಂದು ಹೇಳಿ ಹೊರಟುಹೋದನು.

ಇದನ್ನೆಲ್ಲಾ ನೋಡುತ್ತಿದ್ದ ಭುಜಂಗರಾಯನು " ಏನಿದು, ವಿಚಾರ ? " ಎಂದನು.

" ಓಹೋ, ಪೈಲ್ವಾನ್ ಭುಜಂಗರೆ ? ನೀವಿನ್ನೂ ಇಲ್ಲೇ ಇದ್ದಿರಾ ? ಮರೆತೇಬಿಟ್ಟೆ ... ಅವರೆ ? ಅವರಿಬ್ಬರೂ ಕಳ್ಳರು ಯಾರೂ ಇಲ್ಲದ್ದನ್ನು ನೋಡಿ ಒಳಗೆ ನುಗ್ಗಿ ಎಲ್ಲವನ್ನೂ ಹೊಡೆದುಕೊಂಡು ಹೋಗುವದರಲ್ಲಿದ್ದರು. ಅದಕ್ಕೆ ಸರಿಯಾಗಿ ನಾನು ಮನೆಗೆಬಂದೆ. ನೋಡಿ ರೇಗಿಹೋಯಿತು. ಇಬ್ಬರಿಗೂ ಚೆನ್ನಾಗಿ ನಾಲ್ಕು ಬಿಟ್ಟೆ .. ನೀವೇ ನೋಡಿದಿರಲ್ಲಾ ಅವರ ಸ್ಥಿತಿ! "

"ನೀವೊಬ್ಬರೇ.... ಅವರನ್ನು. .. ಆರೀತಿ...."

" ಹೌದು ನಾನೊಬ್ಬನೇ . .ಕೋಪ ಬಂದುಬಿಟ್ಟರೆ ನನ್ನ ಬಲ ನನಗೇ ಗೊತ್ತಾಗುವುದಿಲ್ಲ. ಅವರನ್ನು ಕೊಂದುಬಿಟ್ಟಿದ್ದರೆ, ನರಹತ್ಯಾಪಾತಕಕ್ಕೊಳಗಾಗುತ್ತಿದ್ದೆ. ಇನ್ನು ಮೇಲೆ ಕೋಪ ಬಂದಾಗ ಜ್ಞಾಪಕದಿಂದ ತಾಳ್ಮೆ ತಂದುಕೊಳ್ಳಬೇಕು" ಎಂದು ಜೇಬಿನಿಂದ ಕರವಸ್ತ್ರವನ್ನು ತೆಗೆದು ಒಂದು ಗಂಟು ಹಾಕಿಕೊಂಡನು.

" ಅದು ಹೋಗಲಿ, ನೀವೇನೊ ಮಾತಾಡಬೇಕೆಂದಿರಲ್ಲ --ಒಳಗೆ ಬನ್ನಿ, ಯಾರೂ ಇಲ್ಲ. ಸೇವಕರಿಗೆಲ್ಲಾ ರಜಾ ಕೊಟ್ಟಿದ್ದೇನೆ. ನಾವಿಬ್ಬರೇ ಇರಬಹುದು. "

ಪೈಲ್ವಾನ್ ಭುಜಂಗನು ಹಿಂದೆ ಸರಿಯುತ್ತಾ "ಇಲ್ಲ, ಇಲ್ಲ, ಏನೂ ಇಲ್ಲ ನಿಮ್ಮ ಮದುವೆ ಯಾವಾಗ ಕೇಳೋಣವೆಂದು ನಾನು ಬಂದೆ. ಊರಿನಲ್ಲಿರುವುದಿಲ್ಲ ,

ಒದಿಸುವುದಕ್ಕೆ ಕಳುಹಿಸುವುದಕ್ಕೆ ತಾರೀಖು ತಿಳಿದುಕೊಂಡು ಹೋಗೋಣವೆಂದು ಬಂದೆ ಅಷ್ಟೆ ..

" ಎಲ್ಲಿಗೆ ಹೋಗುತ್ತೀರಿ ? "

" ರಾಮೇಶ್ವರಕ್ಕೆ. ಅಲ್ಲಿಂದ ಕಾಶಿಗೆ ಹೋದರೂ ಹೋಗಬಹುದು... ಲಗ್ನ ಪತ್ರಿಕೆಯನ್ನು ರಾಮೇಶ್ವರಕ್ಕೆ ಕಳುಹಿಸಿ—ನನಗೆ ಸೇರುತ್ತೆ...."

" ಹಾಗಾದರೆ ಒಳಗೆ ಬರುವುದಿಲ್ಲವೆ ? ಅಲ್ಲ, ಅದೇನು ವಿಚಿತ್ರವಾದ ಜೋಡು ಹಾಕಿಕೊಂಡಿದ್ದೀರಿ ? "

" ನನಗೆ ಕಾಲಿನಲ್ಲಿ ಆಣಿ ಬೆಳೆದಿದೆ. ನಡೆಯುವುದಕ್ಕೆ ಆರಾಮವಾಗಿರಲಿ ಎಂದು — ಅಷ್ಟೆ "

" ಸರಿ ಹಾಗಾದರೆ ಒಳಗೆ ಬರುವುದಿಲ್ಲವೇ ?.... ನಮಸ್ಕಾರ "

" ನಮಸ್ಕಾರ "

" ನಮಸ್ಕಾರ "

ರಂಗಪ್ಪನು ಲಲಿತೆಯನ್ನು ಮದುವೆಯಾದಾಗ ಊರಿಗೆ ಊರೇ ಬಂದಿತ್ತು. ಎಲ್ಲರ ಬಾಯಲ್ಲಿಯೂ ಇವನು ಕಳ್ಳರನ್ನು ಹಿಡಿದು ಹಾಕಿದ ಸಾಹಸದ ಮಾತೆ. ಸರ್ಕಾರ ದವರು ಭಾರೀ ಇನಾಮನ್ನು ಕೊಟ್ಟಿದ್ದೇ ಅಲ್ಲದೇ ' ವೀರ ಬಹದ್ದೂರ್ ' ಎಂಬ ಬಿರುದನ್ನೂ ಸಹ ಕೊಟ್ಟರು. ಅಂತೂ ಎಲ್ಲಾ ರಾವಣಭಾತಿನ ಮಹಿಮೆ.... ...

—ಬೀರಣ್ಣ.

ನಮ್ಮ ಮನೆಯ ಸಣ್ಣ ಪಾಪ

ನಮ್ಮ ಮನೆಯಲೊಂದು ಸಣ್ಣ
ಪಾಪ ಇರುವುದು,
ಎತ್ತಿಕೊಳದೆ ಹೋದರದಕೆ
ಕೋಪ ಬರುವುದು ॥ ೧ ॥

ಕೋಪಬರಲು ಗಟ್ಟಿಯಾಗಿ
ಕಿರಿಚಿಕೊಳುವುದು,
ಕಿರಚಿಕೊಂಡು ತನ್ನ ಮೈಯ್ಯ
ಪರಚಿ ಕೊಳುವುದು ॥ ೨ ॥

ಮೈಯ್ಯ ಪರಚಿಕ್ಕೊಂಡು ಪಾಪ
ಅತ್ತು ಕರೆವುದು,
ಅಳಲು ಕಣ್ಣಿನಿಂದ ಸಣ್ಣ
ಮುತ್ತು ಸುರಿವುದು ॥ ೩ ॥

ಪಾಪ ಅತ್ತರಮ್ಮ ತಾನು
ಅತ್ತು ಬಿಡುವಳು
ಅಯ್ಯೊ ಪಾಪ ಎಂದು
ಮುತ್ತು ಕೊಡುವಳು ॥ ೪ ॥

ಪಾಪ ಪಟ್ಟು ಹಿಡಿದ ಹಟವು ಸಾರ್ತವಾಯಿತು,
ಕಿರಿಚಿ, ಪರಚಿ, ಅಳುವುದೆಲ್ಲ ಅರ್ಥವಾಯಿತು ॥ ೫

—ಭದ್ರ.

ನೀವು ಮೆಚ್ಚಿದರೆ

ಈ ಸಂಚಿಕೆಯಲ್ಲಿ ವಿಧ ವಿಧ ಲೇಖನಗಳಿವೆ. ಎಲ್ಲವೂ ನಿಮ್ಮನ್ನು ನಕ್ಕು ನಗಿಸಲೆಂದು—ಸಾರ್ಥಕವಾಗಿದೆ ಎಂದು ನಮಗೆ ತಿಳಿಯಬೇಕಾದರ ಈ ಪ್ರಶ್ನೆಮಾಲೆಗೆ ನೀವು ಉತ್ತರ ಕೊಡಬೇಕು.

ನಿಮ್ಮ ಹೆಸರು. ವಿಳಾಸ { ....
....

ನೀವು ಮೆಚ್ಚಿದ ಐದು ಲೇಖನಗಳ ಹೆಸರು { ....
....
....
....
....

ಕಾರಣಗಳು {

ಕೊರವಂಜಿಯನ್ನು ಹೆಚ್ಚಾಗಿ ಆಕರ್ಷಣೀಯವನ್ನಾಗಿ ಮಾಡಲು ಸೂಚನೆಗಳು ಇದ್ದಲ್ಲಿ. .. ... {

ಇದನ್ನು ಪೂರ್ತಿಮಾಡಿ ಕೊರವಂಜಿ ಕಾರ್ಯಾಲಯಕ್ಕೆ ಕಳುಹಿಸಿದರೆ, ಸಂಪಾದಕರಿಗೆ ಉತ್ತಮವಾದುದೆಂದು ತೋರಿದ ಉತ್ತರದ ಲೇಖಕರಿಗೆ ೨೫ ರೂ. ಕಳುಹಿಸಲ್ಪಡುತ್ತದೆ.

ಜೂನ್ ೧೫ ನೇ ತಾರೀಖಿನೊಳಗೆ ಉತ್ತರ ಬರೆಯಿರಿ.

ಬರಹಗಾರರಿಗೆ ಒಂದು ಮನವಿ

ಕೊರವಂಜಿಯ ಕಾರ್ಯಾಲಯಕ್ಕೆ ಓದುಗರ ಸಹಾನುಭೂತಿಯು ಸಂಪೂರ್ಣ ಉಂಟು. ಹಾಗಾಗಿ ಬಹುವಾರು ಲೇಖನಗಳು ದಿನಂಪ್ರತಿ ಬರುವುವು. ಅವಲ್ಲಿ ಹಲವು ಕೊರವಂಜಿಗೆ ಸಲ್ಲದವು. ಇನ್ನೂ ಕೆಲವು ಚಿಕ್ಕಪುಟ್ಟ ಹುಡುಗರಿಂದ ಬರೆಯಲ್ಪಟ್ಟು ಶಾಲೆಯ ವಾತಾವರಣವನ್ನು ಮೀರದೆ ಇರುವುವು. ಇನ್ನೂ ಕೆಲವು ಎಂದಾದರೂ ಒಮ್ಮೆ ಸ್ವಲ್ಪ ಮಾರ್ಪಾಡಾಗಿ ಕೊರವಂಜಿಯಲ್ಲಿ ಬರತಕ್ಕವುಗಳು. ಬಂದ ಲೇಖನಗಳ ಸಂಖ್ಯೆಯು ಹೆಚ್ಚಾದುದರಿಂದ, ಈ ಲೇಖನಗಳನ್ನೆಲ್ಲಾ ಬಂದ ತಿಂಗಳಿನಲ್ಲೇ ಪ್ರಕಟಿಸಲು ಅಸಾಧ್ಯ. ಹೀಗಾಗಿ ಕಾಲವಿಳಂಬವಾಗುತ್ತದೆ. ಪ್ರತಿಯೊಂದು ಕಾಗದಕ್ಕೂ-ಅಂಚೆ ವೆಚ್ಚ ಇಟ್ಟವುಗಳಿಗೂ ಕೂಡ-ಉತ್ತರ ಬರೆಯುವುದೆಂದರೆ ಒಬ್ಬಾತನ ಪೂರ್ಣ ಕೆಲಸವಾದೀತು. ಹಾಗೆ ಉತ್ತರ ಬರೆಯುವ ಕೆಲಸವೊಂದೇ ಮಾಡಲು ಕೊರವಂಜಿಯ ಕಾರ್ಯಾಲಯಕ್ಕೆ ಅಸಾಧ್ಯ— ಈಗಿನ ನೌಕರರ ಅಭಾವದ ಪರಿಸ್ಥಿತಿಯಲ್ಲಿ—

ಹಾಗಾಗಿ ನಮ್ಮ ಬೇಡಿಕೆಯೊಂದೇ ಬರಹಗಾರರು ದಯೆಯಿಟ್ಟು ತಮ್ಮಲ್ಲಿ ಒಂದು ಪ್ರತಿ ಇಟ್ಟುಕೊಳ್ಳಲಿ-ನಮಗೆ ಕಳಿಸಿದ ಪ್ರತಿಯನ್ನು ಹಿಂತಿರುಗಿ ನಿರೀಕ್ಷಿಸದಿರಲಿ, ಮರು ಜವಾಬನ್ನೂ ಅಪೇಕ್ಷಿಸದೆ ಇರಲಿ, ಕಾಲೋಚಿತವಾಗಿ ನಮಗೆ ಬೇಕಾದುದನ್ನು ಉಪಯೋಗಿಸಿಕೊಳ್ಳುತ್ತೇವೆ. ಅದಕ್ಕೆ ಮುನ್ನ ಲೇಖಕರಿಗೆ ಬರೆದು ತಿಳಿಸುತ್ತೇವೆ. ಲೇಖನವನ್ನು ಬರೆದು ಕಳಿಸಿ, ಪ್ರತಿಫಲವನ್ನೂ ಅಪೇಕ್ಷಿಸದೆ, ಒಂದು ಜವಾಬೂ ಬರೆಯದೆ ಹೋದರೆ, ಲೇಖಕರಿಗೆ ಕೋಪ ಬರುವುದು ಸಹಜ, ನ್ಯಾಯ. ಆದರೆ ಅವರುಗಳು, ಲೇಖಕ ಸಹಜವಾದ ಊಹೆಯಿಂದ ನಮ್ಮ ಕಷ್ಟಗಳನ್ನೂ ಮನಗಂಡು ನಮಗೆ ನೆರವಾದರೆ, ಖಂಡಿತ ನೌಕರರ ಅಭಾವವು ತಪ್ಪಿ, ಶಾಂತಿ ವಾತಾವರಣವು ಬಂದಾಗ್ಯೆ, ಅವರುಗಳ ಉಪಕಾರವನ್ನೂ ಸ್ಮರಿಸಿ, ಅವರ ಲೇಖನಗಳಿಗೆ, ನಮಗೆ ಸಾಧ್ಯವಾದ ಪುರಸ್ಕಾರವನ್ನು ಕೊಟ್ಟೇ ಕೊಡುತ್ತೇವೆ. ಕೊರವಂಜಿಯ ಸಂಪಾದಕರಿಗಾಗಲೀ, ಪ್ರಕಟನಕಾರರಿಗಾಗಲೀ, ಈ ಪತ್ರಿಕೆಯಿಂದ ಜೀವನ ನಡೆಸುವ ದುಃಸ್ಥಿತಿ ಬಂದಿಲ್ಲ. ಈ ಪತ್ರಿಕೆಯ ಆರ್ಥಿಕಾಭಿವೃದ್ಧಿಯಲ್ಲಿ ಲೇಖನಕಾರರು, ವ್ಯಂಗ್ಯ ಚಿತ್ರಕಾರರೂ ಪೂರ್ಣ ಭಾಗಿಗಳು. ಇದನ್ನು ಬಿಡಿಸಿ ಹೇಳಲೋಸುಗ, ಈ ಸಂಚಿಕೆಯ ಒಂದು ಪುಟವನ್ನು ಮೀಸಲಾಗಿಟ್ಟಿದ್ದೇವೆ.

ನಿಮ್ಮ ಸಹನೆ ಸೌಹಾರ್ದ ನಮಗೆ ಬೇಕೇ ಬೇಕು.

ಸಂಪಾದಕ.

ವಾಕ್ಚಿತ್ರದ ವಾರ್ಷಿಕ ಸಂಚಿಕೆ

ವರ್ಣರಂಜಿತ ಮೇಲು ಹೊದಿಕೆಯನ್ನು ತೊಟ್ಟು, ತುಂಬು ದೇಹದಿಂದ ಬಂದಿರುವ ವಾಕ್ಚಿತ್ರದ ವಾರ್ಷಿಕ ಸಂಚಿಕೆಯನ್ನು ಆದರದಿಂದ ಸ್ವಾಗತಿಸುತ್ತೇವೆ. ಶ್ರೀನಾಥರ ಸ್ಮಾರಕ, ನಾಡಿಗೇರ ಬುಲೆಟಿನ್, ಕುಣಿಯೋಣ ಬಾರ, ಕಾಂತಾರ ಕಾಮಿನಿ, ಭಾರತದ ವಾಕ್ಚಿತ್ರಗಳು ಮೊದಲಾದ ಹಲವಾರು ಹಿತವಾದ, ಪ್ರಚೋದಕವಾದ ಲೇಖನಗಳಿವೆ. ಸಂಪಾದಕರಂದಂತೆ-ವಿಚಾರದೃಷ್ಟಿಯಿಂದಲೂ, ವಿಶೇಷ ಸಂಚಿಕೆಯೇ ಆಗಿದೆ. ತಜ್ಞರನ್ನು ಲೇಖನ ರಂಗಕ್ಕೆ ಎಳೆದುದು ವಾಕ್ಚಿತ್ರದ ಹೆಮ್ಮೆ ಮಾತ್ರವಲ್ಲ, ಕನ್ನಡ ಪತ್ರಿಕೋದ್ಯಮಕ್ಕೇ ಹೆಮ್ಮೆಯೂ ಹೌದು. ಉ. ದಾ. ಶ್ರೀ ಎನ್. ಎಸ್. ರಾಜ್, ಶ್ರೀ ವೀರಭದ್ರಯ್ಯ, ಸಿನಿಮಾ ಗಾದೆಗಳು. ಇತ್ಯಾದಿ.

ವಿಷಯಗ್ರಹಣ ಮಾಡಿ, ಕಟು ಟೀಕೆಯನ್ನು ನಗೆಯ ಅಲೆಯ ಮೇಲೇರಿಸುವುದರಲ್ಲಿ ಶ್ರೀ ನಾಡಿಗೇರರ ಪ್ರತಿಭೆಯು ವಿಶಿಷ್ಟವಾದುದು. "ವಾಕ್ಚಿತ್ರ" ಶ್ರೀನಾಡಿಗೇರರ ನಗೆ ಮೂಡತನಕ್ಕೆ ಇನ್ನು ಮುಂದೆ ಇನ್ನೂ ಹೆಚ್ಚಾಗಿ ಅವಕಾಶವೀಯಲೆಂದು ನಮ್ಮ ಬಯಕೆ.

ಈ ಸರ್ವಕಾಲದಲ್ಲಿ, ಮುಗ್ಗಟ್ಟು ಕಾಲದಲ್ಲಿ, ಇಷ್ಟು ಅಂದವಾದ ಸಂಚಿಕೆಯನ್ನು ಹೊರತಂದು, ಓದುಗರಿಗೆ ಸವಿಯೂಟವಿತ್ತ, ಶ್ರೀ ಮಾ ನಾ ಚೌಡಪ್ಪನವರಿಗೂ, ವಾಕ್ಚಿತ್ರ ಕಾರ್ಯಾಲಯದವರಿಗೂ ನಮ್ಮ ಅಭಿನಂದನೆಗಳು.



ನಿಮ್ಮ ಹತ್ತಿರ ನನಗೇನೂ ಜಗಳ ಬೇಡ

— ಆದರೆ ನಿಮ್ಮನೆ ಎಂಜಲೆಲೆ ನೆಕ್ಕೋ ನಾಯಿಯು ಮೇಲೆ— ದೇವರ ದಯೆ ಇರಬೇಕು ಅಷ್ಟೆ



ಏನಯ್ಯಾ, ಸುಣ್ಣದಪಟ್ಟಿ ಹಾಕೋಕ್ಕೆ ಆಗಲೇ ಬಂದುಬಿಟ್ಟೆ-

ಇನ್ನೂ ವೈಸರಾಯರು ಪಟ್ಟಕ್ಕೆ ಬಂದು ತಿಂಗಳಾಗಿಲ್ಲ ... ಅಷ್ಟರಲ್ಲೇ ಇಲ್ಲಿಗೆ ಬರುತ್ತಾರೆಯೇ....?

ನಿಮ್ಮನ್ನು ಆಶ್ಚರ್ಯಗೊಳಿಸುವ ಮಹತ್ತರ ದೃಶ್ಯಪ್ರದರ್ಶನ

ಸಾರಥಿಯವರ ದೃಶ್ಯವೆಂದರೆ

ಉತ್ತಮ ದರ್ಜೆಯ ದೃಶ್ಯವೆಂದೆ

"ಮಾಯಾ ಲೋಕಂ"

ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ
ನಟೀನಟರ ಸಮೂಹ

ಕನ್ನಾಂಬ,
ಸಿ. ಎಸ್. ಆರ್.
ಆಂಜನೇಯುಲು,
ಕಮಲಾ ಕೋಟ್ನೀಸ್,
ಜಿ. ವಿ. ಸುಬ್ಬರಾವ್,
ಬೆಜವಾಡ ರಾಜರತ್ನಂ,



ಲಂಕಾ ಸತ್ಯಂ, ಸುಪ್ರಸಿದ್ಧ ಕನ್ನಡ ತಾರೆ ಎಂ.ವಿ. ರಾಜಮ್ಮ

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಂಹಂ

FOR MYSORE STATE, SOUTH CANARA & COORG :

Vijayalakshmi & Co.

BOOKING THROUGH :

A. V. RAMANAMURTY

247, Gandhi Nagar :: Bangalore City

Printed by B. S Iyengar, Bangalore City
Publisher—B. N. Gupta, Editor—M Shivaram

ಮೈಸೂರು ವ್ಯವಸಾಯ ಮತ್ತು ಸಂಬಂಧಪಟ್ಟ ಉದ್ಯಮಗಳ ಕಂಪೆನಿ ಲಿಮಿಟೆಡ್, ಶಿವಮೊಗ್ಗ.

ಜಯೋಽಸ್ಮಿ ವ್ಯವಸಾಯೋಽಸ್ಮಿ—ಗೀತಾ

ಕುಟುಂಬ ರಕ್ಷಣೆಗಾಗಿ, ಸಂಪಾದನೆಯ ಕೆಲವು ಭಾಗವನ್ನು ವಿನಿಯೋಗಿಸಿ ತರೀಜಮೀನು ಕೊಳ್ಳಬೇಕೆಂಬ ಅಪೇಕ್ಷೆ ಈಗಿನ ಸನ್ನಿವೇಶದಲ್ಲಿ ಅನೇಕರ ಮನಸ್ಸಿನಲ್ಲಿ ಬಂದಿದೆ. ಆದರೆ (1) ಜಮೀನು ನೋಡಿಕೊಳ್ಳುವ ಕಷ್ಟ. (2) ಗುತ್ತಿಗೆ ವಸೂಲು ಮಾಡುವ ರೇಜಿಗೆ (3) ನಾವು ಕಷ್ಟಪಟ್ಟು ಮಿಗಿಸಿದ ಹಣದಲ್ಲಿ ಕೊಂಡ ಜಮೀನನ್ನು ನಮ್ಮ ಮಕ್ಕಳು ಸರಿಯಾಗಿ ನೋಡಿಕೊಳ್ಳುವರೇ ಎಂಬ ಅನುಮಾನ. (4) ಜಮೀನು ಈಗ ಲಾಭಕರವಾಗಿದ್ದರೂ ಮುಂದೆ ಧಾರಣೆಗಳು ಬಿದ್ದರೆ ನಷ್ಟವಾಗಬಹುದು ಎಂಬ ಶಂಕೆ, ಈ ಅಡಚಣೆಗಳಿಂದ ಅನೇಕರು ಹಿಂತೆಗೆಯುತ್ತಿದ್ದಾರೆ.

ಮೇಲ್ಕಂಡ ಕಂಪೆನಿಯು ಈ ಸಮಸ್ಯೆಯನ್ನು ಪರಿಹರಿಸಲು ಒಂದು ಪ್ರಯತ್ನ ಮಾಡಿದೆ. ಈ ಕಂಪೆನಿಯ ಪ್ರಧಾನ ಕಾರ್ಯಕ್ರಮವು ಈರೀತಿ ಇದೆ.

(1) ನೀರಾವರಿ ಮತ್ತು ರೈತಾಪಿ ಸೌಕರ್ಯಗಳಿದ್ದು, ಅನುಕೂಲದ ಧಾರಣೆಯಲ್ಲಿ ಜಮೀನು ದೊರೆಯುವ ಪ್ರದೇಶವನ್ನು ಚುನಾಯಿಸಿ, ಅಲ್ಲಿ ದೊಡ್ಡ ತಾಕಿನಲ್ಲಿ ಜಮೀನುಗಳನ್ನು ಕಂಪೆನಿಯು ಖರೀದಿಗೆ ಕೊಳ್ಳುವುದು. ಶಿವಮೊಗ್ಗ ತಾಲ್ಲೋಕು, ಭದ್ರಾನಾಲಾ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಸೌಕರ್ಯಗಳಿರುವುದರಿಂದ ಅಲ್ಲಿ ಸುಮಾರು ಎರಡು ಸಾವಿರ ಎಕರೆಗಳಷ್ಟು ಜಮೀನನ್ನು ಕೊಳ್ಳುವುದು.

ಒಂದೇ ತಾಕಿನಲ್ಲಿ ಹೆಚ್ಚು ವಿಸ್ತೀರ್ಣದ ಜಮೀನನ್ನು ಹೊಂದುವುದರಿಂದ ರೈತರಿಗೆ ಸೌಕರ್ಯಗಳನ್ನೊದಗಿಸಿ ಜಮೀನಿನ ಫಸಲನ್ನು ಹೆಚ್ಚಿಸಲು ಸಾಧ್ಯವಾಗುವುದು ಮತ್ತು ಗುತ್ತಿಗೆ ವಸೂಲು ಮಾಡುವುದು ಸುಲಭವಾಗುವುದು.

(2) ವ್ಯವಸಾಯವು ಹೆಚ್ಚು ಲಾಭಕರವಾಗುವಂತೆ ವ್ಯವಸಾಯಕ್ಕೆ ಸಂಬಂಧಪಟ್ಟ ಉದ್ಯಮಗಳನ್ನು ಎಂದರೆ ಭತ್ತದ ಮಿಲ್ಲು, ಬೆಲ್ಲ ಮತ್ತು ಸಕ್ಕರೆ ಕಾರ್ಖಾನೆ, ಎಣ್ಣೆ ತಯಾರಿಕೆ ಕಾರ್ಖಾನೆ, ಮರ ಕುಯ್ಯುವ ಕಾರ್ಖಾನೆ ಮುಂತಾದುವನ್ನು ಕಂಪೆನಿಯು ಸ್ಥಾಪಿಸಿ ನಡೆಸುವುದು.

(3) ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ಅಪೇಕ್ಷಿಸುವ ಷೇರುದಾರರಿಗೆ ಅವರ ಷೇರು ಹಣದ ಮೇಲಿನ ಲಾಭಾಂಶವನ್ನು (ಡಿವಿಡೆಂಡ್) ನಗದಾಗಿ ಹಂಚುವ ಬದಲು ಭತ್ತದ ರೂಪದಲ್ಲಿ (ರೇಷನ್ ಪರಿಮಿತಿಗೆ ಒಳಪಟ್ಟು) ಸರಬರಾಯಿಮಾಡಲು ಏರ್ಪಾಟು ಮಾಡಲಾಗುವುದು.

ಅಧಿಕೃತ ಬಂಡವಾಳ :- ರೂ. ೫೦,೦೦.೦೦೦

ಈಗ ಹಂಚಲಿರುವ ಬಂಡವಾಳ :- ರೂ. ೨೦,೦೦,೦೦೦

(ಹತ್ತು ರೂಪಾಯಿ ಮೌಲ್ಯದ ೨,೦೦,೦೦೦ ಷೇರುಗಳಾಗಿ ವಿಭಾಗಿಸಿದೆ)

ಅಧ್ಯಕ್ಷರು:— ಧರ್ಮಪ್ರಕಾಶ ಶ್ರೀ ಎಲ್. ಎಸ್. ವೆಂಕಾಜಿರಾವ್

ಭೂಪಾಳಂ ಆರ್. ಚಂದ್ರಶೇಖರಯ್ಯ, B A.,
ಭೂಪಾಳಂ ಆರ್. ಪುಟ್ಟನಂಜಪ್ಪ, M A., LL.B , } ಮ್ಯಾನೇಜಿಂಗ್ ಡೈರೆಕ್ಟರ್‌ಗಳು.

ಬಿ ಕೃಷ್ಣಮೂರ್ತಿ, B A , B T., ಕಾರ್ಯದರ್ಶಿ



Directed by
B.N.REDDI
CAMERA...BARTLEY
SOUND....DINSHAW
ART........NAGOOR
Studio
NEWTONE
స్వర్గసీమ